ಹರಿಹರ ಮಹಾಕವಿಯ
ವಚನ ಗಿರಿಜಾಕಲ್ಯಾಣ



ಡಾ|| ಜಿ. ಕೃಷ್ಣಪ್ಪ

ಕಾಮಧೇನು
ಪುಸ್ತಕ ಭವನ

ಡಾ॥ ಜಿ. ಕೃಷ್ಣಪ್ಪ

ಡಾ॥ ಜಿ. ಕೃಷ್ಣಪ್ಪ (೧೯೪೮) ಬೆಂಗಳೂರಿನವರು. ಇವರು ಸಹೃದಯ ವಿಮರ್ಶಕರು. ಕವಿ ದ.ರಾ. ಬೇಂದ್ರೆಯವರ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದ್ದು ಮಾತ್ರವಲ್ಲದೆ ತಮ್ಮ ಬದುಕಿನ ಬಹುಭಾಗವನ್ನು ಬೇಂದ್ರೆ ಸಾಹಿತ್ಯ ಪ್ರಸಾರಕ್ಕಾಗಿ ಸಮರ್ಪಿಸಿ ಕೊಂಡಿದ್ದಾರೆ. ಬೇಂದ್ರೆ ಕಾವ್ಯದ ಓದಿಗೆ ಹೊಸ ಆಯಾಮವನ್ನು ಒದಗಿಸಿ ಕೊಟ್ಟಿದ್ದಾರೆ.

ಪ್ರಾದೇಶಿಕ ಸಾರಿಗೆ ಕಛೇರಿಯಲ್ಲಿ ಸೇವೆ ಮಾಡಿ ಸಹಾಯಕ ಪ್ರಾದೇಶಿಕ ಸಾರಿಗೆ ಅಧಿಕಾರಿಯಾಗಿ ೨೦೦೬ರಲ್ಲಿ ನಿವೃತ್ತರಾಗಿದ್ದಾರೆ.

ಮೈಸೂರು ವಿಶ್ವವಿದ್ಯಾಲಯದಿಂದ 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ' ಎಂಬ ವಿಷಯದಲ್ಲಿ ಪಿಎಚ್.ಡಿ., ಪದವಿಯನ್ನು ೨೦೦೦ದಲ್ಲಿ ಪಡೆದಿದ್ದಾರೆ. 'ಹಾಡುಹಕ್ಕಿ ಅಂಬಿಕಾತನಯದತ್ತ', 'ಡಿ.ಆರ್. ಬೇಂದ್ರೆ', 'ನಾಕುತಂತಿ ಒಂದು ಟಿಪ್ಪಣಿ', 'ಹೂಂತದ ಹುಣಸಿ', 'ಬರೆಹದಲ್ಲಿ ಬೇಂದ್ರೆಯವರ ಬದುಕು', 'ಅಂತರಂಗದತ್ತನಯನ', 'ರಸ್ತೆ ನಿಯಮಗಳು' ಕೃತಿಗಳನ್ನು ರಚಿಸಿದ್ದಾರೆ. ಇವರು ಸರಳ ಕನ್ನಡದಲ್ಲಿ ರಚಿಸಿರುವ ಮಹಾಕವಿ ಲಕ್ಷ್ಮೀಶನ 'ವಚನ ಜೈಮಿನಿ ಭಾರತ' ಜನಮನ್ನಣೆ ಪಡೆದ ಕೃತಿಯಾಗಿದೆ.

ಇತ್ತೀಚೆಗೆ 'ಸುಧಾ' ವಾರ ಪತ್ರಿಕೆಯಲ್ಲಿ (೬–೧೨–೨೦೧೨ ರಿಂದ ೨೪–೧–೨೦೧೩ರವರೆಗೆ ೮ ವಾರಗಳು) ಮಹಾಕವಿ ಹರಿಹರನ ಗಿರಿಜಾಕಲ್ಯಾಣವನ್ನು ಸರಳಗನ್ನಡದಲ್ಲಿ ನೀಡಿ ಹಳಗನ್ನಡ ಸಾಹಿತ್ಯವನ್ನು ಜನಪ್ರಿಯಗೊಳಿಸಿದ್ದಾರೆ. ಅದು 'ವಚನ ಗಿರಿಜಾಕಲ್ಯಾಣ' ಕೃತಿಯಾಗಿದೆ.

೧೯೮೮ ರಿಂದ ಶಾಲಾಕಾಲೇಜುಗಳಲ್ಲಿ ದ.ರಾ. ಬೇಂದ್ರೆ ಕವನ ಗಾಯನ ಸ್ಪರ್ಧೆಯನ್ನು ಏರ್ಪಡಿಸಿ, ದ.ರಾ. ಬೇಂದ್ರೆ ಕೃತಿಗಳನ್ನು ಬಹುಮಾನವಾಗಿ ನೀಡುತ್ತ ಬಂದಿದ್ದಾರೆ. ಈವರೆಗೆ ೪೨೩ಕ್ಕೂ ಹೆಚ್ಚು ಬೇಂದ್ರೆ ಕೇಂದ್ರಿತ ಕಾರ್ಯಕ್ರಮಗಳನ್ನು ನಾಡಿನಾದ್ಯಂತ ನಡೆಸಿದ್ದಾರೆ. ಬೆಂಗಳೂರಿನಲ್ಲಿ ತಮ್ಮ 'ದ.ರಾ. ಬೇಂದ್ರೆ ಕಾವ್ಯ ಕೂಟ'ದ ಅಡಿಯಲ್ಲಿ ದ.ರಾ. ಬೇಂದ್ರೆ ಕಾವ್ಯ ಕುರಿತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ರಾಜ್ಯ ಮಟ್ಟದ ವಿಮರ್ಶಾ ಸ್ಪರ್ಧೆ ಏರ್ಪಡಿಸಿ ಸುಮಾರು ರೂ. ೧೦,೦೦೦/– ನಗದು ಬಹುಮಾನ ನೀಡುತ್ತ ಬಂದಿದ್ದಾರೆ. 'ಕುಣಿಯೋಣು ಬಾರ ಬೇಂದ್ರೆಯೊಡನೆ' ರಂಗರೂಪಕ, 'ಜಾತ್ರೆ' ನಾಟಕ ನಿರ್ದೇಶನ, 'ಕಂಸಾಳೆಯಲ್ಲಿ ಬೇಂದ್ರೆ ಕಾವ್ಯ ಪ್ರಯೋಗ'ಗಳನ್ನು ನಡೆಸಿ ಬೇಂದ್ರೆ ಕಾವ್ಯವನ್ನು ಜನಮನಕ್ಕೆ ತಲುಪಿಸುವಲ್ಲಿ ಯಶಸ್ವಿಯಾಗಿದ್ದಾರೆ.

ಇವರು ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡದಿಂದ ೨೦೦೩ರಲ್ಲಿ ಬೇಂದ್ರೆ ಫೆಲೋಷಿಪ್ ಪಡೆದು ಬೇಂದ್ರೆಯವರ 'ಬಾಲ್ಯಕಾಂಡ' ಕುರಿತು ಅಧ್ಯಯನ ನಡೆಸಿದ್ದಾರೆ. ಅದು 'ಬರೆಹದಲ್ಲಿ ಬೇಂದ್ರೆಯವರ ಬದುಕು' ಕೃತಿಯಾಗಿ ಪ್ರಕಟಗೊಂಡಿದೆ.

ಇವರ ವಿಶಿಷ್ಟ ಸಾಹಿತ್ಯ ಪ್ರಸರಣ ಕಾರ್ಯವನ್ನು ಗುರುತಿಸಿ ಕನ್ನಡ ಪುಸ್ತಕ ಪ್ರಾಧಿಕಾರವು ೨೦೧೧ರ ಡಾ. ಜಿ.ಪಿ. ರಾಜರತ್ನಂ ಕನ್ನಡ ಸಾಹಿತ್ಯ ಪರಿಚಾರಕ ಪ್ರಶಸ್ತಿ ನೀಡಿ ಗೌರವಿಸಿದೆ.

ಹರಿಹರ ಮಹಾಕವಿಯ

ವಚನ
ಗಿರಿಜಾ ಕಲ್ಯಾಣ

ಡಾ. ಜಿ. ಕೃಷ್ಣಪ್ಪ

ಕಾಮಧೇನು
ಪುಸ್ತಕ ಭವನ

ನಂ. ೫/೧, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು-೫೬೦ ೦೨೦

VACHANA GIRIJA KALYANA : Girija Kalyana in prose by
Dr. G. Krishnappa,
22, Sri Gurudatta Nilaya, 1st Cross, Netaji Nagara, Mattikere,
Bengaluru - 560 054. Mobile : 99721 09209

Published by : Prof. D.K. Shyamasundara Rao for
Kamadhenu Pustaka Bhavana,
5/1, Nagappa Street, Sheshadripura, Bengaluru - 560 020.

First Edition	:	2013
Pages	:	104
Copies	:	1000
Copy Right	:	'Sudha' Weekly
Paper	:	70 GSM Maplitho
Price	:	₹ 90/-

ವಚನ ಗಿರಿಜಾ ಕಲ್ಯಾಣ

ಲೇಖಕರು : ಡಾ. ಜಿ. ಕೃಷ್ಣಪ್ಪ, # ೨೨, ಶ್ರೀ ಗುರುದತ್ತ ನಿಲಯ,
ಮೊದಲನೇ ಅಡ್ಡರಸ್ತೆ, ನೇತಾಜಿನಗರ, ಮತ್ತಿಕೆರೆ, ಬೆಂಗಳೂರು-೫೬೦ ೦೫೪.
ಜಂಗಮವಾಣಿ : ೯೯೭೨೧ ೦೯೨೦೯

ಪ್ರಕಾಶಕರು : ಪ್ರೊ. ಡಿ.ಕೆ. ಶ್ಯಾಮಸುಂದರರಾವ್, ಕಾಮಧೇನು ಪುಸ್ತಕ ಭವನ,
ನಂ. ೫/೧, ನಾಗಪ್ಪ ಸ್ಟ್ರೀಟ್, ಶೇಷಾದ್ರಿಪುರ, ಬೆಂಗಳೂರು – ೫೬೦ ೦೨೦.

ಮೊದಲ ಮುದ್ರಣ	:	೨೦೧೩
ಪುಟ	:	೧೦೪
ಪ್ರತಿಗಳು	:	೧೦೦೦
ಕೃತಿಸ್ವಾಮ್ಯ	:	'ಸುಧಾ'ವಾರಪತ್ರಿಕೆ
ಬೆಲೆ	:	₹ ೯೦/–

ಮುದ್ರಣ : ಪರಿಶ್ರೀ ಪ್ರಿಂಟರ್ಸ್, ನಂ. 38/2, 2ನೇ ಅಡ್ಡರಸ್ತೆ, ನಾಗಪ್ಪ ಬ್ಲಾಕ್,
ಶ್ರೀರಾಮಪುರಂ, ಬೆಂಗಳೂರು – 560 021, ✆ 2312 8286,
Email: info@parishree.com; Web: www.parishree.com

ಅರ್ಪಣೆ

ಸನ್ಮಾನ್ಯ ಶ್ರೀ ಕೆ.ಎನ್. ಶಾಂತಕುಮಾರ್
ಅವರಿಗೆ

ಮುನ್ನುಡಿ

ಕೋಲಾರ ಜಿಲ್ಲೆಗೆ ಸೇರಿದ ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜಿನಲ್ಲಿ ನಾನು ಕನ್ನಡ ಅಧ್ಯಾಪಕನಾಗಿ ಕಾರ್ಯನಿರ್ವಹಿಸಲು ತೊಡಗಿದಾಗ (೧೯೮೭) ಅಲ್ಲಿಯ ಪರಿಸರವೇ ಅತ್ಯಂತ ಕುತೂಹಲ ಮತ್ತು ಆಶ್ಚರ್ಯಕ್ಕೆ ಕಾರಣವಾಗಿತ್ತು. ಯಾಕೆಂದರೆ ಅದೊಂದು ದ್ವಿಭಾಷಿಕ ಪ್ರದೇಶ. ಎಲ್ಲೆಲ್ಲೂ ಕಡುಬಡತನ, ಕಣ್ಣಿಗೆ ಗೋಚರವಾಗುವ ಗುಡಿಸಲುಗಳು, ಎತ್ತರವಾದ ಮಣ್ಣಿನ ದಿಣ್ಣೆಗಳು. ತಮಿಳರ ಸಂಖ್ಯೆ ಅಪಾರ. ಆದರೂ ಕನ್ನಡದ ಬಗೆಗಿನ ಕಳಕಳಿಗೇನೂ ಬರಬಂದಿರಲಿಲ್ಲ. ಅಲ್ಲಿಯ ಕನ್ನಡಿಗರು, ಕನ್ನಡ ಪರಸಂಘಟನೆಗಳು, ರಂಗಭೂಮಿ ಕಲಾತಂಡಗಳು, ಜನಪರಸಂಘಟನೆಗಳು ಅತ್ಯಂತ ಸಕ್ರಿಯವಾಗಿದ್ದವು. ಸಮೀಪದ ಬೆಮೆಲ್ ನಗರವಂತೂ 'ನೀನಾಸಂ'ತರ ಕಾಣಿಸುತ್ತಿತ್ತು.

ಜಿ. ಜ್ಞಾನಾನಂದ ಅವರು ಕೋಲಾರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿದ್ದ ಸಂದರ್ಭ. ಕೃಷ್ಣಪ್ಪನವರು ಕೆ.ಜಿ.ಎಫ್. ಸಮೀಪದ ದೊಡ್ಡಪೊನ್ನಾಂಡಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ನಟರಾದ ನಂಗಲಿ ಎಂ. ಶಿವಾನಂದಂ, ಮುಖ್ಯೋಪಾಧ್ಯಾಯರಾದ ಎಂ. ಬೆಳ್ಳಾರಪ್ಪ, ಗಾಯಕರಾದ ಬಿ.ಎಂ. ಆಂಜನೇಯರೆಡ್ಡಿ ಅವರ ಜೊತೆಗೂಡಿ, ಪರಿಷತ್ತಿನ ಸಹಕಾರದೊಂದಿಗೆ ಕಾರ್ಯಕ್ರಮವೊಂದನ್ನು ಏರ್ಪಡಿಸಿದ್ದರು. ಕುವೆಂಪು – ಬೇಂದ್ರೆ ಸ್ಮರಣೆಯ ಕಾರ್ಯಕ್ರಮ. ನನ್ನನ್ನೂ ಅಲ್ಲಿಗೆ ಆಹ್ವಾನಿಸಿದ್ದರು. ನಾನು ಕುವೆಂಪು ಅವರನ್ನು ಕುರಿತು ಮಾತನಾಡಿದೆ. ಕೃಷ್ಣಪ್ಪ ಅವರು ಬೇಂದ್ರೆ ಅವರನ್ನು ಕುರಿತು ಮಾತನಾಡಿದರು. ಅಕಾಡಮಿಕ್ ವಲಯದ ನನಗೆ ಕೃಷ್ಣಪ್ಪನವರ (ಆರ್.ಟಿ.ಓ. ಅಧಿಕಾರಿ) ಭಾಷಣ ಕೇಳಿ ಆಶ್ಚರ್ಯವಾಯಿತು. ಅಷ್ಟು ಸೊಗಸಾಗಿ ಮಾತನಾಡಿದರು. ಸಾಮಾನ್ಯ ಜನರಿಗೆ ಬೇಂದ್ರೆ ಅವರನ್ನು ಪರಿಚಯಿಸಿದ ರೀತಿಗೆ ನಾನು ಮಾರುಹೋದೆ. ಕುರ್ತಕೋಟಿ, ಶಂಕರ ಮೊಕಾಶಿ ಪುಣೇಕರ, ಆಮೂರ – ಮುಂತಾದವರ ಬೇಂದ್ರೆ ಕುರಿತಾದ ಕ್ಲಿಷ್ಟ ಬರವಣಿಗೆಗಳ ಬಗ್ಗೆ ಯೋಚಿಸತೊಡಗಿದೆ. ಅಂದಿನಿಂದ ಜಿ. ಕೃಷ್ಣಪ್ಪ ಯಾರು? ಬೇಂದ್ರೆಗೇಳು ಹಚ್ಚಿಕೊಂಡದ್ದೇಕೆ ಇತ್ಯಾದಿಗಳ ಬಗ್ಗೆ ಹುಡುಕಾಟ ನಡೆಸಿದೆ.

ಆ ವೇಳೆಗಾಗಲೆ ಕೃಷ್ಣಪ್ಪ ಅವರು ಆರ್.ಟಿ.ಓ. ಅಧಿಕಾರಿಯಾಗಿ, ಕನ್ನಡಾಭಿಮಾನಿಯಾಗಿ ಆ ಪರಿಸರದಲ್ಲಿ ತನ್ನದೇ ಆದ ಛಾಪು ಮೂಡಿಸಿದ್ದರು. ಅವರು ಮೋಟಾರು ವಾಹನಗಳ ಹಿರಿಯ ನಿರೀಕ್ಷಕರಾಗಿದ್ದರು. ದಿನನಿತ್ಯ ವಾಹನ ತಪಾಸಣೆ ಕೆಲಸ ಅವರದಾಗಿತ್ತು. ಲೈಸನ್ಸ್ ಇಲ್ಲದೆ ವಾಹನ ನಡೆಸುವವರೇನಾದರೂ ಅದರಲ್ಲೂ ಅನ್ಯಭಾಷಿಕರು ಇವರ ಕೈಗೆ ಸಿಕ್ಕಿಬಿಟ್ಟರೆ ದಂಡ ವಸೂಲಿಗಿಂತ ಕನ್ನಡ ಮಾತನಾಡಿದರೂ ಸಾಕು ಅವರನ್ನು ಬಿಡುತ್ತಿದ್ದರು. 'ಕೊನೇ ಪಕ್ಷ ನನ್ನನ್ನು ಕನ್ನಡದಲ್ಲಿ ಬೈಯ್ಯಿರಿ' ಎಂದು ಹೇಳಿ, ಆ ಮೂಲಕವಾದರೂ ಕನ್ನಡದಲ್ಲಿ ಮಾತನಾಡುವಂತೆ ಮಾಡಿ ಅವರನ್ನ ಬಿಡುಗಡೆಗೊಳಿಸುತ್ತಿದ್ದರು. ವಾಹನ ನಡೆಸಲು ಪರವಾನಗಿಗೆ ಬರುವ ಅನ್ಯಭಾಷಿಕರಿಗೂ ಇದೇ ಮಾನದಂಡವನ್ನು ಬಳಸುತ್ತಿದ್ದರು. ಇದು ಕೃಷ್ಣಪ್ಪ ಅವರ ಕನ್ನಡಪರ ಕಾಳಜಿ.

ಮೈಸೂರು ವಿಶ್ವವಿದ್ಯಾನಿಲಯದಲ್ಲಿ ಪ್ರೊ. ಎಚ್.ಎಸ್. ಹರಿಶಂಕರ್ ಅವರ ಮಾರ್ಗದರ್ಶನದಲ್ಲಿ ಬೇಂದ್ರೆ ಸಾಹಿತ್ಯವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದರು. 'ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ' ಎಂಬ ವಿಷಯದ ಮಹಾಪ್ರಬಂಧಕ್ಕೆ ಡಾಕ್ಟರೇಟ್ ಪದವಿಯನ್ನೂ ಪಡೆದರು. ಪಿಹೆಚ್.ಡಿ., ಮೌಖಿಕ ಪರೀಕ್ಷೆ ನಡೆಯುವ ವೇಳೆಗಾಗಲೆ ನಾನು ಮೈಸೂರು ವಿ.ವಿ. ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಗೆ ಪ್ರಾಧ್ಯಾಪಕನಾಗಿ (೧೯೯೬) ನೇಮಕಗೊಂಡಿದ್ದೆ. ಮೌಖಿಕ ಪರೀಕ್ಷೆಯಂದು ಬೇಂದ್ರೆ ಸಾಹಿತ್ಯವನ್ನು ಕುರಿತ ಡಾ. ಜಿ. ಕೃಷ್ಣಪ್ಪ ಅವರ ಉಪನ್ಯಾಸವನ್ನು ಕೇಳುವ ಮತ್ತೊಂದು ಅವಕಾಶ ನನಗೆ ಲಭಿಸಿತ್ತು.

ತಮ್ಮ ಜೀವಿತದ ಬಹುಭಾಗವನ್ನು ಕವಿ ಬೇಂದ್ರೆಯನ್ನು ಅರ್ಥೈಸಿಕೊಳ್ಳಲು ತಮ್ಮನ್ನು ಸಮರ್ಪಿಸಿಕೊಂಡವರು ಕೃಷ್ಣಪ್ಪ. ಅವರು ಕಾಲಕಾಲಕ್ಕೆ ಬೇಂದ್ರೆ ಕುರಿತಾಗಿ ಶಾಲಾಕಾಲೇಜುಗಳಲ್ಲಿ, ವಿವಿಧ ಸಂಘ ಸಂಸ್ಥೆಗಳೊಂದಿಗೆ ಹಮ್ಮಿಕೊಳ್ಳುವ ಕಾರ್ಯಕ್ರಮಗಳಲ್ಲಿ ಅವರು ಮಾತನಾಡುವ ರೀತಿಯನ್ನು, ರೂಪಿಸುವ ಯೋಜನೆಗಳನ್ನು ಕಂಡವರು ಇವರನ್ನು 'ಬೇಂದ್ರೆ ವಕ್ತಾರ'ರೆಂದೇ ಕರೆದದ್ದುಂಟು. ಅದೇನೇ ಇರಲಿ ಒಟ್ಟಾರೆ 'ಬೇಂದ್ರೆ ನಮ್ಮ ಆಸ್ತಿ' ಎಂದು ಭಾವಿಸಿದ್ದ ಒಂದು ವಲಯಕ್ಕೆ ತಮ್ಮ ಕಾರ್ಯ ಚಟುವಟಿಕೆಗಳ ಮೂಲಕ ಶಾಕ್ ಟ್ರೀಟ್‌ಮೆಂಟ್ ನೀಡಿದರು.

ನಮ್ಮಲ್ಲಿ ಕನ್ನಡ ಅಧ್ಯಾಪಕರಿಗೆ ನಡೆಸುವ ಪುನಶ್ಚೇತನ ಶಿಬಿರಕ್ಕೆ 'ಬೇಂದ್ರೆ ಕಾವ್ಯ' ಕುರಿತು ಮಾತನಾಡಲು ಕೆಲವು ವರ್ಷಗಳ ಹಿಂದೆ ಕೃಷ್ಣಪ್ಪನವರನ್ನು ಆಹ್ವಾನಿಸಿದ್ದೆ. ಒಂದೂವರೆ ಗಂಟೆ ಕಾಲ ಬೇಂದ್ರೆ ಕವಿತೆಗಳನ್ನು ಹಾಡುತ್ತ, ವಿಮರ್ಶಿಸುತ್ತಿದ್ದ ರೀತಿಯನ್ನು ಕಂಡ ಅಧ್ಯಾಪಕರು ಬೆರಗಾಗಿ ಹೋದದ್ದನ್ನು ನಾನು ಗಮನಿಸಿದ್ದೆ. 'ಇವರು ಬರಿ ಜಿ. ಕೃಷ್ಣಪ್ಪ ಅಲ್ಲ ಬೇಂದ್ರೆ ಕೃಷ್ಣಪ್ಪ' ಅಂತಲೇ ನಾಮಕರಣ ಮಾಡಿದರು. ಇಂತಹ ಪ್ರೇರಣೆ ಪ್ರೋತ್ಸಾಹಗಳಿಂದಾಗಿಯೇ ಕಾಲಕ್ರಮದಲ್ಲಿ 'ಹಾಡುಹಕ್ಕಿ ಅಂಬಿಕಾತನಯದತ್ತ' 'ಡಿ.ಆರ್. ಬೇಂದ್ರೆ', 'ನಾಕುತಂತಿ' – ಒಂದು ಟಿಪ್ಪಣಿ, 'ಹೂತಃದ ಹುಣಸಿ' 'ಬರೆಹದಲ್ಲಿ ಬೇಂದ್ರೆಯವರ ಬದುಕು' – ಮುಂತಾದ ಕೃತಿಗಳನ್ನು ರಚಿಸುತ್ತ ಕೃಷ್ಣಪ್ಪ ಬೇಂದ್ರೆ 'ಎಕ್ಸ್‌ಪರ್ಟ್' ಆಗಿಬಿಟ್ಟರು. ಇದೇ ರೀತಿ ಕನ್ನಡ ಪರಂಪರೆಯನ್ನು, ಅದರಲ್ಲಿನ ಕನ್ನಡದ ವಿವೇಕವನ್ನು ಕನ್ನಡಿಗರಿಗೆ ಅದರಲ್ಲೂ ಪಾಮರರಿಗೆ ಪರಿಚಯಿಸಬೇಕೆಂಬ ಆಸಕ್ತಿ, ತುಡಿತ ಅವರಲ್ಲಿ ಗರಿಗೆದರಿತು. ಅದರ ಫಲವೆಂಬಂತೆ 'ಮಹಾಕವಿ ಲಕ್ಷ್ಮೀಶನ ವಚನ ಜೈಮಿನಿಭಾರತ' ಪ್ರಕಟವಾಯಿತು. ಅದರ ನಂತರದ ಯೋಜನೆಯಾಗಿ ಇದೀಗ ಹರಿಹರ ಕವಿಯ 'ಗಿರಿಜಾ ಕಲ್ಯಾಣ'ವನ್ನು ಗದ್ಯದಲ್ಲಿ ನೀಡುವ ಪ್ರಯತ್ನ ಮಾಡಿದ್ದಾರೆ. ಇದು ಸಂತೋಷದ ವಿಷಯ.

ಹರಿಹರ ನಡುಗನ್ನಡ ಕಾಲದ ಪ್ರಮುಖಕವಿ, ರಗಳೆಯ ಕವಿ, ಕ್ರಾಂತಿಕಾರ ಎಂದೇ ಹೆಸರಾದವನು. ಪಂಪ ಪುರಾಣ ಪುರುಷರನ್ನು ಇತಿಹಾಸದ ವ್ಯಕ್ತಿಗಳನ್ನು ಪುರಾಣಲೋಕಕ್ಕೇರಿಸಿದ. ಆದರೆ ಹಿಂದಿನ ಕನ್ನಡ ಕಾವ್ಯಗಳಲ್ಲಿ ಕಂಡು ಬರುತ್ತಿದ್ದ ರಾಜಪರವಾದ, ಪಂಡಿತಪರವಾದ ಮೌಲ್ಯಗಳನ್ನು ನಾಯಕನ ಜೊತೆಯಲ್ಲಿಯೇ ಆಶ್ರಯದಾತನನ್ನೂ ಹೊಗಳುವ – ಇತ್ಯಾದಿ ಮಾಮೂಲಿಯಾದ ಕಾವ್ಯದ ಪರಿಪಾಠಗಳಿಂದ ಹರಿಹರ

ಭಿನ್ನವಾಗಿದ್ದುಕೊಂಡು ಪ್ರತಿಷ್ಠಿತರಿಗೆ ಮೀಸಲಾಗಿದ್ದ ಕನ್ನಡ ಕಾವ್ಯವನ್ನು ತನ್ನ ಕಾವ್ಯ ಸಂದರ್ಭದಲ್ಲಿ ಜನಸಾಮಾನ್ಯರಿಗೆ ಮೀಸಲಿಟ್ಟ ಕವಿ. ಅದುವರೆಗೆ ದಿಕ್ಕಾಪಾಲಾಗಿದ್ದ ಕಡೆಗಣಿಸಲ್ಪಟ್ಟಿದ್ದ ಹಾಗೂ ಕೆಲವರ ಕಾಲ್ತುಳಿತಕ್ಕೆ ಹಲವರನ್ನು ಬಳಸಿಕೊಳ್ಳುತ್ತಿದ್ದ ಕಾಲದಲ್ಲಿ, ಪ್ರತಿಷ್ಠಿತರ ಬಗ್ಗೆ ಕೃತಿ ರಚಿಸುತ್ತಿದ್ದ ಕಾಲದಲ್ಲಿ ಬೇಡರ ಕಣ್ಣಪ್ಪ, ಕುಂಬಾರ ಗುಂಡಯ್ಯ, ಇಳೆಯಾಂತ ಗುಡಿಮಾರ, ಅತಿಭಕ್ತ ಮೊದಲಾದವರನ್ನು ಕುರಿತು ಬರೆದು ಆಯಾ ಕಾಯಕದ ಮೂಲಕವೇ ಕೈಲಾಸ ಪದವಿಯನ್ನು ಪಡೆದ ವ್ಯಕ್ತಿಗಳ ಅಸಮಾನ್ಯ ಗುಣವನ್ನು ಚಿತ್ರಿಸಿದ ಹರಿಹರ ಕವಿಯ ಪ್ರತಿಭೆ ಅದ್ಭುತವಾದುದು. ಆತನಿಂದಾಗಿ ಕನ್ನಡಕಾವ್ಯ ಲೋಕಕ್ಕೆ ಜನಸಾಮಾನ್ಯರು, ಕೆಳವರ್ಗದವರು ಪ್ರವೇಶಿಸುವಂತಾಯಿತು. ಇಂತಹ ಸಾಮಾನ್ಯರನ್ನು ಪರೀಕ್ಷಿಸಲು ಬರುವ ಶಿವ ದುರಹಂಕಾರಿಯಲ್ಲ, ತೊಂದರೆ ಕೊಟ್ಟು ತನ್ನ ಕಡೆಗೆ ಸೆಳೆದುಕೊಳ್ಳುವ ಸ್ವಭಾವದವನಲ್ಲ. ಜನರ ಅಂತಸ್ತು, ಜಾತಿ, ಕಸುಬು ಇವ್ಯಾವನ್ನೂ ಪರಿಗಣಿಸದೆ ತಾನೆ ಅವರ ಸಮೀಪಕ್ಕೆ ಬಂದು ಗೌರವಿಸುವ ತುಂಬು ಹೃದಯದವನು. ಆದರೆ ಬೇರೆ ಬೇರೆ ಸಂದರ್ಭಗಳಲ್ಲಿ ನಾನಾ ರೀತಿಗಳಲ್ಲಿ ಭಕ್ತರನ್ನು ಪರೀಕ್ಷಿಸಿ ಅದರಲ್ಲಿ ಜಯಶಾಲಿಗಳಾಗುತ್ತಲೇ ಅವರನ್ನು ತನ್ನ ಲೋಕಕ್ಕೆ ಕರೆದೊಯ್ಯುವುದರ ಮೂಲಕ ತೀರಾ ಆತ್ಮೀಯವಾಗಿ ಗೋಚರವಾಗುತ್ತಾನೆ.

ಹರಿಹರನ 'ಗಿರಿಜಾ ಕಲ್ಯಾಣ'ವೂ ಶಿವಲೀಲೆಯ ಕಾವ್ಯ. ಪ್ರೌಢ ಕಾವ್ಯ ಪರಂಪರೆಗೆ ಹರಿಹರನ ಕಾಣಿಕೆ ಈ ಚಂಪೂ ಕಾವ್ಯ. ಹರಿಹರ ರಗಳೆಯ ಕವಿ ಎಂದೇ ಪ್ರಸಿದ್ಧನಾಗಿದ್ದರೂ ಚಂಪೂ ಕಾವ್ಯ ರಚಿಸಬಲ್ಲೆನೆಂಬುದನ್ನೂ ತೋರಿಸಿದ. ವಸ್ತು ವಿಷಯ, ವರ್ಣನೆ ಮತ್ತು ಶೈಲಿ – ಇವುಗಳಲ್ಲೆಲ್ಲ ಪರಂಪರೆಯ ಅಂಶಗಳನ್ನು ಸ್ವೀಕರಿಸಿಯೂ ತನ್ನತನವನ್ನು ಮೆರೆದವನು ಹರಿಹರ. ಶಿವ ಪಾರ್ವತಿಯರ ವಿವಾಹದ ಸಂಗತಿಯೇ ಇಲ್ಲಿ ಪ್ರಮುಖ ವಿಷಯ. ಪಾರ್ವತಿಯ ಹುಟ್ಟಿನಿಂದ ಆರಂಭಗೊಂಡು ಮದುವೆಯ ತನಕದ ಸಂಗತಿಗಳನ್ನು ಅಭಿವ್ಯಕ್ತಿಸುವಲ್ಲಿ ಹರಿಹರ ಕವಿಯ ಸಂಭ್ರಮ ಕಾಣಿಸುತ್ತದೆ. ಪಾರ್ವತಿಯ ಪಾತ್ರವನ್ನು ಎಳೆಎಳೆಯಾಗಿ ಬಿಡಿಸಿ ತೋರಿಸುವಲ್ಲಿ ಆತನ ಪ್ರಮುಖ ಕಾಳಜಿ ಗೋಚರವಾಗುತ್ತದೆ. ಗಿರಿಜೆಯೇ ಕಾವ್ಯದ ಕೇಂದ್ರವಾಗಿರುವುದರಿಂದ ಸಹಜವಾಗಿ ಕಾವ್ಯ 'ಗಿರಿಜಾ ಕಲ್ಯಾಣ' ವೆಂಬ ಹೆಸರನ್ನು ಹೊಂದಲು ಕಾರಣವಾಯಿತು. ಪರ್ವತರಾಜನ ಮಗಳಾದ ಗಿರಿಜೆ ಒಂದು ದೈವೀಪಾತ್ರ. ಸೌಂದರ್ಯ ತಪಶ್ಶಕ್ತಿಯುಳ್ಳವಳು. ಆದರೂ ಮನುಷ್ಯ ಸಹಜವಾದ ಕೋಪ, ತಾಪ, ಛಲ, ಸ್ವಾಭಿಮಾನವನ್ನು ಪ್ರಕಟಪಡಿಸುವವಳಾಗಿ ಗೋಚರವಾಗುತ್ತಾಳೆ. ಅದಕ್ಕೆ ಹರಿಹರ ಇದನ್ನು 'ಕಾವ್ಯಂ ತಾನಿದು, ನವರಸಸೇವ್ಯಂ (೧–೧೪)', 'ಪೊಸತಿದು ಪಾವನಮಿದು' (೧–೧೫) – ಇತ್ಯಾದಿಯಾಗಿ ಹೊಗಳಿದ್ದಾನೆ.

ಜಿ. ಕೃಷ್ಣಪ್ಪ ಅವರು ಇಂತಹ ಕಾವ್ಯವನ್ನು ಸುಲಲಿತ ಗದ್ಯದಲ್ಲಿ ಓದುಗರಿಗೆ ಉಣಬಡಿಸುವ ಕೆಲಸವನ್ನು ಮಾಡಿದ್ದಾರೆ. ಸುಧಾ ವಾರ ಪತ್ರಿಕೆಯಲ್ಲಿ ದಿನಾಂಕ ೬.೧೨.೨೦೧೨ ರಿಂದ ೭.೨.೨೦೧೩ರವರೆಗೆ ಎಂಟು ಕಂತುಗಳಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡಿತ್ತು. ಓದುಗರು ಇದರ ಸವಿಯನ್ನು ಆಗಲೇ ಸವಿದಿದ್ದಾರೆ. ಇದು ಸಂತೋಷದ ಸಂಗತಿ. ಹಿಮಗಿರಿಯ ವರ್ಣನೆಯೊಂದಿಗೆ ಆರಂಭಗೊಳ್ಳುವ 'ಗಿರಿಜಾ

ಕಲ್ಯಾಣ' ಚಂಪೂಕಾವ್ಯವನ್ನು ಓದಲು ಕಷ್ಟವೆನ್ನುವವರಿಗೆ ಸರಳಗನ್ನಡದಲ್ಲಿ ನೀಡಿ ಅನುಕೂಲ ಮಾಡಿಕೊಟ್ಟಿದ್ದಾರೆ. ಕಾವ್ಯದ ಕತೆಯೇ ಆಹ್ಲಾದಕರವಾದುದು. ಮೂಲದ ಕಠಿಣ ಶಬ್ದಗಳಿಗೆ ಅರ್ಥ ನೀಡುವ ಪ್ರಯತ್ನ ಶ್ಲಾಘನೀಯ. ಜಿ. ನಾರಾಯಣರ ಕಾಲದಲ್ಲಿ ಕನ್ನಡ ಸಾಹಿತ್ಯ ಪರಿಷತ್ತು ಹಳಗನ್ನಡ ಕಾವ್ಯಗಳ ಗದ್ಯಾನುವಾದಗಳನ್ನು ಹೊರತಂದು ಪ್ರಕಟಿಸುವ ಯೋಜನೆಯನ್ನು ಪ್ರಾರಂಭಿಸಿತು. ಗದ್ಯಾನುವಾದಗಳು ಹೊರಬಿದ್ದವು. ಸಾಮಾನ್ಯ ಓದುಗರಿಗೂ ಪ್ರಾಚೀನ ಮಧ್ಯಕಾಲೀನ ಕಾವ್ಯಗಳು ತಲುಪಬೇಕು ಎಂಬ ಸದಾಶಯದ ಯೋಜನೆ ಅತ್ಯಂತ ಯಶಸ್ವಿಯಾಗಿ ಕಾರ್ಯರೂಪಕ್ಕೆ ಬಂತು. ಸಾಂಸ್ಥಿಕ ನೆಲೆಯಲ್ಲಿ ಈ ಬಗೆಯ ಅನುವಾದಗಳು ನಡೆಯುತ್ತಿರುವಂತೆಯೇ ಬಹು ಮುಖ್ಯವೆನಿಸುವ ಕಾವ್ಯಗಳ ಗದ್ಯಾನುವಾದಗಳು ವ್ಯಕ್ತಿ ನೆಲೆಯಲ್ಲೂ ಹೊರಬಂದಿರುವುದು ಗಮನಾರ್ಹ ಸಂಗತಿ. ಕೃಷ್ಣಪ್ಪ ಈ ಸಾಲಿಗೆ ಸೇರುವ ಹಿರಿಯರು. ಬೇಂದ್ರೆಯವರನ್ನು ದಿಕ್ಕು ದಿಕ್ಕುಗಳಿಗೆ ಪರಿಚಯಿಸಿದಂತೆ ಪ್ರಾಚೀನ ಕವಿಗಳನ್ನು ಅವರ ಕಾವ್ಯಗಳನ್ನು ನಾಡವರಿಗೆ ತಲುಪಿಸುವ ಕಾಯಕದಲ್ಲಿ ಹಿರಿಯರಾದ ಕೃಷ್ಣಪ್ಪ ಅವರಿಗೆ ಅತ್ಯಂತ ಯಶಸ್ಸು ದೊರಕಲೆಂದು ಆಶಿಸುವೆ. ಸರಳ ಗದ್ಯಾನುವಾದವನ್ನು ಧಾರಾವಾಹಿಯಾಗಿ ಪ್ರಕಟಿಸಿ ಸಾಮಾನ್ಯ ಓದುಗರಲ್ಲಿ ಕಾವ್ಯದ ಸವಿಯನ್ನು ಉಣಬಡಿಸಿದ ಸುಧಾ ವಾರಪತ್ರಿಕೆಗೆ, ಹಾಗೂ ಇದು ಪುಸ್ತಕ ರೂಪ ಪಡೆಯಲು ಕಾರಣರಾದ ಹಿರಿಯರಾದ ಪ್ರೊ. ಡಿ.ಕೆ. ಶ್ಯಾಮಸುಂದರ ರಾವ್ ಅವರಿಗೆ ನನ್ನ ಹೃತ್ಪೂರ್ವಕ ಅಭಿನಂದನೆಗಳು

ಡಾ. ಜಿ.ಆರ್. ತಿಪ್ಪೇಸ್ವಾಮಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – ೬

ಲೇಖಕನ ಮಾತು

ಮಹಾಕವಿ ಹರಿಹರನು ಹಂಪೆಯ ವಿರೂಪಾಕ್ಷನ ಭಕ್ತ. ಅವನನ್ನು ಹರಿಯಣ್ಣ, ಹರಿದೇವ ಎಂದು ಕರೆಯುವರು. ಮಹಾಶಿವಭಕ್ತನಾದ ಹರಿಹರನು ತನ್ನ ಭಕ್ತಿಯ ಭಾವವನ್ನು ಕಾವ್ಯವಾಗಿ ನೀಡಿದ್ದಾನೆ. ಶಿವನ ಕರುಣೆಗೆ ಒಳಗಾದ ಅವನ ಆನಂದವು ಭಕ್ತಿರಸವಾಗಿ ಕನ್ನಡ ಸಾಹಿತ್ಯವನ್ನು ಶ್ರೀಮಂತ ಗೊಳಿಸಿದೆ. ಅವನ ಕಾಲ ೧೨ನೇ ಶತಮಾನದ ಕೊನೆಯ ಭಾಗ ಎಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಆತನ ಊರು ಹಂಪೆ. ತಾಯಿ ಶರ್ವಾಣಿ, ತಂದೆ ಮಹಾದೇವ. ಅವನ ಗುರು ಮಾಯ್ದೇವ.

ಹರಿಹರನು ತನ್ನ ಹಿಂದಿನ ಕವಿಗಳಾದ ಪಂಪ ರನ್ನರಂತೆ ತಮ್ಮ ಆಶ್ರಯದಾತ ರಾಜರನ್ನು ಹೊಗಳಲು ಕಾವ್ಯ ರಚಿಸಲಿಲ್ಲ. ಅವನು ತನ್ನ ಇಷ್ಟ ದೈವ ಶಿವ ಮತ್ತು ಶಿವಭಕ್ತರನ್ನು ಕುರಿತು ಕಾವ್ಯರಚಿಸಿದ. ಕನ್ನಡ ಕಾವ್ಯ ಪರಂಪರೆಯಲ್ಲಿ ಹೊಸ ಮಾರ್ಗನಿರ್ಮಿಸಿದ. 'ಎರಗುವೆನೆನ್ನ ಹಂಪೆಯರಸಂಗೆ ಹರಂಗೆ ಶಿವಂಗೆ' ಎಂದು ಶಿವನನ್ನು ಆರಾಧಿಸಿದ.

ಹರಿಹರನು ಪಂಪಾಶತಕ, ರಕ್ಷಾಶತಕ, ಮುಂಡಿಗೆಯ ಅಷ್ಟಕಗಳ ಜೊತೆಗೆ ೧೧೦ ರಗಳೆಗಳನ್ನು ರಚಿಸಿದ್ದಾನೆ. ಆತ ರಚಿಸಿದ 'ಗಿರಿಜಾ ಕಲ್ಯಾಣ'ವು ಕನ್ನಡ ಸಾಹಿತ್ಯ ಪರಂಪರೆಯಲ್ಲಿ ರಚಿತವಾದ ಮೊದಲ ಶಿವಲೀಲೆಯ ಮಹಾಕಾವ್ಯವಾಗಿದೆ. ಈ ಕಾವ್ಯ ತನ್ನಲ್ಲಿ ನವರಸಗಳನ್ನು ತುಂಬಿಕೊಂಡಿದ್ದರೂ ಭಕ್ತಿರಸವೇ ಪ್ರಧಾನವಾಗಿ ಪ್ರಕಾಶಗೊಂಡಿದೆ.

ಹರಿಹರನ ಸಮಗ್ರ ಕೃತಿಗಳನ್ನು ಕುರಿತು ವಿಮರ್ಶಿಸುತ್ತ ಪ್ರೊ. ಡಿ.ಎಲ್. ನರಸಿಂಹಾಚಾರ್ ಅವರು 'ಎಲ್ಲ ಕೃತಿಗಳೂ ಹರಿಹರನ ಭಕ್ತ ಹೃದಯದಿಂದ ಮೂಡಿಬಂದವು. ಅವನ ಪಾಲಿಗೆ ಕಾವ್ಯ ಶಿವನನ್ನು ಒಲಿಸುವುದಕ್ಕೆ ಸಾಧನ. ತಾನು ಅನುಭವಿಸಿದ ಭಕ್ತಿಯ ಪರಮಸುಖವನ್ನು ಅದರ ತುಂಬ ಹರಿಯಿಸಿದ್ದಾನೆ. ಶಿವನ ಮಹಿಮೆಯನ್ನೂ ಅವನ ಲೀಲೆಗಳನ್ನೂ ಅವನ ಕರುಣೆಯನ್ನೂ ಬಗೆಬಗೆಯಾಗಿ ಹಾಡಿ ನಲಿದಿದೆ ಅವನ ಹೃದಯ' ಎಂದಿದ್ದಾರೆ. ಅವರು 'ಗಿರಿಜಾ ಕಲ್ಯಾಣ' ಮಹಾಕಾವ್ಯದಲ್ಲಿಯ ವರ್ಣನೆಗಳನ್ನು ಕುರಿತು 'ಇಂದ್ರಿಯಗಳಿಗೆ ಗೋಚರವಾಗುವ ವಸ್ತುಗಳನ್ನೂ ಮನಸ್ಸಿನ ಭಾವೋದ್ರೇಕಗಳನ್ನೂ ಬಣ್ಣಿಸುವುದರಲ್ಲಿ ಹರಿಹರಚತುರ' ಎಂದಿದ್ದಾರೆ.

ಲಿಂಗಮಹಾಪುರಾಣ, ಶಿವಪುರಾಣಗಳಲ್ಲಿರುವ 'ಗಿರಿಜಾ ಕಲ್ಯಾಣ' ಕಥೆಯಲ್ಲಿ ಹರಿಹರ ಹಲವು ಮಾರ್ಪಾಡುಗಳನ್ನು ಮಾಡಿಕೊಂಡು ಕನ್ನಡನಾಡಿನ ಹೇಮಕೂಟಕ್ಕೆ ಶಿವನನ್ನು ಕರೆತಂದಿದ್ದಾನೆ. ಕಾಳಿದಾಸನ 'ಕುಮಾರ ಸಂಭವ'ದ ಪ್ರಭಾವಕ್ಕೆ ಒಳಗಾಗಿದ್ದರೂ ತನ್ನ ಪ್ರತಿಭೆಯಿಂದ ಹೊಸ ಸನ್ನಿವೇಶಗಳನ್ನು ಸೃಷ್ಟಿಸಿ 'ಗಿರಿಜಾ ಕಲ್ಯಾಣ' ಮಹಾಕಾವ್ಯ ರಚಿಸಿದ್ದಾನೆ. ಈ ಕಥೆಯ ನಾಯಿಕೆ ಪಾರ್ವತಿ. ಅವಳ ಕಲ್ಯಾಣದೊಂದಿಗೆ ಕಥೆ ಮುಕ್ತಾಯವಾಗುತ್ತದೆ. ಗಿರಿಜೆಯ ಭಕ್ತಿ ಇಲ್ಲಿ ಕಾವ್ಯವಾಗಿಹರಿದಿದೆ.

ಗಿರಿರಾಜನ ಪತ್ನಿ ಮೇನಾದೇವಿಯ ಹೆಂಗರುಳು ತನಗೆ ಒಬ್ಬ ಮಗನಿದ್ದರೂ ಮಗಳಿಗಾಗಿ ಹಂಬಲಿಸುತ್ತದೆ. ಅದಕ್ಕಾಗಿ ಅವಳು ಪಾರ್ವತಿಯನ್ನು ಕಂಡು ತಪಸ್ಸು ಮಾಡಿ ಆ ದೇವಿಯನ್ನೇ ಮಗಳಾಗಿ ಪಡೆಯುತ್ತಾಳೆ. ಇದು ಹೆಣ್ಣು ಮಕ್ಕಳನ್ನು ಪಡೆದು ಪೋಷಿಸುವ ವಿಶಿಷ್ಟ ಆದರ್ಶ. ಇದೊಂದು ಜೀವನ ಮೌಲ್ಯ ಎಂಬ ಅರಿವನ್ನು ಈ ಕಾವ್ಯ ನೀಡುತ್ತಿದೆ. ಇದು ಇಂದಿನ ಜನ ಅನುಸರಿಸಬೇಕಾದ ರೀತಿಯಾಗಿದೆ.

ಹರಿಹರನು ಕಲಹ ಪ್ರಿಯನಲ್ಲದ ನಾರದನನ್ನು ಸೃಷ್ಟಿಸಿದ್ದಾನೆ. ಅವನು ಈ ಕಾವ್ಯದಲ್ಲಿ ಲೋಕಹಿತ ಸಾಧಕನಾಗಿದ್ದಾನೆ.

ಹರಿಹರನು ಈ ಕಾವ್ಯದಲ್ಲಿ ತನ್ನ ಹಂಪೆಯ ಹೇಮಕೂಟದಲ್ಲಿ ಶಿವನು ತಪೋನಿರತನಾಗಿದ್ದ ಎಂದು ಕಲ್ಪಿಸಿಕೊಂಡಿರುವುದು ಅವನ ಕನ್ನಡ ನಾಡಿನ ಉಜ್ವಲ ಪ್ರೇಮಕ್ಕೆ ಸಾಕ್ಷಿಯಾಗಿದೆ.

ಗಿರಿಜೆಯ ಭಕ್ತಿಯನ್ನು ಕಡೆಗಣಿಸಿ ಶಿವಸಾಗುವನು. ಆಗ ಅವಳು ಛಲದಿಂದ ಕಠೋರ ತಪಸ್ಸನ್ನು ಕೈಗೊಂಡು ಶಿವನನ್ನು ತನ್ನ ಬಳಿಗೆ ಬರಮಾಡಿಕೊಳ್ಳುವಳು. ಪರಿಶುದ್ಧ ಭಕ್ತಿಯಿಂದ ಶಿವನನ್ನು ಒಲಿಸಿಕೊಳ್ಳುವಳು. ಶಿವನು ಹುಸಿವಟು ವೇಷಧಾರಿಯಾಗಿ ಗಿರಿಜೆಯ ಮುಂದೆ ನಿಂತು ಶಿವನನ್ನು ನಿಂದಿಸುವನು. ಅದನ್ನು ಕೇಳಿ ಕಿಡಿಕಿಡಿಯಾದ ಗಿರಿಜೆ ವಿಭೂತಿಯಿಂದ ಹೊಡೆಯಲು ಶಿವನ ವೇಷ ಕಳಚಿ ಹೋಗುವುದು. ಆಗ ಕವಿ ಚಿರಂತನ ಲೋಕ ಸತ್ಯವನ್ನು ಹೀಗೆ ಹೇಳಿದ್ದಾನೆ: 'ಪುಸಿದಿಟಕ್ಕೆ ನಿಲ್ವುದೆ ಜಗದೊಳ್'. ಇದೊಂದು ಸಾತ್ವಿಕ ಶೃಂಗಾರ ರಸಕಾವ್ಯ.

ನಮ್ಮ ದೇಶದಲ್ಲಿ ಶಿವನ ಆರಾಧಕರು ಹೆಚ್ಚು. ಶಿವನ ಕಥೆಯನ್ನು ಜನಗಳಿಗೆ ತಿಳಿಸಬೇಕು ಎಂಬ ಮನಸ್ಸಿನಿಂದ ಹರಿಹರನ 'ಗಿರಿಜಾಕಲ್ಯಾಣ'ವನ್ನು ಸರಳಗನ್ನಡದಲ್ಲಿ ಬರೆದನು. ಅದನ್ನು ಪ್ರೊ. ಡಿ.ಕೆ. ಶ್ಯಾಮಸುಂದರ ರಾವ್ ಮತ್ತು ಡಾ. ಕೆ.ಬಿ. ಲೋಕೇಶ್ವರಪ್ಪ ಅವರಿಗೆ ಓದಿಹೇಳಿದೆನು. ಅವರು ಮೆಚ್ಚಿಕೊಂಡರು. ತುಂಬಾ ವರ್ಣನೆಗಳಿರುವ ಕಾವ್ಯದಲ್ಲಿ ಕಥೆಗೆ ಅವಶ್ಯಕವಾದ ಮತ್ತು ರಸಿಕ ಹೃದಯ ಆಹ್ಲಾದವಾದ ಭಾಗಗಳನ್ನು ಉಳಿಸಿಕೊಂಡೆನು. ನನ್ನ ಈ ಪ್ರಯತ್ನಕ್ಕೆ ಮಾರ್ಗದರ್ಶನ ಮಾಡಿ ಪ್ರೋತ್ಸಾಹಿಸಿದ ಪಂಡಿತ ಎಚ್. ಹನುಮಂತರಾಯ, ಡಾ. ಎಂ. ಬಸವಣ್ಣ, ಪ್ರೊ. ಎನ್. ಬಸವಾರಾಧ್ಯ ಅವರನ್ನು ಸದಾ ನೆನೆಯುತ್ತೇನೆ. ನನ್ನ ಸಾಹಿತ್ಯ ಚಟುವಟಿಕೆಯನ್ನು ಸದಾ ಪೋಷಿಸುತ್ತಿರುವ ನನ್ನ ಗುರುಗಳಾದ ಡಾ. ಕೆ. ಅನಂತರಾಮು, ಡಾ. ವಾಮನ ಬೇಂದ್ರೆ, ಪ್ರೊ. ಎಚ್.ಎಸ್. ಹರಿಶಂಕರ್ ಅವರಿಗೆ ನಾನು ಸದಾ ಋಣಿಯಾಗಿರುವೆ.

ಈ 'ಗಿರಿಜಾ ಕಲ್ಯಾಣ'ವನ್ನು 'ಸುಧಾ' ವಾರ ಪತ್ರಿಕೆಯಲ್ಲಿ (೬.೧೨.೨೦೧೨ ರಿಂದ ೭.೨.೨೦೧೩ ವರೆಗೆ ೮ ವಾರಗಳು) ಪ್ರಕಟಿಸಿದ ಸಂಪಾದಕರಾದ ಶ್ರೀ ಕೆ.ಎನ್. ತಿಲಕ್ ಕುಮಾರ್ ಅವರಿಗೆ ನನ್ನ ವಂದನೆಗಳು. ಶ್ರೀ ಬಿಎಂ. ಹನೀಫ್, ಶ್ರೀ ಗುಡಿಹಳ್ಳಿ ನಾಗರಾಜ್ ಮತ್ತು 'ಸುಧಾ' ಸಂಪಾದಕ ಮಂಡಲಿಗೆ ನನ್ನ ನಮನಗಳು. 'ಪ್ರಜಾವಾಣಿ' ಸಂಪಾದಕರಾದ

ಶ್ರೀ ಕೆ.ಎನ್. ಶಾಂತಕುಮಾರ್ ಮತ್ತು ಕಾರ್ಯನಿರ್ವಾಹಕ ಸಂಪಾದಕರಾದ ಶ್ರೀ ಪದ್ಮರಾಜ ದಂಡಾವತಿ ಅವರಿಗೆ ನನ್ನ ಕೃತಜ್ಞತೆಗಳು. ಈ ಕಥೆಗೆ ಸುಂದರ ಚಿತ್ರಗಳನ್ನು ರಚಿಸಿದ ಶ್ರೀ ಜಿ.ಕೆ. ಶಿವಣ್ಣ ಅವರಿಗೆ ನನ್ನ ನಮಸ್ಕಾರಗಳು.

ನನ್ನ ಬೇಂದ್ರೆ ಕಾವ್ಯ ಅಧ್ಯಯನ ಮತ್ತು ಸಾಹಿತ್ಯಾಸಕ್ತಿಯನ್ನು ಹಲವಾರು ವರ್ಷಗಳಿಂದ ಬಲ್ಲ ಡಾ. ಜಿ.ಆರ್. ತಿಪ್ಪೆಸ್ವಾಮಿ ಅವರು ಈ ಕೃತಿಗೆ ಅಮೂಲ್ಯವಾದ ಮುನ್ನುಡಿಯನ್ನು ಬರೆದು ಕೊಟ್ಟಿದ್ದಾರೆ. ಅವರಿಗೆ ನಾನು ಕೃತಜ್ಞನಾಗಿದ್ದೇನೆ.

ನನ್ನ ಸಾಹಿತ್ಯಾಸಕ್ತಿಯನ್ನು ಸದಾ ಪ್ರೋತ್ಸಾಹಿಸುತ್ತಿರುವ 'ಪ್ರಜಾವಾಣಿ' ಸಂಪಾದಕರಾದ ಸನ್ಮಾನ್ಯ ಶ್ರೀ ಕೆ.ಎನ್. ಶಾಂತಕುಮಾರ್ ಅವರಿಗೆ ನೇಹದ ಕಾಣಿಕೆಯಾಗಿ ಈ ಮಂಗಳ ಕೃತಿಯನ್ನು ಅರ್ಪಿಸಿರುವೆನು.

ನಮ್ಮ ದ.ರಾ. ಬೇಂದ್ರೆ ಕಾವ್ಯ ಕೂಟದ ಎಲ್ಲ ಸದಸ್ಯರಿಗೆ ನನ್ನ ಮನಃಪೂರ್ವಕ ವಂದನೆಗಳು. 'ಗಿರಿಜಾ ಕಲ್ಯಾಣ'ವನ್ನು ವಾಚನ ಮಾಡುವಾಗ ಆಸಕ್ತಿಯಿಂದ ಕೇಳಿ, ಗದ್ಯ ರೂಪದಲ್ಲಿ ಬರೆಯುವಾಗ ತುಂಬು ಪ್ರೋತ್ಸಾಹ ನೀಡಿದ ನನ್ನ ಪತ್ನಿ, ಮಕ್ಕಳು, ಅಳಿಯಂದಿರನ್ನು ನೆನೆಯುವುದು ಕುಟುಂಬ ಸಾಹಿತ್ಯ ಪೋಷಕ ವಾತಾವರಣದ ಆಹ್ಲಾದ.

ಈ ಕೃತಿಯನ್ನು ಪ್ರಕಟಿಸಿರುವ ಹಳಗನ್ನಡ ಕಾವ್ಯ ಪ್ರೇಮಿ ಪ್ರೊ. ಡಿ.ಕೆ. ಶ್ಯಾಮಸುಂದರ ರಾವ್ ಅವರಿಗೆ ಮತ್ತು ಅಂದವಾಗಿ ಮುದ್ರಿಸಿದ ಪರಿಶ್ರೀ ಪ್ರಿಂಟರ್ಸ್ ಮಾಲೀಕರಾದ ಶ್ರೀ ಆರ್. ಶ್ರೀನಾಥ್ ಮತ್ತು ಸಿಬ್ಬಂದಿಗೆ ನನ್ನ ವಂದನೆಗಳು.

ನಾನು ಈ ಮೊದಲು ರಚಿಸಿರುವ ಕೃತಿಗಳನ್ನು ಓದಿಸವಿದ ಕನ್ನಡ ಕಾವ್ಯರಸಿಕರು ಮತ್ತು ವಿದ್ವನ್ಮಣಿಗಳು 'ವಚನ ಗಿರಿಜಾ ಕಲ್ಯಾಣ'ವನ್ನು ಪ್ರೀತಿಯಿಂದ ಸ್ವೀಕರಿಸಿ ಆಶೀರ್ವದಿಸಬೇಕೆಂದು ಪ್ರಾರ್ಥಿಸುತ್ತೇನೆ.

ದಿನಾಂಕ : ೩೦-೮-೨೦೧೩

ಬೆಂಗಳೂರು

ಡಾ. ಜಿ. ಕೃಷ್ಣಪ್ಪ

ಪರಿವಿಡಿ

ಚಿತ್ರಗಳ ಅನುಕ್ರಮಣಿಕೆ

















ಮಾಯಿದೇವರ ಶಿಷ್ಯ ಹರಿಹರ

'ಗಿರಿಜಾ ಕಲ್ಯಾಣ'ವೆಂಬ ಈ ಮಹಾಕಾವ್ಯದ ನಾಯಕ ಗಿರಿಜಾನಾಥ. ಕಾವ್ಯವಸ್ತು ಗಿರಿಜಾ ವಿವಾಹ. ಹಂಪೆ(ಹಂಪಿ)ಯ ಶ್ರೀ ವಿರೂಪಾಕ್ಷಸ್ವಾಮಿಯ ಕೃಪೆಗೆ ಒಳಗಾದ ಹರಿಹರನು ಈ ಮಹಾಕಾವ್ಯವನ್ನು ತುಂಬು ಉತ್ಸಾಹದಿಂದ ರಚಿಸಿದ್ದಾನೆ. ಈ ಕಾವ್ಯವು ಪ್ರಿಯವಚನದಂತೆ, ಪುಣ್ಯಪುಂಜದಂತೆ, ಚಂದ್ರಮನಂತೆ, ಪ್ರೀತಿಸಿದ ಮುಗ್ಧೆಯ ಕಡುನೇಹದಂತೆ, ಅಮೃತದಂತೆ, ವಸಂತನಂತೆ, ಹೂಮಾಲೆಯ ಹೊಸ ಕಂಪಿನಂತೆ, ಮಂದ ಮಾರುತದಂತೆ, ಹಂಸದಂತೆ ಚೇತೋಹಾರಿಯಾಗಿದೆ.

ಕವಿ ಹರಿಹರನ ಕುಲಗುರು ಹಂಪೆಯ ಶ್ರೀ ಶಂಕರದೇವರು. ಅವರು ಸತ್ಯ, ಕರುಣೆ, ಪುಣ್ಯ, ಶಾಂತಿಯ ನೆಲೆಯಾಗಿದ್ದು, ನಿತ್ಯಾನಂದರಾಗಿ ಕಾಂತಿಯಿಂದೊಡಗೂಡಿ ಚಂದ್ರಶೇಖರನಂತೆ ಮನೋಹರ ಮೂರ್ತಿಯಾಗಿದ್ದರು. ಶ್ರೀ ಶಂಕರದೇವರಿಂದ ಶಿವದೀಕ್ಷೆಯನ್ನು, ಶ್ರೀ ಶುದ್ಧ ಪಂಚಾಕ್ಷರಿ ಮಂತ್ರೋಪದೇಶವನ್ನು ಪಡೆದವರು ಶ್ರೀ ಮಾದಿರಾಜ. ಗುರು ಮಾದಿರಾಜರ ಮನಸ್ಸಿಗೆ ನೆಮ್ಮದಿಯನ್ನುಂಟು ಮಾಡಿದ ಸಂತ ಹಂಪೆಯ ಮಾಯಿದೇವ ಆಚಾರ್ಯ.

ಶ್ರೀ ಮಾಯಿದೇವ ಆಚಾರ್ಯರು ಶಿವವೂ, ಶಾಂತವೂಆದ ಶೈವಾಚರಣೆಯ ಪುಣ್ಯವಂತರು. ಸಾಕಾರ ಸರ್ವೇಶ್ವರನಂತಿದ್ದ ಅವರು ಸಂತೋಷವನ್ನೇ ಆಭರಣವಾಗಿ ಧರಿಸಿ, ಸದಾ ಪ್ರಸನ್ನರಾಗಿದ್ದರು. ಅವರು ಶೈವ ಗುರುವಾಗಿ ಭಕ್ತರಿಗೆ ಧರ್ಮೋಪದೇಶ ಮಾಡುತ್ತ ಮಾಧುರ್ಯಗುರು, ಮಹಾಗುರು, ವರ ವಿದ್ಯಾಗುರುವೆನಿಸಿದ್ದರು. ಆ ಪರಮ ಗುರುವಿನ ಕರುಣೆಗೆ ಒಳಗಾಗಿ ಕೀರ್ತಿಶಾಲಿಯಾದವನು ದೇವಕವಿ ಹರಿಹರ. ಆತ ಗುರುವಿನ ಕೃಪೆಯಿಂದ 'ಗಿರಿಜಾ ಕಲ್ಯಾಣ' ರಚಿಸಿದನು.

* * * * *

ಹಂಪೆಯಲ್ಲಿ ಶಿವ

ಮಹಾಕವಿ ಹರಿಹರನ 'ಗಿರಿಜಾ ಕಲ್ಯಾಣ' ಶಿವಪುರಾಣದ ಕಥೆ ಆಧರಿಸಿದೆ. ಕಾಳಿದಾಸನ 'ಕುಮಾರ ಸಂಭವ'ವೂ ಶಿವಪುರಾಣ ಆಧರಿಸಿದ ಸಂಸ್ಕೃತ ಕಾವ್ಯ. ಹರಿಹರನು ಕಾಳಿದಾಸನ ಪ್ರಭಾವಕ್ಕೆ ಒಳಗಾಗಿದ್ದರೂ ತನ್ನ ಪ್ರತಿಭೆಯಿಂದ ಹೊಸ ಸನ್ನಿವೇಶಗಳನ್ನು ಸೃಷ್ಟಿಸಿಕೊಂಡು ಮಾರ್ಪಾಡು ಮಾಡಿಕೊಂಡಿದ್ದಾನೆ.

ಈ ಕತೆಯ ನಾಯಕಿ ಪಾರ್ವತಿ. ಗಿರಿಜೆಯ ಭಕ್ತಿಯೇ ಇಲ್ಲಿ ಕಾವ್ಯವಾಗಿ ಹರಿದಿದೆ. ನಡುಗನ್ನಡ ಭಾಷೆಯಲ್ಲಿ ಸುಲಲಿತವಾಗಿ ಹರಿದ ಈ ಕಥೆ ತನ್ನ ನವೀನ ಭಾವ, ಭಾಷೆ, ಚಿಂತನೆಯಿಂದ ಹೊಸತಾಗಿದೆ. ಭಕ್ತಿ ಭಾಷೆಯ ಉಡುಗೆ ತೊಟ್ಟು, ಶೃಂಗಾರದ ಝರಿಯಿಂದ ಮನೋಹರವಾಗಿದೆ. ಸನ್ನಿವೇಶಗಳು ಅನನ್ಯವಾಗಿವೆ.

ಹಂಪೆಯ ಹೇಮಕೂಟದಲ್ಲಿ ಶಿವನು ತಪೋನಿರತನಾಗಿದ್ದ ಎಂದು ಹರಿಹರನು ಕಲ್ಪಿಸಿಕೊಂಡಿರುವುದು ಅವನ ಕನ್ನಡ ನಾಡಿನ ಉಜ್ವಲ ಪ್ರೇಮಕ್ಕೆ ಸಾಕ್ಷಿಯಾಗಿದೆ.

* * * * *

ಹಿಮಾಲಯ ಪರ್ವತ

ವಿಶಾಲವಾದ ಪೃಥ್ವಿಯೆಂಬ ಕಾಂತೆಯ ನಾಭಿ ಕಮಲದ ಮಧ್ಯದಲ್ಲಿ ಬಹಳ ಸುಂದರವಾದ ಬೀಜಕೋಶದಂತೆ ಮೇರುಪರ್ವತವಿದೆ. ಅದರ ಪೂರ್ವಕ್ಕೆ ರಮ್ಯ ಭೂಮಿಗೆ ತೊಡಿಸಿದ ನೀಲ ಡಾಬಿನಂತೆ ಉನ್ನತ ಅಲೆಗಳಿಂದಲೂ, ವಿವಿಧ ಜಲಚರಗಳಿಂದಲೂ ತುಂಬಿದ ಸಾಗರವಿದೆ. ಆ ನೀರಾಕಾರವು ತಿಮಿಂಗಿಲಗಳು, ಆಮೆ, ಮೊಸಳೆ, ನೀರಾನೆಗಳಿಂದ ಕೂಡಿದ್ದು; ಶಂಖ, ಶ್ರೇಷ್ಠ ವಜ್ರ, ಹವಳದ ಬಳ್ಳಿಗಳಿಂದ ಕಂಗೊಳಿಸಿದೆ. ಆ ಗಂಭೀರ ಸಮುದ್ರದ ಪೂರ್ವದಿಂದ ಪಶ್ಚಿಮದವರೆಗೆ ಹೈಮಾಚಲ (ಹಿಮಾಲಯ ಪರ್ವತ) ಹಬ್ಬಿದೆ.

ಹಿಮಾಲಯ ಪರ್ವತವು ವಿಶಾಲ ಗವಿ ಗುಹೆಗಳಿಂದ ಕೂಡಿ ವಾಸಿಸಲು ಯೋಗ್ಯವಾಗಿದ್ದು ತಪೋನಿಧಿಗಳ ತಪಸ್ಸಿನ ನೆಲೆಯಾಗಿದೆ. ಮರಗಳಂತೆ ಮೇಲೆದ್ದು ಎಲೆಗಳಿಂದ ಕೂಡಿದಂತೆ ಹರಡಿಕೊಂಡಿರುವ ಬಂಡೆಗಳಿಂದ, ಗಂಡಶೈಲ ಶಿಖರಗಳಿಂದ, ಹೆಬ್ಬಂಡೆಗಳಿಂದ ಭೀಮರೂಪವಾಗಿದೆ. ಹಿಮವತ್ಪರ್ವತದ ಚಂದ್ರಕಾಂತ ಶಿಲೆಗಳಮೇಲೆಬಿದ್ದ ಬೆಳದಿಂಗಳಿಂದ ಹಿಮಸ್ರವಿಸುತ್ತಿದೆ. ಅಲ್ಲಿಯ ಕಮಲ ನಯನೆಯರ ಚಿಗುರು ಕೈಗಳ ಉಗುರಿನಂತಿರುವ ಹೂಗಳಿಂದ ವಸಂತ ಪ್ರಕಾಶಿಸುತ್ತಿದ್ದಾನೆ! ಸೂರ್ಯನ ಝಳದಸ್ಪರ್ಶಕ್ಕೆ ಅಲ್ಲಿಯ ಸೂರ್ಯಕಾಂತ ಶಿಲೆಗಳು ಕಾದು ಬೇಸಗೆ ತೀವ್ರವಾಗಿದೆ. ಕ್ರೂರ ಭಯಂಕರ ಆನೆಗಳಿಂದ ಚಿಮ್ಮುತ್ತಿರುವ ಮದಜಲದಿಂದ ನಗೇಂದ್ರನು ಶೋಭಿಸುತ್ತಿದ್ದಾನೆ.

ಪೂರ್ವ ಪಶ್ಚಿಮಕ್ಕೆ ವಿಸ್ತಾರವಾಗಿ ಹಬ್ಬಿದ ಪರ್ವತರಾಜನಿಗೆ ರಾಜಲೀಲೆಯಂತೆ–ಹಾರುವ ನವಿಲೇ ಚಾಮರವಾಗಿದೆ. ಚಮರೀಮೃಗದ ಸಮೂಹ ಸಂಚಾರವೇ ಚಾಮರಸೇವೆಯಾಗಿದೆ. ಎತ್ತರಕ್ಕೆ ನಮಿರಿನಿಂತ ಮರಗಳೇ ಕೊಡೆಯಾಗಿವೆ. ಚಂದ್ರಕಾಂತ ಶಿಲೆಯೇ ಎತ್ತರದ ಸಿಂಹಾಸನವಾಗಿ ಕಂಗೊಳಿಸಿದೆ.

ಶಿವನ ನಾಟ್ಯದಂತಿರುವ ಹಿಮಪರ್ವತ

ಗಿರಿ ಶಿಖರವೆ ಮುಖ, ಮರದ ಬಿಳಿಲುಗಳೇ ಜಡೆ, ವ್ಯಾಪಿಸಿಕೊಂಡಿರುವ ಗಂಡಶೈಲವೆ ಹರಡಿದ ಭುಜಗಳು; ಆನೆಗಳ ಘೀಳು, ಸಿಂಹಗಳ ಗರ್ಜನೆಗಳೇ ವಾದ್ಯ ಸಂಕುಲವಾಗಿ ಸ್ಮರರಿಪುವಾದ ಶಿವನು ನಟರಾಜ ಲೀಲೆಯಲ್ಲಿ ನಿಂತಹಾಗೆ ಆ ಬೃಹತ್ ಪರ್ವತವು ಗೋಚರಿಸಿದೆ.

ಹರಹರ! ಗಿರಿಯ ಉದ್ದವನ್ನು ಯಾರು ತಾನೆ ಹೇಳಬಲ್ಲರು! ವಿದ್ಯಾಧರಿಯರು ಆ ಗಿರಿ ಶಿಖರದಲ್ಲಿನಿಂತು ಚೆಂದಚೆಂದವಾಗಿ ಹೊಳೆಯುವ ನಕ್ಷತ್ರಗಳನ್ನು ಮುತ್ತೆಂದು ಹಿಡಿಯಲು ಅಪೇಕ್ಷಿಸುತ್ತಿದ್ದಾರೆ!

ಗಿರಿಯು ಎತ್ತರವೆಂದರೆ ಅಲ್ಲಿ ಸಂಚರಿಸುವ ಖೇಚರರು ಬಿಸಿಲಿಗೆ ಅಂಜಿ ಆತುರಾತುರವಾಗಿ ಓಡಿ, ಬಳಲಿ; ಗಿರಿಶಿಖರದ ತುದಿಯಲ್ಲಿರುವ ಮರದ ನೆರಳಿಗೆ ಬಂದು ಸೇರುತ್ತಿದ್ದಾರೆ! ಆ ಪರ್ವತವು ಗಂಧರ್ವರು, ಗರುಡರು, ಸಿದ್ಧರು, ಮುನೀಶ್ವರರು, ದೇವತೆಗಳ ಸಮೂಹದಿಂದ ಹೆಚ್ಚು ಪ್ರಕಾಶಗೊಂಡಿದೆ.

ಪುಣ್ಯವೇ ಹಣ್ಣಾದ ರೀತಿ ಇರುವ ತಪಸ್ವಿಗಳು

ಹಿಮಾಲಯ ಪರ್ವತವು ಮಹೇಶ್ವರ ಸಂಪತ್ತಿನ ಗಣಿಯಾಗಿದೆ. ಅದು ಶಿವಮಯತಾಣವಾಗಿ ಸತ್ಯ, ಶಾಂತಿ, ದಯೆ, ಧರ್ಮ, ನಿರ್ಮಲ ನೀತಿ, ಶಿವಜ್ಞಾನದ ಮುಕ್ತಿಯ ಮೊತ್ತವೆಂಬಂತಿರುವ ತಪಸ್ವಿಗಳಿಂದ ಕೂಡಿದೆ. ಅಲ್ಲಿ ಯಮ, ನಿಯಮ, ನಿತ್ಯ ಕರ್ಮಾನುಷ್ಠಾನ ನಿರತರಾದ ಮುನಿಗಳು ವ್ರತ ಶೀಲರಾಗಿ ಕಂದ ಮೂಲ ಫಲಗಳನ್ನು ಭಕ್ಷಿಸಿ ತೃಪ್ತರಾಗಿದ್ದಾರೆ. ಆ ತಾಪಸರು ಶಿವಲಾವಣ್ಯದಿಂದ ಕೂಡಿ ಸರ್ವಾಂಗದಲ್ಲಿ ಭಸ್ಮವನ್ನುಧರಿಸಿ, ಜ್ಞಾನವೃದ್ಧರಾಗಿ, ಕರುಣಾಳುಗಳಾಗಿ, ಅತಿಕಾಂತಿಯಿಂದೊಡಗೂಡಿ ಪುಣ್ಯವೇ ಹಣ್ಣಾದ ರೀತಿಯಿದ್ದಾರೆ.

ಮುನಿಗಳೊಡನಿರುವ ನವಿಲುಗಳು ಹೋಮಸ್ಥಳದಲ್ಲಿ ತಮ್ಮ ಗರಿಗಳಿಂದ ಗಾಳಿಬೀಸಿ ಹೋಮಾಗ್ನಿಯನ್ನು ಪ್ರಜ್ವಲನಗೊಲಿಸುತ್ತಿವೆ. ಮುನಿವರ್ಯರು ನಡೆಸುವ ಅಗ್ನಿಹೋತ್ರದ ಹೋಮ ಧೂಮವು ಗಗನಕ್ಕೇರುವುದನ್ನು ನೋಡಿದರೆ – ಭೂಲೋಕದಿಂದ ಮುಕ್ತಿಗೆ ನಡೆಯಿಸುವ ಕಪ್ಪುಶಿಲೆಯ ಸೋಪಾನವೊ, ಸಂಸಾರ ತಾಪತ್ರಯದಲ್ಲಿ ಬಳಲಿದವರಿಗೆ ಸುಖವನ್ನು ಕೊಡುವ ಮೇಘಮಂಡಲವೊ ಎಂಬಂತಿದೆ. ಆ ತಾಪಸಿಗಳ ಶಾಂತಿಯನಡೆ ತೇಜಸ್ಸಿನ ಪ್ರಭಾವದಿಂದ ಅಲ್ಲಿಯ ಕ್ರೂರ ಮೃಗಗಳು ತಮ್ಮ ಜಾತಿವೈರವನ್ನು ಬಿಟ್ಟು ಸ್ನೇಹಭಾವದಿಂದಿವೆ.

* * * * *

ಗಿರಿರಾಜನ ರಾಜ್ಯ

ಹಿಮಾಲಯ ಪರ್ವತದ ಉತ್ತರದಲ್ಲಿ ಗಿರಿರಾಜನ ನಗರವು ಸುಂದರ ನಂದನವನ, ಕೆರೆಗಳು, ಗದ್ದೆಗಳು ಹಾಗೂ ಬಿಳಿನೈದಿಲೆ ಸರೋಜ ಪುಷ್ಪಗಳಿಂದ ಶೋಭಿಸುವ ಕೊಳಗಳಿಂದ ತುಂಬಿತ್ತು. ಅದು ಸುಂದರ ನದೀನದಗಳಿಂದ ಇಳೆಗೆ ಭೂಷಣವಾಗಿತ್ತು. ಯಾರು ಏನನ್ನು ಬೇಡಿದರೂ ನೀಡುವ ದೇಶವಾಗಿ ಭೂಲೋಕಕ್ಕೆ ಸುಖ ಮಂಗಳವನ್ನುಂಟು ಮಾಡುವ ಪುಣ್ಯವಂತರ ನೆಲೆಯಾಗಿತ್ತು. ಆ ನಾಡಿನ ಪ್ರಜೆಗಳಲ್ಲಿ ಕೀಳು ಆಸೆ, ರಾಜಭಯ ವಿಹ್ವಲತೆಗಳಾಗಲಿ; ವಕ್ರನಡೆ, ಕುಟಿಲತೆ, ಲೋಕ ಕಂಟಕ ಸ್ವಭಾವಗಳಾಗಲಿ ಇರಲಿಲ್ಲ.

ಆ ದೇಶದಲ್ಲಿ ಆಮಯ (ರೋಗ)ಗಳಿರಲಿಲ್ಲ. 'ಆಮಯ' ಎಂಬ ಪದ ಅಕ್ಷರಮಾಲೆಗಳಲ್ಲಿ ಮಾತ್ರವಿತ್ತು. 'ಸಾಮ' ಎಂಬುದು ವೇದ ವಾಚಕವಾಗಿತ್ತು. ಸವಿಮಾತು ಆಡಿ ವಂಚಿಸುವುದಾಗಿರಲಿಲ್ಲ. 'ಭೀಮ' ಎಂಬ ಪದ ಭಯಂಕರ ಚಿತ್ರಣವನ್ನು ಮನಸ್ಸಿನಲ್ಲಿ ಮೂಡಿಸುವಂತಹದಾಗಿತ್ತು. ಭೀಕರತೆ ಎಂಬ ಭಾವ ಹೊಮ್ಮಿಸುತ್ತಿರಲಿಲ್ಲ. 'ಕ್ಷಾಮ' ಎಂಬುದು ಸ್ತ್ರೀಯರನಡು ಕೃಶವಾಗಿದೆ ಎಂಬ ಅರ್ಥ ಹೊಮ್ಮಿಸಲು ಇತ್ತೇ ವಿನಃ ನಾಡಿನ ಸಮೃದ್ಧಿಯಲ್ಲಿ ಕ್ಷಾಮಪದದ ಸುಳಿವಿರಲಿಲ್ಲ.

ಗಿರಿರಾಜನ ಆದೇಶಕ್ಕೆ ಒಳಗಾದ ಆ ದೇಶದಲ್ಲಿ ವಿಪ್ರ ವೇದೋಚ್ಚಾರದ ನಾದವು ಶಿವವಾಕ್ಯದಿಂದ ಕೂಡಿತ್ತು. ಶಿವಜ್ಞಾನದಿಂದ ಮೊಳಗಿತ್ತು. ಕಾಮಹರನಾದ ಶಿವನಪೂಜೆ ಆ ನಾಡಿನೆಲ್ಲೆಡೆಯಲ್ಲಿ ಸದಾ ನಡೆಯುತ್ತಿತ್ತು. ಜನ ಪಾಪಪ್ರವೃತ್ತಿಯಿಂದ ಮುಕ್ತರಾಗಿದ್ದರು. ಅಲ್ಲಿನ ಕಲ್ಲೆಲ್ಲವೂ ಸ್ಪರ್ಶಮಣಿಯಾಗಿ, ಮರಗಳೆಲ್ಲ ಕಲ್ಪತರುಗಳಾಗಿ, ಗಿಡಗಂಟೆಗಳೆಲ್ಲ ಔಷಧಿಗಳಾಗಿ, ಗೋವುಗಳೆಲ್ಲ ಕಾಮಧೇನುಗಳಾಗಿ, ಮಡುಗಳೆಲ್ಲ ಸಿದ್ಧರಸವೆನಿಸಿದ್ದವು.

ಆ ನಾಡಿನಲ್ಲಿ ಭತ್ತದ ಗದ್ದೆಗಳು ನಳನಳಿಸಿ ಬೆಳೆದು ಹಸಿರಾಡಿ – ಹೊಳೆ ಹೊಳೆವ ಭೂವನಿತೆಗೆ ಹೊದಿಸಿದ ಹಸಿರುವಸ್ತ್ರದಂತಿದ್ದವು. ಭತ್ತದ ಪೈರುಗಳು ಸೊಂಪಾಗಿ ಅಂಕುರಿಸಿ, ಹಸುರೇರಿ ಕವಲೊಡೆದು ಪೊಡೆಯೆತ್ತಿ ಹಾಲುತುಂಬಿ ಹುಲುಸಾಗಿದ್ದವು.

ಸುರಿವ ಎಳನೀರಿನಿಂದ ಬಾಳೆಗಳು, ಬಾಳೆಹಣ್ಣುಗಳ ರಸದಿಂದ ಕಬ್ಬುಗಳು, ಕಬ್ಬಿನರಸದಿಂದ ಭತ್ತ, ಭತ್ತದತೆನೆಯ ಹಾಲಿನಿಂದ ಗಿಳಿಗಳು ಬೆಳೆದು ನಾಡು ನಂದನ ಮಯವಾಗಿತ್ತು. ಗಂಧಶಾಲಿ ಭತ್ತದ ಗದ್ದೆಗಳನ್ನು ತಾವರೆಗಣ್ಣಿನ ಹೆಣ್ಣುಮಕ್ಕಳು ಕಾಯುತ್ತಿದ್ದರು. ಹಕ್ಕಿಗಳನ್ನು ಅಟ್ಟುತ್ತಿದ್ದ ಅವರ ತ್ವರಿತನಡೆ ಹಂಸಗತಿಯಂತಿತ್ತು. ಅವರು ಅಬ್ಬರಿಸುವ ನಾದ ಕೋಗಿಲೆಯ ಕೂಗನ್ನು ತಿರಸ್ಕರಿಸುವಂತಿತ್ತು. ಒಲೆದಾಡಿ ಆಕರ್ಷಿಸುವ ಆ ಲಲನೆಯರ ತೋಳುಗಳಿಗೆ ಅಲುಗಾಡುವ ಲತೆಯೆಂದು ತಿಳಿದ ಗಿಳಿಗಳು ಅವರ ಝುಂಕೆಗೆ ಬೆದರದೆ ಗದ್ದೆಯಲ್ಲೆ ಇರುತ್ತಿದ್ದವು. ಆಗ ಆ ಸ್ತ್ರೀಯರು ತಮ್ಮ ಮುಡಿ, ಮೊಲೆ, ನಿತಂಬ ಭಾರದಿಂದ ಅಡಿಯಿಡಲಾರದೆ ಕುಳಿತು ಗಿಳಿಗಳನ್ನು ಬರಿಯ 'ಗಳ' 'ಬಳ' ಶಬ್ದದಿಂದಲೇ ಬೆದರಿಸುತ್ತಿದ್ದರು!.

ದಂತಗಳು ದಾಳಿಂಬೆ ಬೀಜಗಳು!

ಎಳೆಯ ಹೆಣ್ಣೊಬ್ಬಳು ಗಿಳಿಗಳನ್ನು ಸೋವುತ್ತಿರಲು ತುಟಿ ಅರಳಿತು. ಆ ವಿಕಾಸತುಟಿಗಳ ಹಿಂದಿರುವ ದಂತಪಂಕ್ತಿಗಳನ್ನು ಕಂಡ ಗಿಳಿಗಳು – ಅವು ದಾಳಿಂಬೆಯ ಬೀಜಗಳೆಂದು ತಿಳಿದು, ಬಯಸಿ ಅಲ್ಲೇ ಸುಳಿದಾಡುತ್ತಿದ್ದವು!

ಒಂದು ಅರವಟ್ಟಿಗೆಯಲ್ಲಿ ಸುಂದರತರುಣಿ ದಾರಿಗನಿಗೆ ನೀರೆರೆಯುವಾಗ ಅವಳಮುಖ ಅವನಬೊಗಸೆಯಲ್ಲಿ ಪ್ರತಿಬಿಂಬಿಸಿತು. ಅವನು ಅದು ಅವಳ ಮುಖವೇ ಎಂದು ನಲಿದ, ಪ್ರತಿಬಿಂಬಾಧರದ ಮಧುರಸವನ್ನು ಪಾನಗೈಯ್ಯುವ ರೀತಿಯಲ್ಲಿ ಸವಿದ!

ರಾಜಧಾನಿ ಓಷಧಿ ಪ್ರಸ್ತಪುರ

ಗಿರಿರಾಜನ ರಾಜ್ಯದ ರಾಜಧಾನಿ ಓಷಧಿ ಪ್ರಸ್ತಪುರ. ಅದು ನಾಡಿಗೆ ಶಿರೋಮಣಿಯಂತಿದ್ದು ಅನೇಕ ದೇವಾಲಯಗಳಿಂದಲೂ, ಕೊರತೆ ರಹಿತ ಭೋಗ ಸಂಪತ್ತುಗಳಿಂದಲೂ ಕೂಡಿತ್ತು. ಆ ರಾಜಧಾನಿಯನ್ನು ಬಳಸಿ ಹೊರಗೆ ಸುಂದರ ಉದ್ಯಾನವಿತ್ತು. ಅಲ್ಲಿ ಶ್ರೀ ಲಕ್ಷ್ಮೀದೇವಿ ಅಶೋಕವನ್ನು, ಶಾರದೆ ಮಾವನ್ನು, ಶಚಿದೇವಿ ಅರನೇರಿಲನ್ನು, ರಂಭೆ ಕದಳಿಯನ್ನು, ಊರ್ವಶಿ ಅಡಕೆ ಸಸಿಯನ್ನು, ರತಿ ದಾಳಿಂಬೆಯನ್ನು ನೆಟ್ಟಿದ್ದು; ಸುರಸ್ತ್ರೀಯರು ಕಮಲ ಮಡುವನ್ನು ರಚಿಸಿದ್ದರು. ಹಾಗಾಗಿ ಆ ಉದ್ಯಾನ ಸರ್ವಋತುಗಳಲ್ಲಿಯೂ ಶೋಭಿಸುತ್ತಿತ್ತು. ಅಲ್ಲಿಯ ಸುರುಚಿರ ಸಾರಪೂರ್ಣ ಹಣ್ಣುಗಳನ್ನು ಗಿಳಿಗಳು ಕಚ್ಚಿ ಸವಿಯುತ್ತಿದ್ದವು. ಪರಮ ವಿರಕ್ತರಿಗೆ ಇದೆಂತಹ ಮೋಹಕ ವನ ಎನಿಸಿತ್ತು. ಧರೆಯ ಪ್ರಕಾಶವಾಗಿ ಮನೋಹರವಾದ ಆ ಉದ್ಯಾನವು ಕಾಮನವನವನ್ನು ಅಣಕಿಸುವಂತಿತ್ತು.

ರತಿರಾಜನ ಭದ್ರ ಗಜವೊ, ಚೈತ್ರನ ರಾಜಧಾನಿಯೊ, ವನಲಕ್ಷ್ಮಿಗೆ ಎತ್ತಿದ ನವಿಲುಗಿರಿಯ ಛತ್ರಿಯೊ, ವಸಂತನು ಶಶಿಯ ಪ್ರೀತಿಗಾಗಿ ಸಲಹಿದ ಕಲ್ಪ ವೃಕ್ಷವೊ, ನೆಲದಿಂದ ಮೂಡಿದ ನವಮೇಘವೊ ಎಂಬಂತೆ ಮಾವಿನ ಮರವೊಂದು ಅಲ್ಲಿ ಬೆಳಗುತ್ತಿತ್ತು. ಅದರಿಂದ ಹೊಮ್ಮಿದ ಚಿಗುರು, ಮೊಗ್ಗು, ಹೂವು, ಹಣ್ಣು; ಅದಕ್ಕೆರಗುವ ಗಿಳಿಗಳು ದುಂಬಿಗಳು ಕೋಗಿಲೆಗಳು, ಅವುಗಳ ಮಧುರ ಸಂತತಿ ಅಲ್ಲಿ ನಲಿದಾಡುತ್ತಿತ್ತು. ಅದು ವಸಂತನು ಕಾಮನಿಗೆಂದು ನಿರ್ಮಿಸಿದ ನೀಲದ ಅರಮನೆಯಂತಿತ್ತು. ಅಲ್ಲೊಂದು ಕೋಗಿಲೆಯು ನಲಿಯುತ್ತ, ಕೊಕ್ಕನ್ನು ಮೊಗ್ಗಿಗೆ ತುರುಕಿ ನಾಲಗೆಯ ಸವಿ ತೀಟೆಯನ್ನು ಪರಿಹರಿಸಿಕೊಳ್ಳುತ್ತ ಸುಖಿಸುತ್ತಿತ್ತು. ಅದರ ಬನಿಯನ್ನು ಒಂದೇ ಸಮನೆ ಕೂಗಿ ಸಾರುತ್ತಿತ್ತು.

ಸಿರಿ ಬರ್ಪಂದದೆ ಸುಂದರಿ ಬರೆ

ಆ ಉದ್ಯಾನವನದ ಕೊಳಗಳು ಹೊಳೆ ಹೊಳೆವ ಮೀನುಗಳಿಂದ, ಸುಂದರ ಕಮಲಗಳಿಂದ, ಬಿಳಿರೆಕ್ಕೆಯ ಹಂಸಗಳಿಂದ, ಚಕ್ರವಾಕ ಪಕ್ಷಿಗಳಿಂದ, ಝೇಂಕಾರದ ದುಂಬಿಗಳಿಂದಕೂಡಿ ರಮಣೀಯುವಾಗಿದ್ದವು, ಒಂದು ಸರೋವರದಲ್ಲಿ ತಾವರೆಯಬೀಜಕೋಶ ಕರ್ಣಿಕೆಯಲ್ಲಿ ಕಣ್ಮುಚ್ಚಿ ಮಗ್ಗುಲಿಕ್ಕಿ ಕಳಹಂಸೆಯ ಮರಿಗಳು ಸುಖದಿಂದಿದ್ದವು. ಅಲ್ಲಿ ಒಂದು ಹಂಸವು ತನ್ನ ಕಾಂತೆಯನ್ನು ಅಗಲಿತು. ಅತಿ ಉತ್ಕಂಠದಿಂದ ನವನ್ಯೆದಿಲೆಯ ಗುಂಪಿನಲ್ಲಿ, ಕಮಲಗಳ ತಂಡದಲ್ಲಿ, ಬಳ್ಳಿ ಮೊದೆಯಲ್ಲಿ ಹುಡುಕತೊಡಗಿತು. ಮರಳು ದಿಬ್ಬಗಳನ್ನು ಮತ್ತೆ ಮತ್ತೆ ಏರಿ; ಕೊಳದೊಳಗೆ ಮತ್ತೆ ಮತ್ತೆ ಇಳಿದು ಹೊರಬಂದು; ಮೊದೆಗಳಲ್ಲಿ ಕಿವಿಯಾನಿಸಿ ಬಳಲಿತು. ಬರಿದೆ ಗಳಗಳನೆ ನಡೆಯಿತು.

ವರಹಂಸ ಹೊರಹೋಗಿ ನೋಡಿತು, ಬೆಚ್ಚಿತು. ಸುಸ್ತಾಗಿ ನೊಂದಿತು. ಕಣ್ಣುಗಳನ್ನು ಅರೆದೆರೆದು, ಕಾಂತೆಯನ್ನು ನನೆದು ನಿಟ್ಟುಸಿರುಬಿಟ್ಟಿತು. ಆಗ ಇದ್ದಕ್ಕಿದ್ದಂತೆ ತನ್ನ ಸುಂದರಿ

ಬರಲು ಅದಕ್ಕೆ ಸಿರಿ ಬಂದಂತಾಯಿತು! ಓಡಿ ಹೋಗಿ ಕೊಕ್ಕಿಗೆ ಕೊಕ್ಕು ಕೂಡಿಸಿ, ರೆಕ್ಕೆಯಗಲಿಸಿ ಎರಡುದೇಹಗಳು ಒಂದೆಂಬಂತೆ ಆಲಂಗಿಸಿಕೊಂಡಿತು.

ಭೂಮಿಯದೊಂದು ಗಂಧಗುಣ ಮಿರ್ಪೆಡೆಯೋ

ಹೂವಾಡಿಗರು ಅಲ್ಲಿಯ ಹೂ ತೋಟವನ್ನು – ಕಾಮನ ಬಾಣದ ಬತ್ತಳಿಕೆಯೋ, ಭ್ರಮರಗಳ ಸತ್ರವೋ, ಭೂಮಿಯ ಗಂಧಗುಣವಿರುವ ನೆಲೆಯೋ, ಪ್ರೇಮದ ಸೌರಭವನ್ನು ಹೊತ್ತು ಶೋಭಿಸುವ ವಾಯುವಿನ ತಾಣವೋ ಎಂಬಂತೆ ಬೆಳಸಿದ್ದರು. ಅಲ್ಲಿ ಸುರಗಿ, ಸಂಪಿಗೆ, ಮಾಲತಿ, ಪಾದರಿ, ಕಣಿಗಲೆ, ಇರವಂತಿ, ಮೊಲ್ಲೆ, ಮಲ್ಲಿಗೆ, ಸರೋಜ, ಕನ್ನೈದಿಲೆ, ಕೇದಿಗೆ ಮಂತಾದವುಗಳು ತಮ್ಮ ಕಂಪನ್ನುಬೀರಿ ಕಂಗೊಳಿಸಿದ್ದುವು. ಆ ನವಗಂಧಕ್ಕೆ ಆಸೆಗೊಂಡುಬಂದ ದುಂಬಿಗಳು ಸದಾ ನಾನಾ ಮಂಜುಳಧ್ವನಿಗೈದು ಆನಂದದಲ್ಲಿ ಕಂಪನ್ನು ಈಂಟುತ್ತಿದ್ದವು. ಅವು ಮನ್ಮಥನು ಮುದ್ರಿಸಿದ ಅಂಬಿನ ಅರಗಿನ ಮುದ್ರೆಯಂತಿದ್ದವು! ಅಂತಹ ಸರ್ವಸುಖ ನೆಲೆಯಾಗಿ, ಚೆಲುವು ಮೈದಾಳಿನಿಂತ, ಮನೋಹರ ತಂಗಾಳಿಯ ಬನಕ್ಕೆ–ಪ್ರತಿದಿನವೂ ಕಿಂಪುರುಷರು, ಕಿನ್ನರರು, ಖೇಚರರು, ಮನುಷ್ಯರು ಅಲಂಕಾರಗೊಂಡು ಬರುತ್ತಿದ್ದರು. ಆ ಸ್ತ್ರೀ ಪುರುಷರು ಅಲ್ಲಿ ಮನ್ಮಥ ಸುಖಾಬ್ಧಿಯಲ್ಲಿರುತ್ತಿದ್ದರು.

ಉದ್ಯಾನವನ ಹಾಗೂ ಓಷಧಿ ಪ್ರಸ್ತಪುರದ ನಡುವೆ ಅತ್ಯಂತ ವಿಶಾಲವೂ, ಅನುಕೂಲಕರವೂ ಆದ ಸೈನಿಕರ ಶಸ್ತ್ರಾಭ್ಯಾಸದ ಬೀಡಿತ್ತು. ಅಲ್ಲಿ ಹಯಶಾಸ್ತ್ರ ವಿಚಕ್ಷಣರು, ಗಜ ಶಿಕ್ಷಕರು, ಭೀಕರ ಭಾವದಲ್ಲಿ ಹರಿದಾಡುವ ಯೋಧರು ಇದ್ದರು. ನಯದಿಂದ ಕುದುರೆಸವಾರಿ ಮಾಡುವ ವೈಹಾಳಿ ಕಾವಲು ಅಲ್ಲಿತ್ತು. ಅನೆಗಳನ್ನು ಕಟ್ಟಿಹಾಕಿರುವ ಬಾಳ್ಗಂಬವನ್ನು ನೋಡಿದರೆ, ಪರ್ವತರಾಜನು ತನ್ನ ಹಗೆಯಾದ ಇಂದ್ರನ ಕಾರಣದಿಂದ ಛಲದಲ್ಲಿ ಸುಳಿವ ನೀಲ ಮೇಘಾವಳಿಯನ್ನು ಸೆರೆಯಲ್ಲಿಟ್ಟಂತೆ ಕಾಣುತ್ತಿತ್ತು. ಆನೆಗಳಿಂದ ಸುರಿವ ಮದೋದಕವೇ ಮಳೆ, ಘೀಂಕಾರವೇ ಗುಡುಗು, ದಂತವೇ ಸಿಡಿಲೆಂಬಂತೆ ಇದ್ದು – ಅಲ್ಲಿಯ ಕರಿಗಳು ಕಾರ್ಗಾಲದಂತಿದ್ದುವು.

ಆ ಪುರವನ್ನು ಸುತ್ತಿದ ಕೋಟೆಯನ್ನು ಬಳಸಿ ಕಂದಕವಿದ್ದು, ಅದು ನೀರಿನಿಂದ ತುಂಬಿತ್ತು. ಸ್ಫಟಿಕದ ಕೋಟೆಯು ಬುರುಜುಗಳನ್ನು ಹೊಂದಿ, ಅಟ್ಟಳೆಯಲ್ಲಿ ಶಸ್ತ್ರಾಸ್ತ್ರಗಳ ಹಾಗೂ ಕಾವಲುಗಾರರ ಕೊಠಡಿಗಳಿದ್ದುವು. ಎತ್ತರದಲ್ಲಿ ಏರುಪತಾಕೆಗಳು ಹಾರಾಡುವ ಗೂಟಗಳಿದ್ದುವು, ಆಯುಧ ಯಂತ್ರವಿರುವ ಡೆಂಕಣಿ ಹೊಂದಿದ ಅಸೀಮಶಕ್ತಿ ಪ್ರದರ್ಶಿಸುವ ಹುಲಿಮುಖದ ಗೋಪುರವು ಅಲ್ಲಿ ಮೆರೆದಿತ್ತು. ಆ ನಗರವು ಇಂದ್ರನ ಅಮರಾವತಿ, ಮಿಥಿಲೆ, ಉದಯಾದ್ರಿಗಳಿಗಿಂಥ ಐದುಪಟ್ಟು ಹೆಚ್ಚು ಗುಣೋನ್ನತಿಯನ್ನು ಹೊಂದಿತ್ತು.

ಆ ನಗರದಲ್ಲಿ ಹೊಸಸುಣ್ಣ ಬಳಿದ ಮನೆಗಳು ಬೆಳದಿಂಗಳನ್ನು, ಚಿನ್ನದ ಕಲಶ ಮೇಲೆ ಹೊಂದಿದ ಮನೆಗಳು ಹೊಂಬಿಸಿಲನ್ನು ಹೊಮ್ಮಿಸುತ್ತಿದ್ದವು. ನಗರದ ಬೀದಿಗಳಲ್ಲಿ ವಿನಯಶೀಲ ವ್ಯಾಪಾರಿಗಳಿದ್ದರು, ಕೊಳ್ಳುವ ಧನಿಕರ ಮುಂದೆ ವಿಕ್ರಯಕ್ಕಾಗಿ ವಿವಿಧ ಧಾನ್ಯ ರಾಶಿಗಳಿದ್ದವು. ಅಲ್ಲಿ ಮನೋಹರವಾದ ಮುತ್ತಿನ ಹಾರವನ್ನೊಳಗೊಂಡ ಸಮಸ್ತ ರತ್ನರಾಶಿಗಳ ರತ್ನಪಡಿ ವ್ಯಾಪಾರಿಗಳ ಬೀದಿಗಳಿದ್ದವು. ಅದು ನೀರಿಲ್ಲದ ಸಮುದ್ರ (ರತ್ನಾಕರ) ದಂತೆ ಇತ್ತು!.

ಮಂಗಳಮಯ ಶಿವಾಲಯಗಳು

ಓಷಧಿ ಪ್ರಸ್ತಪುರದ ಶಿವಾಲಯವು ಮುತ್ತು, ಮಾಣಿಕ್ಯ, ಗೋಮೇಧಿಕ, ಪುಷ್ಯರಾಗ, ವೈಡೂರ್ಯ, ಪಚ್ಚೆ, ಹವಳ, ನೀಲ ಮುಂತಾದ ರತ್ನ ಕಲಶಗಳಿಂದ ರಚಿತವಾಗಿತ್ತು. ಶಿವ ದೇವಾಲಯಗಳು ವೇದಘೋಷ, ಮಂತ್ರ ಘೋಷ, ಬಾಗಿ ನಮಸ್ಕರಿಸುತ್ತಿರುವ ಶರಣಜನರ ಭಕ್ತಿಘೋಷದಿಂದ ತುಂಬಿತ್ತು. ಅಲ್ಲಿ ಪುರಾಣ ಪ್ರವಚನ, ಸ್ಮೃತಿಚಿಂತನ, ಗೀತಾ ಪಠನ, ಪರಶಿವನ ವಿಮಳ ಜ್ಞಾನಸಂವಾದ, ಕೃತಿಪಾರಾಯಣ ಸದಾ ನಡೆಯುತ್ತಿತ್ತು.

ದೇವಾಲಯವು ಯಜ್ಞಘೋಷ, ವಿವಾಹ ಮಹೋತ್ಸವದ ವಿಸ್ತಾರ ಘೋಷಗಳಿಂದ ಮಂಗಳಮಯವಾಗಿತ್ತು.

ಶಿವನ ಸೇವೆಗಾಗಿ ಉತ್ಸಾಹದಿಂದ ಬರುತ್ತಿರುವ ಮುತ್ತೈದೆಯರ ಕಾಲ್ಗೆಜ್ಜೆಗಳ ಮಂಜುಳನಾದ, ರಾಜ ಪುತ್ರರು ಹಾಡುತ್ತಿರುವ ಶಿವಗೀತೆಗಳ ಪ್ರಣಾದ, ಬಂಧನ ಮುಕ್ತವಾಗಿ ಸಾಗುತ್ತಿರುವ ಆನೆಗಳ ಸರಪಳಿಯಿಂದ ಹೊಮ್ಮಿದ ಉಜ್ವಲನಾದ, ರಾಜನೊಂದಿಗೆ ಸಾಗುತ್ತಿರುವ ಕವೀಂದ್ರರ ಸ್ತೋತ್ರನಾದವು ಆ ರಾಜಬೀದಿಯಲ್ಲಿ ಮೊಳಗುತ್ತಿದ್ದುವು.

ಗಿರಿರಾಜ

ಓಷಧಿ ಪ್ರಸ್ತಪುರದ ಅರಸ ಉದಾತ್ತ ಗುಣಶಾಲಿಯಾದ ಗಿರಿರಾಜ. ಆತ ಶ್ರೀ ಪರಮೇಶ್ವರನ ಪಾದಕಮಲ ದುಂಬಿಯಾಗಿದ್ದು, ಮಹಾತೇಜಸ್ವಿಯಾದ ಸಾರ್ವಭೌಮನಾಗಿದ್ದನು.

ಪರ್ವತಗಳಿಗೆಲ್ಲ ರಾಜನಾದ ಆತ ಶತ್ರುರಾಜರು ಮಣಿಯುವ ಕಿರೀಟದ ಮಣಿಪ್ರಭೆಗಳಿಂದ ಬೆಳಗುವ ಪಾದಗಳನ್ನು ಹೊಂದಿ, ಸರ್ವಲೋಕ ವಂದ್ಯನೂ, ಭಯರಹಿತನೂ, ಪ್ರತಾಪಶಾಲಿಯೂ ಆಗಿದ್ದನು. ಆತ ಮಹಿಮಾವಂತ, ಭೋಗಭಾಸುರ, ಉದ್ದಾಮಗುಣಶಾಲಿ, ಪ್ರಚಂಡ ಪರಾಕ್ರಮಶಾಲಿಯಾಗಿ ಶಿವನಿಗೆ ಪ್ರಿಯನಾಗಿದ್ದನು.

ಗಿರಿರಾಜನ ಪುಣ್ಯವಲ್ಲಭೆ ಮೇನಾದೇವಿ. ಆಕೆ ತೇಜಸ್ವಿ, ಪೂಜ್ಯೆ, ಪರಾಪರಕ್ಕೆಲ್ಲ ಮುಖ್ಯಳಾದವಳು. ಆಕೆಯು ಪತಿವ್ರತೆ, ಸತ್ಯೆ, ಶಿವಭಕ್ತೆ, ಶಾಂತೆ, ಶುಭಕರ್ಮನಿರತೆ, ಸದ್ಗುಣವತಿ, ವಿಲಾಸ ವಿಭ್ರಮ ಕಲೆಗಳಿಗೆ ನಿಧಿ ಎಂಬಂತಿದ್ದಳು.

ಆ ದಂಪತಿಗಳು ನಿಶ್ಚಿಂತೆಯಿಂದಿದ್ದು, ಹರ್ಷಕ್ಕೆ ಇಂಬುಗೊಟ್ಟು ನಲಿನಲಿದು ಸಮಸುಖದಲ್ಲಿದ್ದರು. ಅವರಿಗೆ ಮೈನಾಕನೆಂಬ ಮಗನು ಹುಟ್ಟಿದನು. ಗಿರಿರಾಜನು ಸಕಲ ಸಾಮ್ರಾಜ್ಯವನ್ನು ಪ್ರತಾಪದಿಂದ ಆಳುತ್ತಿದ್ದನು.

ಶೈಲರಾಜನ ಒಡ್ಡೋಲಗ

ಓಷಧಿ ಪ್ರಸ್ತಪುರದಲ್ಲಿ ಅರಸನ ಮನೆಯು ಮಲಯಜ ತಿಲಕದಂತಿತ್ತು. ಅರಮನೆಯ ಸಭಾನಿಳಯದಲ್ಲಿ ನವ ಕನಕಮಣಿಗಳಿಂದ ಹೊಳೆಯುವ ರತ್ನ ಸಿಂಹಾಸನದಲ್ಲಿ ಶತ್ರು ಭಯಂಕರನಾದ ಗಿರಿರಾಜನು (ಶೈಲರಾಜ) ವಿಜೃಂಭಿಸುತ್ತಿದ್ದನು. ಸಿಂಹಾಸನದ ಎರಡೂ ಕಡೆಗಳಲ್ಲಿ ವೀರಲಕ್ಷ್ಮಿ ಜಯಲಕ್ಷ್ಮಿ ಯರಂತೆ ಚಾಮರಗ್ರಾಹಿಣಿಯರು ನಿಂತು ಚಾಮರ ಬೀಸುತ್ತಿದ್ದರು. ಆ ಚಾಮರಗ್ರಾಹಿಣಿಯರು ಬಿಂಕದಿಂದ ಕೊಂಕಿನಿಂತು ಕ್ರಮವರಿತು ಬೀಸುವಾಗ ಹೊಮ್ಮುವ ಕಂಕಣ ಝುಣತ್ಕಾರವು ಸಭೆಯ ಕಿವಿಗೆ ಸವಿದೋರಿ ಇಂಪಾಗಿತ್ತು.

ಆ ಒಡ್ಡೋಲಗವು ಸಕಲ ಭೂಪಾಲರ ಸುಕೃತ ಬೀಜರಾಜಿಗಳನ್ನು ಜಗದ್ವಿಜಯ ಪಟ್ಟಕ್ಕೆ

ಕೂಡಿಸಿ ಸೇಸೆಯಿಕ್ಕುವಂತಿತ್ತು. ಅಲ್ಲಿ ರವಿ ಮಂಡಲದಲ್ಲಿ ಪರಿವೇಷ ಗೊಂಡಂತೆ – ಲಾಳ, ಗೌಳ, ಚೋಳ, ಕೇರಳ, ಪಾಂಡ್ಯ, ಮಗಧ, ಮಾಳವ, ವಂಗ, ಕಳಿಂಗ, ಬಂಗಾಳ, ತೇಲಂಗ, ಗುರ್ಜರ, ಹಮ್ಮೀರ, ನೇಪಾಳ ಮುಂತಾದ ರಾಜರು ಆಸೀನರಾಗಿದ್ದರು.

ಗಿರಿರಾಜನು ಸುರಗುರುವಿನ ಬುದ್ಧಿಯು ದೇವಲೋಕದ ಹೊಳಪೆಂದು, ದೈತ್ಯಗುರುವಿನ ಮಂತ್ರಶಕ್ತಿ ಅಧೋಭುವನ ವಿಲಾಸವೆಂದು ತಿರಸ್ಕರಿಸಿದ್ದನು. ಆತ ನಿಜ ಮಂತ್ರಶಕ್ತಿಯಿಂದ ಎಲ್ಲ ಪರ್ವತಗಳನ್ನೂ ಕಾಲಿಗೆ ಎರಗಿಸಿಕೊಳ್ಳುವ ಮಂತ್ರಿಗಳನ್ನು ಹೊಂದಿದ್ದನು. ಅವರು ಆ ದೊರೆಗೆ ನೆನೆವಮನ, ನುಡಿವ ನಾಲಗೆ, ನೋಡುವಕಣ್, ಕೊಡುವಕೈ, ಹಿಡಿವ ಆಯುಧದಂತಿದ್ದರು.

ವೈರಿಗಳು ಮೇಲೇರಿ ಬರಲು ಅಸಾಧ್ಯವೆನಿಸುವ ಗುಹೆ ಗವಿ, ಗಿರಿ ಶ್ರೇಣಿ, ಬಿದಿರು ಬೆಟ್ಟಗಳಿಂದ ಹಿಮವಂತನ ಗಿರಿದುರ್ಗಗಳು ಕೂಡಿದ್ದವು. ಅವು ವಜ್ರಧರನಂತೆ ಶತ್ರುಗಳನ್ನು ಪ್ರತಿಭಟಿಸುತ್ತಿದ್ದವು. ಅಲ್ಲಿ ಸಕಲ ತರುಸಮೂಹಗಳಿಂದ ಕೂಡಿ ಕತ್ತಲನ್ನುಂಟು ಮಾಡಿ ವನದುರ್ಗಗಳು ವೈರಿಗಳ ಧೈರ್ಯವನ್ನು ಕುಗ್ಗಿಸುತ್ತಿದ್ದವು.

ತನ್ನ ಭುಜ ಪ್ರತಾಪವೇ ರೂಪುಗೊಂಡಂತೆ ತಂಡತಂಡವಾಗಿ ಕುಳಿತ ಸೇನಾಧಿಪತಿಗಳ ಮಧ್ಯೆ ಹಿಮವಂತ ಶೋಭಿಸುತ್ತಿದ್ದನು. ಗಜಾರೋಹಿಗಳು, ಅಶ್ವಚತುರರು, ವೀರಜಟ್ಟಿಗಳು, ಕಾಲಿಗೆ ಬಿರುದಿನ ಪೆಂಡೆಯ ಧರಿಸಿದ ಪರಾಕ್ರಮಿಗಳು ಅಲ್ಲಿ ಆಸೀನರಾಗಿದ್ದರು. ಸರಸಕವಿಗಳು, ಆರಭಟೀಗಳು, ಗಮಕಿಗಳು, ತರ್ಕತಂತ್ರ ಕೋವಿದರು, ಗಾಯಕರು, ನೃತ್ಯಗಾಯಕಿಯರು ಚಿತ್ರಕಾರರು ಅಲ್ಲಿ ವಿಜೃಂಭಿಸಿದ್ದರು.

ರಾಜಸಭೆಯಲ್ಲಿದ್ದ ಪ್ರತಿಹಾರಿಗಳು ನೆರೆದ ರಾಜರನ್ನುದ್ದೇಶಿಸಿ – ಆಂಧ್ರನೇ ನುಡಿಯದಿರು, ಕಳಿಂಗ ಕಯ್ಮುಗಿ, ವಂಗನೆ ಬಾಗು, ಕೇರಳನಿಗೆ ಎಡೆಕೊಡು, ಚೋಳ ಲಾಳರೇ ಪಕ್ಕಕ್ಕೆ ಸರಿಯಿರಿ, ಮಗಧೇಶ ನುಗ್ಗಬೇಡ, ಪಾಂಡ್ಯ ಕಾಣ್ಕೆ ಸಿದ್ಧಪಡಿಸಿಕೊ, ಮಾಳವನೆ ಬಿನ್ನವಿಸು, ಗೌಳನೆ ಹಿಂದಿರುಗು ಎಂದು ಹೇಳುತ್ತಿದ್ದರು.

ಗಿರಿರಾಜನು ಓಲಗ ನಡೆಸುತ್ತ ಮಧ್ಯಾಹ್ನ ಸೂಚನೆಯ ಡಿಂಡಿಮವಾದ್ಯ ಕೇಳಿದನು. ಓಲಗವನ್ನು ಮುಕ್ತಾಯಗೊಳಿಸಿದನು. ಸಾಮಂತರಾಜರು, ಮಹಾ ಅಮಾತ್ಯರು ಧರಿಸಿದ್ದ ಆಭರಣಗಳ ಧ್ವನಿ, ಗಣಿಕೆಯರು ಧರಿಸಿದ್ದ ನಾನಾ ನವಮಣಿಗಳ ಸದ್ದು, ಪ್ರತಿಹಾರಿಗಳ ಗದರುವಿಕೆ, ವಂದಿಸಲು ಬಾಗಿದ ರಾಜರುಗಳ ಕಿರೀಟಗಳೊಂದಿಗೆ ಸಭೆ ಮುಕ್ತಾಯವಾಯಿತು.

ಪುತ್ರಿಯಂ ಬಯಸುತಿರ್ದಪುದೆನ್ನ ಮನಂ

ಸಿಂಹಾಸನದಿಂದ ಎದ್ದು ಹೊರಟ ಗಿರಿರಾಜನು ಸ್ನಾನಮಾಡಿ, ಹಣೆಯಲ್ಲಿ ವಿಭೂತಿಧರಿಸಿ, ರುದ್ರಾಕ್ಷ ಮಾಲಾಧಾರಿಯಾದನು. ಸ್ಥಿರಚಿತ್ತದಿಂದ ಲಿಂಗ ಪೂಜೆಯನ್ನು ಮಾಡಿದನು. ಪ್ರಸಾದ ಸ್ವೀಕರಿಸಿ ತೃಪ್ತನಾದನು. ಸ್ಮರನ (ಕಾಮನ) ಬಾಣಗಳಿಗೆ ಮನಸ್ಸುಕೊಡದೆ ರಾಣಿ ಮೇನೆಯೊಡನೆ ಸುಖದಿಂದಿದ್ದನು. ನಿರ್ಮಲ ಮನಸ್ಸಿನಿಂದ ಸಮಸುಖದಲ್ಲಿರುವಾಗ ಗಿರಿರಾಜನ ಜೀವಸಮಾನೆಯೂ, ಸಾಧು ಸುಶೀಲೆಯೂ ಆದ ರಾಣಿ ಮೇನಾದೇವಿ ನಯದಿಂದ ನುಡಿದಳು:

'ನನ್ನ ಮನಃ ಪ್ರಿಯನೇ, ನನಗೀಗಾಗಲೇ ಮಗನಿದ್ದರೂ, ನಲ್ಮೆಯ ಮೊಲೆಯುಣ್ಣುತ್ತ,

ಪ್ರೀತಿಯಿಂದ ನಗುವ, ನಿಂತಿರುವಾಗ ಅಪ್ಪಿಕೊಳ್ಳುವ ಪುತ್ರಿಯು ಬೇಕು. ಉಬ್ಬಿ ಹಿಗ್ಗಿ, ಓಡಾಡುವ, ಮರಳಿಬರುವ; ಕಣ್ಣು ಅರಳಿಸುವ, ಕಣ್ಮುಚ್ಚಿ ನೋಡುತ್ತ ಆಡುತ್ತ ನಲಿನಲಿದು ಹುರುಪಿನಿಂದ ತೊಲೆದಾಡುವ; ಮುದ್ದೆಂಬಕಾಂತಿಯಲ್ಲಿ ನೆಲಸಿದ ಪುತ್ರಿಯನ್ನು ಬಯಸುತ್ತಿರುವೆ.'

'ನನ್ನೆದೆಯ ಮುಗುಳಿಗೆ ಆಶಿಸುತ್ತಿರುವೆಯಾ?'

'ಹೌದು'

'ರೂಪ ಲಾವಣ್ಯ ಗುಣ ನಿನ್ನದೇ ಇರಬೇಕಲ್ಲವೇ?'

ತುಸು ನಾಚಿದ ಮೇನಾದೇವಿ,

'ನಿಮ್ಮಂಥ ಸ್ಥಿರಚಿತ್ತದ ಶಿವಆರಾಧಕಳು ಬೇಕು ನನಗೆ.'

'ಓಹ್, ಗೆದ್ದೆ ನಾನು. ಮಗುವನ್ನು ಪಡೆಯುವುದು ಹೇಗೆ? ಸಾಧನಾ ಮಾರ್ಗ ಯಾವುದು?'

'ಅನುಪಮ ಸೌಂದರ್ಯವತಿಯೂ, ಶಿವನಿಗೆ ವಧುವೂ ಆಗುವಂತಹ ಮಗಳನ್ನು ನಾನು ವಿಶೇಷಆಸಕ್ತಿಯಿಂದ ಪಡೆಯುತ್ತೇನೆ!'

'ಶಿವನ ವಧು!'

'ಹ್ಞೂ, ಪರ್ವತ ಶ್ರೇಷ್ಠನೇ, ನನ್ನ ತಪಸ್ಸಿಗೆ ಒಪ್ಪಿ ಕಳುಹಿಸು.'

ಗಿರಿರಾಜನು ಪತ್ನಿಯ ಶೋಭಾಯಮಾನ ಭಾವದಲ್ಲಿ ಮಿಂದನು. ಮಂಗಳ ಪ್ರಾರ್ಥನೆಗೆ ಒಪ್ಪಿದನು. ಪರಿಚಾರಪಟುಗಳೆನಿಸುವ ತರುಣಿಯರನ್ನು ಆಕೆಯ ಸೇವೆಗೆ ನೇಮಿಸಿದನು. ವರಪುತ್ರಿಯನ್ನು ಪಡೆಯಬೇಕೆಂಬ ಬಯಕೆಯನ್ನು ಮನ್ನಿಸಿದನು. ತಲೆಗೆ ಮುಡಿದ ಮಲ್ಲಿಗೆಯಲ್ಲಿ ದುಂಬಿಯಾಡುತ್ತಿರುವ, ಪರಮಾನಂದವೆಂಬ ತಪೋಭಿಲಾಷೆ ಹೊಂದಿದ ಯೋಗಧ್ಯಾನೆ ಮೇನಾದೇವಿಯನ್ನು ಗಿರಿರಾಜನು ತಪಸ್ಸಿಗೆ ಕಳುಹಿಸಿಕೊಟ್ಟನು.

ಮೇನಾವತಿ ಬಸಿರಲ್ಲಿ ಪಾರ್ವತಿ

ಮೇನಾದೇವಿಯು ತಪಸ್ಸಿಗೆ ಯೋಗ್ಯವಾದ ಒಂದು ರಮ್ಯ ಸ್ಥಳವನ್ನು ಆಯ್ದುಕೊಂಡಳು. ಅಲ್ಲಿ ಒಂದೇಕಾಲಿನಲ್ಲಿ ನಿಂತು ಮಹಾದೇವಿ ಪಾರ್ವತಿಯ ನಿರ್ಮಲರೂಪವನ್ನು ತನ್ನ ಹೃದಯಕಮಲದಲ್ಲಿ ಒಂದಾಗಿಸಿಕೊಂಡಳು. ನಯನಸರೋಜಗಳು ಮುಚ್ಚಿದುವು. ಚಿತ್ತವೆಂಬ ಬಿಳಿಯನೈದಿಲೆ ಅರಳಿತು. ಧ್ಯಾನಚಂದ್ರನು ಉದಯಿಸುವಾಗ ಅವಳ ಗಂಭೀರ ತಪಸ್ಸೆಂಬ ಸಮುದ್ರವು ಉಕ್ಕೇರಿತು.

ಮೇನಾದೇವಿಯ ಚಿತ್ತಭೂಮಿಯಲ್ಲಿ ತಪೋಬೀಜವು ಬೇರೂರಲು, ಅದು ಅವಳ ಅಂತಃಕರಣದಲ್ಲಿ ಅಂಕುರಿಸಿತು. ಬುದ್ಧಿಯಲ್ಲಿ ಚಿಗುರಿತು. ನಿಷ್ಠೆಯಲ್ಲಿ ಕುಡಿಹರಿದು ಪರಶಿವನ ರಾಣಿಯ ಮೆಲ್ಲಡಿಗಳೆಡೆಗೆ ನೆಗೆದೋಡಿತು.

ತಕ್ಷಣ ಭವಾನಿಗೆ (ಪಾರ್ವತಿ) ಮೇನಾದೇವಿಯ ತಪಸ್ಸಿನ ಶಕ್ತಿಯ ಅರಿವಾಯಿತು. ಕರುಣಾನಿಧಿಯಾದ ದೇವಿಯು ಮೇನೆಯ ತಪವನ್ನು ಮೆಚ್ಚಿದಳು. ತಂದೆ ದಕ್ಷನು ಮಾಡುವ ಯಾಗವನ್ನು ನೋಡುವ ನೆಪಹೇಳಿ ಶಿವನಅಪ್ಪಣೆ ಪಡೆದಳು. ಕೈಲಾಸವನ್ನುಬಿಟ್ಟು ದಕ್ಷನ ಪುರದತ್ತ ನಡೆದಳು.

ಮುಕ್ಕಣ್ಣ ಜೊತೆಗಿಲ್ಲದೆ ಯಾಗಕ್ಕೆಹೋಗಿ ತಂದೆ ದಕ್ಷನ ಮುಂದೆ ನಿಂತಳು. ಆತ

ನಿರ್ಗುಣ ಶಿವನನ್ನು ನಿಂದಿಸಿದನು. ಅದನ್ನು ಸೈರಿಸಲಾರದೆ ದಾಕ್ಷಾಯಿಣಿಯು ವಿಮಳ ಯೋಗದಿಂದ ಹಿಂತಿರುಗಿ ಬಂದಳು.

ಮೇನೆಯ ಹೃತ್ಕಮಲದ ಬೆಳಗಿನೊಳಗೆ ಬೆಳಕಾದ ಪಾರ್ವತಿ

ಪಾರ್ವತಿಯು ಬಂದಬಗೆ ಕಲ್ಪವೃಕ್ಷದಿಂದ ಬೀಜ, ರತ್ನದಿಂದ ಕಾಂತಿ, ಪೂರ್ಣಚಂದ್ರನಿಂದ ಕಿರಣ, ಅಮೃತದಿಂದ ಮಾಧುರ್ಯ, ಹೂವಿನಿಂದ ಕಂಪು ಹೊಮ್ಮಿದಂತಿತ್ತು. ಹಾಗೆ ಬಂದ ಅವಳು ಶಾಂತ ರವಿಕಿರಣದ ಪ್ರಕಾಶ ನಿಧಿಯಂತೆ ತಪೋಮಗ್ನೆಯಾದ ರಾಣಿ ಮೇನಾದೇವಿಯ ಮುಂದೆ ನಿಂತಳು. ತಪೋನಿಷ್ಠೆಗೆ ಮೆಚ್ಚಿದಳು. ಸತ್ಕರುಣ ಭಾವದಲ್ಲಿ 'ನಿನ್ನ ಬಸಿರಲ್ಲಿ ಬರುತ್ತೇನೆ' ಎಂದು ಹೇಳುತ್ತ ಮೇನೆಯ ಹೃತ್ಕಮಲದ ಬೆಳಗಿನಲ್ಲಿ ಬೆಳಕಾದಳು.

ಮೇನಾದೇವಿಗೆ ಅದರ ಅರಿವಾಯಿತು. ಆನಂದದ ಕಡಲಿನಲ್ಲಿ ಮಿಂದು ಹರ್ಷದಲ್ಲಿ ಓಲಾಡಿದಳು. ತಪಸ್ಸನ್ನು ಮುಕ್ತಾಯಗೊಳಿಸಿದಳು. ಪಾರ್ವತಿಯು ತನ್ನಹೊಟ್ಟೆಯಲ್ಲಿ ಹುಟ್ಟುವಳೆಂಬ ಸಂತಸದಲ್ಲಿ ಪಟ್ಟಣಕ್ಕೆ ಹಿಂದಿರುಗಿದಳು. ಓಷಧಿ ಪ್ರಸ್ತಪುರದ ಜನ ಹಾಡಿನಿಂದ, ರಾಜಪರಿವಾರದವರು ವಾದ್ಯ ವಿಶೇಷಗಳಿಂದ, ವಿಪ್ರರು ವೇದ ಘೋಷಗಳಿಂದ, ಮುತ್ತೈದೆಯರು ಮಂಗಳ ಕಳಶಗಳಿಂದ ಸ್ವಾಗತಿಸಿದರು.

ಪುರವನ್ನು ಪ್ರವೇಶಿಸಿದ ಮೇನಾದೇವಿ ರಾಜಗೃಹವನ್ನು ಹೊಕ್ಕಳು. ತನ್ನ ಪ್ರಾಣೇಶನನ್ನು ಅಪ್ಪಿ ಮನೋರಥ ಸಿದ್ಧಿಯಾದುದನ್ನು ತಿಳಿಸಿದಳು. ತನ್ನ ಒಳ ಹೊರಗಿನ ಸುಖಾನುಭವದಲ್ಲಿ ಹರ್ಷಗೊಂಡಳು. ಪಾರ್ವತಿಯನ್ನು ತನ್ನ ಹೊಟ್ಟೆಯಲ್ಲಿ ಪಡೆಯುವೆನೆಂಬ ಭಾವದಲ್ಲಿ ರಜಸ್ವಲೆಯಾದಳು. ನಾಲ್ಕು ದಿನ ಕಳೆದು ಶುದ್ಧ ಸ್ನಾನವಾಡಿ ವಿಮಲ ಸೌಂದರ್ಯ ನಿಧಿಯಂತೆ ಕಂಗೊಳಿಸಿದಳು. ಬೆಳಗುವ ಕನ್ನಡಿಯಂತೆ, ಮೋಡಗಳಿಲ್ಲದ ಚಂದ್ರನಂತೆ, ಪುಟಕ್ಕಿಟ್ಟ ಚಂದ್ರನಂತೆ ನಿರ್ಮಲವಾಗಿ ಮಂಗಳಮಯವಾಗಿದ್ದಳು. ಅವಳು ಮನೋಹರ ಸ್ತನಗಳಿಗೆ ಲೇಪಿಸಿದ ಪರಿಮಳ ದ್ರವ್ಯ, ತುರುಬಿಗೆ ಮುಡಿಸಿ ಕಂಪುಸೂಸುವ ಹೂ, ಒಡಲಾವರಿಸಿದ ಸುಂದರ ರೇಷ್ಮೆವಸ್ತ್ರಗಳಿಂದ ಅಲಂಕೃತಳಾಗಿ ತನ್ನ ಪತಿಯ ಧ್ಯಾನದಲ್ಲಿದ್ದಳು.

ನಲಿವಿನ ಸ್ಪರ್ಶ ಹಿಗ್ಗಿತು

ಕುಸುಮಮಾಲೆ ಇರುವಲ್ಲಿಗೆ ದುಂಬಿ ಬರುವಂತೆ ಗಿರಿರಾಜನು ಸ್ಮರರಾಗಾತುರದಿಂದ ಶಯ್ಯಾಗಾರಕ್ಕೆ ಬಂದನು. ಹಂಸತೂಲಿಕಾತಲ್ಪದಲ್ಲಿ ಮೇನೆಯೊಡನೆ ಕುಳಿತನು. ಬಳ್ಳಿವರಿದ ಸ್ನೇಹ ಕುಡಿಯಿಟ್ಟಿತು, ನಲಿವಿನ ಸ್ಪರ್ಶ ಹಿಗ್ಗಿತು. ಸಹಜ ಆಮೋದ ಸುಖವನ್ನುಂಟು ಮಾಡಿತು. ಗಾಢಾಲಿಂಗನಕ್ಕೆ ಆಸೆ ಪಡುತ್ತಿರುವಾಗ ಲವಲವಿಕೆಯನೋಟ, ಮಿಡುಕುವ ತೋಳು, ನಡುಗುವ ಹಸ್ತ, ಹೊಮ್ಮುವ ಬೆವರು, ಮೂಡುವ ಪುಳಕ, ಉಕ್ಕಿಬರುವ ಆನಂದಾಶ್ರು, ಗದ್ಗದ ನುಡಿಗಳಿಂದ ಮೇನೆ ಮನೋಹರವಾಗಿದ್ದಳು. ಸತಿಪತಿಗಳು ಒಂದಾಗಿ ಜಿಹ್ವೆ ನಲಿದಾಡುತ್ತಿರಲು ಸುಖವು ಒಲೆದಾಡಿ ಮೋಹಗೊಂಡಿತ್ತು.

ಪ್ರಿಯಭಾವದ ಆ ದಂಪತಿಗಳ ಮನಸ್ಸು ಮನಸ್ಸಿನಲ್ಲಿ, ಕಣ್ಣು ಕಣ್ಣಿನಲ್ಲಿ, ಮುಖ ಮುಖದಲ್ಲಿ, ಉಸಿರು ಉಸಿರಲ್ಲಿ, ಕೈ ಕೈಯಲ್ಲಿ, ಮೈ ಮೈಯಲ್ಲಿ ಬೆರೆತು ಹೋದವು, ಸುರತ ಚಂದ್ರೋದಯದಲ್ಲಿ ಅವರ ನಯನಕೌಮುದಿಗಳು ಅರಳಿದವು. ಶರೀರಪ್ರಭೆಯೆಂಬ

ಬೆಳುದಿಂಗಳು ತುಂಬಿ ತೊನೆಯಿತು. ಸಮಾನ ರಾಗಭೋಗದಲ್ಲಿ ಒಂದಾದ ಗಿರಿಪತಿ ಮೇನಾಸತಿಯು ಸುಖಸಂತುಷ್ಟ ಹೃದಯರಾಗಿ ಸುಪ್ರಸನ್ನರಾಗಿದ್ದರು. ಕಳಂಕರಹಿತ ಚಂದ್ರನಂತೆ, ಬೆಳುದಿಂಗಳನ್ನು ಪಡೆದ ಚಕೋರಿಯಂತೆ ಪ್ರಕಾಶಿಸಿದರು.

ಆ ಸಮಯದಲ್ಲಿ ನಿರ್ಮಲ ರೂಪಿ ಭವಾನಿಯ ಉಜ್ವಲ ತೇಜಸ್ಸು ಉತ್ಸಾಹದಿಂದ ಮೇನಾದೇವಿಯ ಹೃತ್ಕಮಲಕ್ಕೆ ಇಳಿದು ಬಂದಿತು. ರಾಣಿಯ ಶಕ್ತಿಸುಖದ ಸಂಗದಲ್ಲಿ ಒಂದಾಗಿ ಹೋಗಿ ಬೆಳಯತೊಡಗಿತು.

ಪುಣ್ಯಗರ್ಭದಲ್ಲಿ ಕಂಗೊಳಿಸಿತು

ಬೆಳಗುವ ಸರೋಜ ಗರ್ಭದೊಳಗೆ ಪ್ರಕಾಶಿಸುವ ಹಂಸದ ಎಳೆಯ ಪಿಂಡದಂತೆಯೂ, ಶರತ್ಕಾಲದ ಮೋಡದ ಮರೆಯಲ್ಲಿರುವ ಸ್ವಚ್ಛ ಚಂದ್ರಲೇಖೆಯಂತೆಯೂ, ಉಜ್ವಲ ಬೀಜದಲ್ಲಿ ಹೊಳೆಯುವ ಪುಣ್ಯ ಸುಧಾಲತೆಯಂತೆಯೂ ಮೇನಾದೇವಿಯ ಸುಖ ಉದರದಲ್ಲಿ ಪುಣ್ಯಗರ್ಭವು ಕಂಗೊಳಿಸಿತು. ತಿಂಗಳು ತಿಂಗಳು ತುಂಬುತ್ತಿದ್ದಂತೆ – ಅರಿವಿನಗಣಿ, ಮುಕ್ತಿಯ ಮಣಿ, ಚಂದ್ರಶೇಖರನ ಅಚ್ಚ ಸೊಗದ ಮೊಳಕೆಯು ಮೇನೆಯಲ್ಲಿ ಬೆಳೆಯುತ್ತಿರಲು – ಅವಳ ಶರೀರದ ಹೊರಗೆ ಗರ್ಭಸೂಚನೆಯು ಕಾಣತೊಡಗಿತು.

ಬಸಿರುಬೆಳೆಯಲು ನಾಭಿಯ ಮೇಲೆ ಅಡ್ಡವಾಗಿರುವ ಮೂರು ಮಡಿಕೆಗಳು ಕಾಣದಾದವು. ನಾಭಿಯಆಳ ಇಲ್ಲವಾಯಿತು. ಸ್ತನದತೊಟ್ಟುಗಳು ಕಪ್ಪಾದವು. ನೋಟವು ಬಳಲಿಕೆಯನ್ನು ಪ್ರಕಟಿಸಿದವು. ಅವಳ ನಡೆ ಮಂದವಾಗಿ, ಕೆನ್ನೆ ಕಾಂತಿಸೂಸಿ, ಮೆಲ್ನುಡಿ ಮೃದು ಮಧುರವಾದವು. ಆನಂದ ರಸದಲ್ಲಿ ತುಳುಕಾಡಿದ ಮುಖ ಮೆಲುನಗೆ ಸೂಸುತ್ತಿತ್ತು.

ಆಕೆಯ ಮನಸ್ಸು, ಹೊಸ ಬಯಕೆಗಳ ನೆಲೆಯಾಯಿತು. ನವಮಾಸ ತುಂಬಲು ಪುಣ್ಯಗರ್ಭ ಪಕ್ವವಾಯಿತು. ಸುಮುಹೂರ್ತಗಳು ಭರದಲ್ಲಿ ಕಾಯುತ್ತಿದ್ದುವು. ಮೇನಾದೇವಿಯ ಪುಣ್ಯಗರ್ಭದಿಂದ ಪಾರ್ವತಿದೇವಿಯು ಜನಿಸಿದಳು. ಗಿರಿಜೆಯ ಜನನಕಾಲದಲ್ಲಿ ಲಕ್ಷ್ಮಿ ಪಕ್ಕದಲ್ಲಿದ್ದು, ಅನಸೂಯೆ ನಿಂತಿದ್ದು, ಸಪ್ತ ಮಾತೃಕೆಯರು ಒಂದುಗೂಡಿ ಬಂದಿದ್ದರು. ಆ ಶುಭ ಮುಹೂರ್ತವನ್ನು ರತಿದೇವಿ ಕೊಂಡಾಡಿದಳು. ಅರುಂಧತಿ, ಸಾವಿತ್ರಿ, ಶಚಿದೇವಿ ಆನಂದಿಸಿದರು. ಇಳೆಯಲ್ಲಿ ಪಾರ್ವತಿಯು ಹುಟ್ಟಲು ಚಂದ್ರ ಕಳೆಯೇರಿದನು. ಬೆಳದಿಂಗಳು ಹರಡಿತು. ಕಾಮನ ಭುಜಬಲ ಹೆಚ್ಚಿತು. ಇಂದುಧರ ಪರಶಿವನ ಎಡಭಾಗ ಅದುರಿತು. ಮೇನಾದೇವಿ ಗಿರಿರಾಜರ ಉತ್ಸವಸಾಗರ ಉಕ್ಕೇರಿತು.

ಪುಣ್ಯ ಶಿಶುವಾದ ಪಾರ್ವತಿಗೆ ಗಿರಿಜಾದೇವಿ ಎಂದು ಹೆಸರಿಟ್ಟರು. ಗಿರಿಜಾ ಜಡೆಮುಡಿ, ಇಂದು ಬಾಹುಬಳೆ, ಹಣೆಗಣ್ಣು, ಅಕ್ಷಮಾಲೆ, ಒಳ್ಳೆಯ ಉಡುಗೆ, ಕೈಬಳೆಗಳಿಂದ ಕೂಡಿ ನವಕಾಂತಿಯಿಂದ ಬೆಳಗುತ್ತಿದ್ದಳು. ಪುಣ್ಯ ಸುರದ್ರುಮದ ಕಂಪು, ಪರಾಪರ ಮುಕ್ತಿ, ಕಾಮಧೇನುವನ್ನು ಜೊತೆಗೂಡಿ ತಂದಂತೆ ಕಂಗೊಳಿಸುತ್ತಿದ್ದಳು.

* * * * *

ಶಿವಲಿಂಗೇಕ್ಷಣ ಲೋಲುಪೆ

ಶಿವಭಕ್ತೆ, ಶಿವೋತ್ಸವೆಯಾದ ಆ ಶಿಶುವಿಗೆ ಸದಾ ಶಿವಲಿಂಗವನ್ನು ನೋಡುವ ಆಸೆ, ಶಿವ ಪ್ರಸಾದವನ್ನು ಪಡೆಯುವ ಮನಸ್ಸು, ಹಾಗಾಗಿ ಅದು ಶಿವ ಪುಣ್ಯಾಂಬುನಿಧಿಯಾದ ಶಿವನನ್ನು ನೆರೆನೆಚ್ಚಿ ಕಣ್ಣುಮುಚ್ಚಿತು! ಕಣ್ಣು ತೆರೆಯಲೇ ಇಲ್ಲ. ಅದನ್ನು ಕಂಡು ಮೇನಾ ಮತ್ತು ಗಿರಿರಾಜರು ಹೆದರಿದರು. ಗುರು ಶಿವಾಚಾರ್ಯರನ್ನು ಕಂಡು ತಮ್ಮ ಆತಂಕವನ್ನು ಬಿನ್ನವಿಸಿದರು. ಶಿವಜ್ಞಾನಿಗಳಾದ ಅವರು ಹೀಗೆ ಹೇಳಿದರು:

'ಈ ಭೂಮಿಯಲ್ಲಿ ಹಿಂದೆ ಬಾಣನೆಂಬುವನು ಹುಟ್ಟಿದಾಗ ಕಣ್ಣುಗಳನ್ನು ತೆರೆದಿರಲಿಲ್ಲ. ಲಿಂಗವನ್ನು ತೋರಿಸಿದಾಗ ತಟ್ಟನೆ ಕಣ್ಣುತೆರೆದನು. ತಾಯಿಯ ಮೊಲೆಯುಂಡನು. ಸಜ್ಜನೆ ಗಿರಿಜಾತೆ ಕಣ್ಣು ತೆರೆಯದಿರಲು ಅದೇ ಕಾರಣವಿರಬೇಕು.'

ಆ ನುಡಿ ಕೇಳಿದ ಗಿರಿರಾಜ ಶಿವಮಂದಿರಕ್ಕೆ ಹೋಗಿ ಶಿವಲಿಂಗವನ್ನು ತಂದು ಒಲವಿನಿಂದ ಗಿರಿಜೆಗೆ ತೋರಿಸಿದನು. ಸಮುದ್ರಕ್ಕೆ ಚಂದ್ರನನ್ನು, ಪುಣ್ಯಕ್ಕೆ ಮುಕ್ತಿಯನ್ನು ತೋರಿಸಿದಂತಾಗಿ ಗಿರಿಸುತೆಯು ಕಣ್ಣು ತೆರೆದಳು. ಕೈಗಳನ್ನು ಜೋಡಿಸಿ ಕೈ ಮುಗಿದಳು. ಹಿಗ್ಗಿದಳು. ಅಭವನಲ್ಲಿ ಬೇರೂರಿ ಪಲ್ಲವಿಸಿದಳು. ಫಲವಾದಳು. ತಾಯಿ ಮೇನೆಯ ಮೊಲೆಯುಂಡಳು. ಶಿವ ಪ್ರಸಾದದ ಬೆಣ್ಣೆ ಸವಿದಳು.

ಗಿರಿರಾಜನು ತನ್ನ ಕುವರಿಗೆ ಜಾತಕರ್ಮವನ್ನು ನೆರವೇರಿಸಿದನು. ಅಂಬಿಕೆಯು ಬೆಳಗುವ ಕಣ್ಣು, ಕೆನ್ನೆ, ಶರೀರಗಳಿಂದ ನಳನಳಿಸುತ್ತಿದ್ದಳು. ಶಿವಲಿಂಗದ ಸುಖಲತೆಯಾಗಿ, ಸಮಸ್ತಲಕ್ಷಣಗಳ ನಿಧಿಯಾಗಿ ಶೋಭಿಸುತ್ತಿದ್ದಳು. ಅಲ್ಲಿ ನೆರೆದಿದ್ದ ಸ್ತ್ರೀಲೋಕವು ಜಯಘೋಷ ಮಾಡಿ ನಲಿಯಿತು.

'ಜಯ ಜಯ ಜಯ ಜಯತು ಶುಭೋ
ದಯೆ ವರನಿಧಿ ಮಾಯೆ ದೇವಿ ಶರ್ವಾಣಿ ಶಿವ
ಪ್ರಿಯೆ ಶಾಶ್ವತೆ ಶಾಂತೆ
ಜಗತ್ತ್ರಯ ಹಿತೆ ಶರಣು.'

ಆ ಪುಣ್ಯ ಕೀರ್ತಿಯೊಂದಿಗೆ ಮಂಗಳವಾದ್ಯಗಳಾದ ಶಂಖ, ಕಹಳೆ, ಡಿಂಡಿಮ, ಕರಡೆ, ಮೃದಂಗಗಳು ಮೊಳಗಿದುವು. ಕಲ್ಪವೃಕ್ಷವು ಪುಷ್ಪವೃಷ್ಟಿ ಮಾಡಿತು. ಆ ಸಂತಸದಲ್ಲಿ ಗಿರಿರಾಜ ಓಕುಳಿಯಾಡಿದನು. ಸತ್ಪಾತ್ರರಿಗೆ ಗೋ, ಕನ್ಯಾ, ವಸ್ತ್ರ, ಆನೆ, ಭೂ, ಧನಕನಕಾದಿಗಳನ್ನು ದಾನ ಮಾಡಿದನು. ಆತನ ಕೀರ್ತಿಲತೆ ಕುಡಿಯಿಟ್ಟು ಭೂಲೋಕದಲ್ಲೆಲ್ಲ ಹಬ್ಬಿತು. ಮೇನಾದೇವಿ ಗಿರಿರಾಜನೊಂದಿಗೆ ಪರಿಜನ, ಪುರಜನರೆಲ್ಲ ಆನಂದಗೊಂಡರು.

ಲೀಲೆಯಿಂದ ಇಳೆಗೆಬಂದು ಜನ್ಮತಳೆದ ಪುಣ್ಯವಾರಿಧಿ, ಅಪಾರ ಕಿರಣ ಪ್ರಭೆ ಶರ್ವಾಣಿಗೆ ಮುತ್ತೈದೆಯರು 'ಗಿರಿಜಾತೆ' ಎಂದು ಹೆಸರಿಟ್ಟರು. ಸ್ಫಟ ಮಣಿಗಳಿಂದ ಪ್ರಕಾಶಿಸುವ ರತ್ನದ ತೊಟ್ಟಿಲಲ್ಲಿಟ್ಟು ತೂಗಿದರು. ಸಪ್ತರ್ಷಿ ಪತ್ನಿಯರೇ ಮೊದಲುಗೊಂಡು ಲಲಿತ, ಶ್ರೀರಾಗ, ಬಂಗಾಳಿ ಎಂಬ ವಿವಿಧ ರಾಗಗಳಲ್ಲಿ ಹಾಡಿ ತೂಗಿದರು. ನೆರೆದ ಜನಪದ ಹೆಂಗಳೆಯರು ಜೋಗುಳ ಹಾಡಿದರು.

'ಜೋ ಸಕಳ ತತ್ವಮಯೆ ಜೋ

ಜೀ ಸತ್ತ್ವಾದಿ ಗುಣರಹಿತೆ ಜೋ ನಿರ್ಮಳೆ ಜೋ।
ಜೋ ಸದ್ಗುಣೆ ಜೋ ಶಾಶ್ವತೆ
ಜೋ ಸಂಪದೆ ಜೋ ವಿಶಾಲೆ ಜೋ ಶಿವೆ ಜೋ ಜೋ ॥'

ಸೌಂದರ್ಯದ ಅಂಕುರವಾಗಿ, ಸೌಕುಮಾರ್ಯದ ಪಲ್ಲವದಂತೆ, ಸತ್ಯದ ಫಲದಂತೆ, ಸಲ್ಲಕ್ಷಣದ ಲಾವಣ್ಯದಂತೆ; ಶಿವಜ್ಞಾನದ ದೇಹದಂತೆ, ಶಿವನ ಸುಖದಂತೆ, ಮುಕ್ತಿಯ ಮುಖದಂತ; ಕಾಂತಿಯ ಲತೆಯಂತೆ, ನಿರುಪಾಧಿಕ ಜ್ಯೋತಿಯಂತೆ – ಸಕಲ ಜಗನ್ಮಾತೆಯಾದ ಗಿರಿಜಾತೆ ಶೈಶವಲೀಲೆಯಲ್ಲಿ ತೊಳತೊಳಗಿ, ಬೆಳಬೆಳಗಿ, ನಳನಳಿಸಿ ಬೆಳೆಯುತ್ತಿದ್ದಳು.

ಗಿರಿಜೆಯ ತೊದಲ್ನುಡಿಗಳು – ಮನಸ್ಸಿನಲ್ಲಿ ಹುಟ್ಟಿ, ಕಂಠದಲ್ಲಿ ಅನುನಯದಿಂದ ಬೆಳೆದು, ನಾಲಗೆಯಲ್ಲಿ ದಟ್ಟಡಿಯಿಟ್ಟು ಸುಳಿದಾಡುತ್ತಿದೆಯೊ ಎಂಬಂತಿದ್ದುವು.

ಗೆಜ್ಜೆಗಳ ಉಲಿತ, ಮಾಂಗಾಯಿಗಳ (ಮಾವಿನಕಾಯಿ ಆಕಾರದ ಆಭರಣ) ಒಲೆದಾಟದಲ್ಲಿ ಮೆಲ್ಲಗೆ ನಗುತ್ತ ಗಿರಿಜೆ ಶಿವಾಲಯಕ್ಕೆ ಹೋದಳು. ನಕ್ಕು ಮುದ್ದಿಸಿ, ಅಪ್ಪಿ ತೊಲೆದಾಡಿನಿಂತು ಬಾಲಲೀಲೆಯಲ್ಲಿ ನಲಿದ ಅವಳು ಕೊನೆಗೆ ತಾಯಿಯ ಮೊಲೆಯನ್ನು ಮರೆತು ಅಭವನ ಆಟದಲ್ಲಿ ಮಗ್ನಳಾದಳು.

ಮನಃ ಕುಸುಮದಿಂ ಪರಮನನೇಕಾಂತ ಭೂಮಿಯೊಳ್ ಪೂಜಿಸುವಳ್

ಗಿರಿಜೆಯು ಯಾರನ್ನೂ ಬಗೆಯದೆ, ಯಾರ ಸಹಾಯವನ್ನೂ ಅಪೇಕ್ಷಿಸದೆ ಪರಮಪ್ರೀತಿಯಿಂದ ಶಿವಾಲಯಕ್ಕೆ ಹೋದಳು. ಅಲ್ಲಿಯೇ ನೆಲಸಿದಳು. ಅದನ್ನು ಕಂಡು ಗಿರಿರಾಜನು ವ್ಯಾಕುಲನಾದನು. ಹೊನ್ನಿನ ಕಡಗದ ಲಿಂಗವಂತೆಗೆ, ರುದ್ರಾಕ್ಷಿಯ ಭದ್ರಾಂಗಿಗೆ, ವಿಭೂತಿಯ ವಿಳಾಸನಿಧಿಗೆ, ಪಶುಪತಿಯ ಪಟ್ಟದಮಹಾದೇವಿಗೆ, ಸಕಲಬ್ರಹ್ಮಾಂಡವನ್ನು ರಕ್ಷಿಸುವ ರುದ್ರಾಣಿಗೆ – ರಕ್ಷಣೆಗಾಗಿ ತಂದೆಯು ಅಂಗರಕ್ಷಕರನ್ನು ನೇಮಿಸಿದನು. ದಾದಿಯರೊಡಗೂಡಿ ಷೋಡಶ ಸಹಸ್ರ ವಿಲಾಸಿನಿಯರನ್ನು ನಿಯಮಿಸಿದನು. ಅಂತಹ ವೈಭವದಲ್ಲಿದ್ದ ಗಿರಿಜೆಯು ಸರ್ವವಿದ್ಯೆಗಳನ್ನು ಅಭ್ಯಾಸ ಮಾಡದಿದ್ದರೂ, ಪೂರ್ವ ಸಂಸ್ಕಾರಬಲದಿಂದ ಅವು ಸಹಜವಾಗಿ ಅವಳಲ್ಲಿದ್ದುವು.

ಗಿರಿಜೆಯು ಕೇಳೀವನದಲ್ಲಿ ವಿಹರಿಸುತ್ತ ಸರೋವರ, ಲತಾವನ, ಕೃತಕ ಪರ್ವತ, ಮರಳುದಿಣ್ಣೆ ಎಲ್ಲೆಂದರಲ್ಲಿ ಶಿವನನ್ನು ಒಲಿದು ಪೂಜಿಸುತ್ತಿದ್ದಳು. ಅವಳು ನುಣ್ಮಳಲಿಂದ ದಿವ್ಯಲಿಂಗವನ್ನು ರಚಿಸಿ, ಭಾವಪರವಶಳಾಗಿ ಕಣ್ಣುಗಳಿಂದ ಆನಂದಾಶ್ರುಗಳನ್ನು ಸುರಿಸುತ್ತ ತದೇಕಚಿತ್ತದಿಂದ ಆರಾಧಿಸುತ್ತಿದ್ದಳು. ಲಿಂಗ ರಚಿಸುವ ಅವಳ ಕೈಬೆರಳುಗಳ ಸ್ಪರ್ಶಕ್ಕೆ ಶಿವ ಬಂದು ನಿಲ್ಲುತ್ತಿದ್ದ!

ಮಲ್ಲಿಗೆ ಸಂಪಿಗೆಯಿಂದ ಹರನನ್ನು ಪೂಜಿಸುವ ಗಿರಿಜೆಯು ಏಕಾಂತದಲ್ಲಿ ತನ್ನ ಮನಃಕುಸುಮದಿಂದಲೇ ಅರ್ಚಿಸುತ್ತಿದ್ದಳು.

ಗಿರಿಜೆಯ ಬಾಲಲೀಲೆ ಶಿವಲೀಲೆಯಾಯಿತು. ಎಡ ಬಲ ನೋಡದೆ, ಹಸಿವು ಬಾಯಾರಿಕೆಗಳನ್ನರಿಯದೆ, ರಾತ್ರಿ ಹಗಲೆನ್ನದೆ, ಪರಿಜನರ ಗೊಡವೆಗೆ ಹೋಗದೆ ಶಿವನಲ್ಲಿ ಮರುಳಾಗಿದ್ದಳು. ಅದನ್ನು ಕಂಡ ಸಖಿಯರು ಆಶ್ಚರ್ಯದಿಂದ ಬೆದರಿದರು. ಅವರಲ್ಲಿ ಭಾರತಿಗೆ ಸಮನಾದ ಓರ್ವ ನಾರಿಯನ್ನು ಗಿರಿರಾಜನಲ್ಲಿಗೆ ಕಳುಹಿಸಿದರು. ಅವಳು ಗಿರಿರಾಜನ ಓಲಗಕ್ಕೆ ಬಂದುನಿಂತು, ಭಯ ಭಕ್ತಿಯಿಂದ ನಿವೇದಿಸಿದಳು:

'ಮಹಾಸ್ವಾಮಿ, ದೇವಕುಮಾರಿ ಬಾಲೆ ಗಿರಿಜೆಯು ಸಮರ್ಥಳು, ಅತಿ ಸ್ವತಂತ್ರಳುಆಗಿ ಓಡಾಡುತ್ತ ಬೆಟ್ಟಗುಡ್ಡಗಳು, ಸರೋವರ, ಮರಳು ದಿಬ್ಬಗಳಲ್ಲಿ ದೇವರದೇವ ಶಿವನನ್ನು ಸದಾ ಅರ್ಚಿಸುತ್ತಿರುತ್ತಾಳೆ.'

'ಹಸಿವು, ನೀರಡಿಕೆಯಾಗುವುದಿಲ್ಲವೆ?'

'ಇಲ್ಲ ಪ್ರಭು. ತಾಯಿಯ ಮೊಲೆಹಾಲನ್ನೂ ಕುಡಿಯಳು.'

'ದಟ್ಟಕಾಡಿನ ಭಯ?'

'ಪ್ರಭುವೇ, ಭಯುವೆಂಬುದು ಅವಳಲ್ಲಿಲ್ಲ. ದಟ್ಟಪೊದೆಗಳನ್ನು ಹೊಕ್ಕು. ಕಲ್ಲುಮುಳ್ಳುಗಳನ್ನು ಹಾದು ತನಗೆ ಸುಖ ಸ್ಥಳವೆಂದು ಕಂಡುಬಂದಲ್ಲಿ ವಿರೂಪಾಕ್ಷನ ಪೂಜೆಗೆ ತೊಡಗುತ್ತಾಳೆ.'

'ನೀವು ಪೂಜೆಯಿಂದ ಕರೆತರುವುದಿಲ್ಲವೆ?'

'ಎಲ್ಲಿಯ ಕರೆ ತರುವುದು ಸ್ವಾಮಿ, ಗಿರಿಜೆ ಶಿವನ ಪೂಜೆಗೆ ತೊಡಗಿ ಧ್ಯಾನದಲ್ಲಿರುವಾಗ ಚಿತ್ರಪಟದಂತೆ, ನೆಲಕ್ಕೆಅಂಟಿದಂತೆ, ಎರಕಹೊಯ್ದಂತೆ, ಕಡೆದಂತೆ ಇರುತ್ತಾಳೆ!'

'ಬೇರೆ ಬಗೆಯಲ್ಲಿ ನಿಮ್ಮತ್ತ ಸೆಳೆಯುವುದಿಲ್ಲವೆ?'

'ದೊರೆಯೇ, ಅವಳು ಶಿವನ ಸೆಳೆತದಲ್ಲಿದ್ದು, ಲಿಂಗಾರ್ಚನೆಯಲ್ಲಿ ನಲಿದಾಡಿ ಅಪ್ಪಿ ರೋಮಾಂಚನಗೊಂಡಿರುವಾಗ ಯಾರನ್ನೂ ನೋಡಳು! ನುಡಿಯಳು!'

ಗಿರಿರಾಜನು ಮಗಳನ್ನು ಕಾಣಲು ಹರ್ಷಚಿತ್ತನಾಗಿ ಹೊರಟನು. ಅವನನ್ನು ಅನುಸರಿಸಿ ರಾಜಪರಿವಾರ, ಚತುರಂಗಸೇನೆ ಹೊರಟಿತು. ಅರಳಿದ ಕಮಲಗಳ, ಪರಿಮಳಾಸಕ್ತದುಂಬಿಗಳ ಝೇಂಕಾರದ ಕೊಳವೊಂದರ ದಡದಲ್ಲಿ ನುಣ್ಮಳಲ ಶಿವಲಿಂಗವನ್ನು ಅಗಣಿತ ಪ್ರೇಮದಿಂದ ಪೂಜಿಸುತ್ತಿರುವ ಮಗಳನ್ನು ಕಂಡನು. ಅತಿ ಸಂತೋಷದಿಂದ ಆನಂದಾಶ್ರುಗಳೊಡನೆ,

'ಬಾ ಎನ್ನ ಆಯುಷ್ಯವೇ, ಬಾರ ಪುಣ್ಯತತಿಯೇ, ಬಾರೆನ್ನ ಸೌಂದರ್ಯವೇ; ಬಾರ ಶೈವನಿಧಿಯೇ, ಬಾರೆನ್ನ ಪ್ರಾಣವೇ, ಬಾರೆನ್ನ ಮಾತಾಮಹೇ' ಎಂದು ಪ್ರೀತಿಯಿಂದ ಕರೆದನು.

ತಂದೆಯ ರಸಾರ್ದ್ರ ಸಾತ್ವಿಕಸ್ವರ ಕೇಳಿದ ಗಿರಿಜೆಯು ತಿರುಗಿ ನೋಡಿದಳು. ಶಿವಲಿಂಗವನ್ನುಬಿಟ್ಟು, ನಗುತ್ತ ನಲಿಯುತ್ತ ಕೆಳದಿಯರೊಡನೆ ಬಂದಳು. ತಂದೆಯನ್ನು ಅಪ್ಪಿಕೊಂಡಳು, ರಾಜನು 'ನನ್ನ ಪ್ರಾಣವೇ' ಎಂದು ತಬ್ಬಿ ಮುಂದಲೆ ಮೂಸಿದನು. ಆನೆಯನ್ನು ಏರಿ ಪುರಕ್ಕೆ ಹಿಂದಿರುಗಿದನು.

ಮಗಳೊಡನೆ ಅರಮನೆ ಪ್ರವೇಶಿಸಿ ಸಿಂಹಾಸನದಲ್ಲಿ ಕುಳಿತನು. ಅನಂತ ಕಾಂತೆಯರು ಗಿರಿಜೆ ಗಿರಿರಾಜನಿಗೆ ಆರತಿಯೆತ್ತಿದರು. ಮೇನಾದೇವಿ ಬಂದು ಮಗಳನ್ನುನೋಡಿ ಪುಳಕಗೊಂಡಳು. ಆನಂದದಿಂದ ಕಣ್ಣುಗಳು ತೇವಗೊಂಡವು. ಸಿಂಗರದ ಶಿಶುವನ್ನು ಅಪ್ಪಿ ಮುದ್ದಾಡಿದಳು. ದಂಪತಿಗಳು ಪಾರ್ವತಿಯನ್ನು ಪ್ರೀತಿಯಿಂದ ಸಲಹುತ್ತಿದ್ದರು.

ಗಿರಿಜೆಗೆ ಹತ್ತು ವರ್ಷ

ನಳನಳಿಸುತ್ತ ಬೆಳೆದ ಗಿರಿಜೆಗೆ ನೋಡನೋಡುತ್ತ ಹತ್ತುವರ್ಷವಾಯಿತು. ಮನ್ಮಥನ ಕುಸುಮ ಬಾಣದ ಮೊನೆಯನ್ನು ಹರಿತಗೊಳಿಸುವ ರೂಪು ಅವಳದಾಗಿತ್ತು. ಅದನ್ನು

ಕಂಡು ಮೇನಾದೇವಿ ಮತ್ತು ಗಿರಿರಾಜರು ಹರ್ಷಗೊಂಡರು. ಮಗಳನ್ನು ನೋಡುತ್ತ ದೃಷ್ಟಿ ತೆಗೆಯಲು ಬಾಯಿಂದ ಉಫ್ ಎಂದು ಊದಿದರು. ಸಂತಸವನ್ನು ತಮ್ಮತಮ್ಮಲ್ಲಿಯೇ ಹಂಚಿಕೊಳ್ಳುತ್ತ ರಾಜ ನುಡಿದನು:

'ನನ್ನ ಕುವರಿ ಶುದ್ಧ ಚಾರಿತ್ರ್ಯಳು.'

'ಬಾಲ್ಯ ಕಳೆದು ಯೌವನ ಬಂದಿದ್ದು ಸೋಜಿಗದಂತೆ ನಡೆದು ಹೋಗಿದೆ.'

ತನ್ನ ರಾಣಿಯಮಾತಿಗೆ ತಾನೂ ಕಣ್ಣರಳಿಸಿ ಅಚ್ಚರಿ ವ್ಯಕ್ತಪಡಿಸುತ್ತ ಹೇಳಿದ:

'ಹೌದು. ವರ್ಣನೆಗೆಮೀರಿದ ರೂಪು ಲಾವಣ್ಯ ಹೊಮ್ಮಿದೆ.'

'ಅವಳ ನಗೆಯಲ್ಲಿ ನಸುಲಜ್ಜೆ ಇಣುಕಿದೆ.'

'ನಡೆ ಗಂಭೀರವಾಗಿದೆ.'

ಹೆಣ್ಣಿನ ಭಾವವರಿತ ರಾಣಿ ಮೇನೆಯು ಸಂಕೋಚಗೊಂಡು ನುಡಿದಳು:

'ನೋಟದಲ್ಲಿ ಆಸೆ ಮೂಡಿದೆ. ಮೊಲೆಯುಬ್ಬಿ ನಾಚಿಕೆ ಮನೆ ಮಾಡಿದೆ.'

'ಯೌವನೋದಯವೋ?'

'ಬಾಲ್ಯ ವಿಮೋಚನೆ.'

'ಮೇನೆ, ಮಗಳ ಮುಂಗುರುಳು ವಿಶಾಲವಾಗಿದೆ.'

'ಹೌದು ಪ್ರಭು – ತಿಲಕ ವಿಡುವಾಗ ಮುಖ ಕನ್ನಡಿಯಲ್ಲಿ ಹೊಳೆಯುತ್ತದೆ.'

'ಕುವರಿಯ ದಂತಪಂಕ್ತಿ ಏನೋ ಒಂದು ಬಗೆಯಲ್ಲಿ ನುಡಿಯಲು ಆಶಿಸುತ್ತದೆ.'

'ನಡು ಕೃಶವಾಗಿ, ನುಡಿ ಮೌನವಾಗುತ್ತಿದೆ.'

ಅವರು ಹೀಗೆ ಮಾತನಾಡುತ್ತ ದಿನ ಕಳೆಯುತ್ತಿರಲು – ವನಕ್ಕೆ ಸಹಕಾರ (ಮಾವು), ಮಾವಿಗೆ ವಸಂತಋತು, ವಸಂತನಿಗೆ ಕಾಮ, ಕಾಮನಿಗೆ ಕಾಮನಬಿಲ್ಲು, ಬಿಲ್ಲಿಗೆ ಹೂಬಾಣ ಸೇರುವಂತೆ ಪಾರ್ವತಿ ನವ ಯೌವನವತಿಯಾದಳು. ಶಿವನನ್ನು ಧ್ಯಾನಿಸುವ ಗಿರಿಜೆಯ ಯೌವನವು ದಿನದಿಂದ ದಿನಕ್ಕೆ ವಿಕಾಸಗೊಳ್ಳುತ್ತ ಅವಳು ಸೌಂದರ್ಯದ ನಿಧಿಯಾದಳು. ಅದನ್ನು ವರ್ಣಿಸಲು ಹನ್ನೆರಡು ಜನ ಶಾರದೆಯರಿಗೂ, ಸಾವಿರ ಜನ ಆದಿಶೇಷರಿಗೂ ಸಾಧ್ಯವಿಲ್ಲ ಎಂದ ಮೇಲೆ ಮತ್ತಾರು ವರ್ಣಿಸಲು ಸಾಧ್ಯ? ಪಾರ್ವತಿಯು ತನ್ನ ಮಧುರ ಭಾವ, ಮನೋಹರ ಲಕ್ಷಣ, ಚೆಲುವಿನಿಂದೊಡಗೂಡಿದ ಸಂಭ್ರಮ ವಿಭ್ರಮಗಳಿಂದ ಶೋಭಿಸುತ್ತಿದ್ದಳು.

ವಸಂತನಂತೆ ಕಂಗೊಳಿಸಿದಳು

ಪಾರ್ವತಿಯ ನವಯೌವನವು ವಸಂತನಂತೆ ಅನುರಾಗದ ರಂಗಿನಿಂದ, ಮನ್ಮಥನ ಮತ್ತಗಜದಂತೆ ಮಂದಗಮನವಾಗಿ, ಕಾಮನ ಪುಷ್ಪಬಾಣಗಳಂತೆ ಜಗನ್ಮೋಹಕವಾಗಿತ್ತು. ಅದು ವನಲತೆಯಂತೆ ಕೋಮಲವೂ, ಸುವರ್ಣ ಕಳಶದಂತೆ ರಮಣೀಯವೂ, ಪೂರ್ಣಚಂದ್ರನಂತೆ ಕಲಾಭರಿತವೂ ಆಗಿತ್ತು. ಯೌವನ ಸಹಜವಾದ ಆಸೆ ಮುಖದಲ್ಲಿ, ಮಾತು ಕಣ್ಣಲ್ಲಿ, ನಗೆ ಕೆನ್ನೆಯಲ್ಲಿ, ಕೋಪ ಹುಬ್ಬಿನಲ್ಲಿ, ಅರಿವು ಬುದ್ಧಿಯಲ್ಲಿ ಮೂಡಿದ್ದವು.

ಗಿರಿಜೆಯ ಸೌಂದರ್ಯದ ವಿಷಯ ಕೇಳಲು ಅಮೃತ ಪ್ರಾಯವಾಗಿದ್ದು, ನೋಡುವ ಕಣ್ಗಳು ಪುಣ್ಯ ಮಾಡಿದ್ದವು. ಅವಳ ಅಂಗಾಂಗಗಳಲ್ಲಿಯ ಸೌಂದರ್ಯವು ವಾಣಿಗೆ ಇಮ್ಮಡಿಯಾಗಿ, ಮನ್ಮಥನಿಗೆ ನೂರ್ಮಡಿಯಾಗಿ, ಹಂಸ ಸಮೂಹಕ್ಕೆ ಸಾಸಿರ್ಮಡಿಯಾಗಿತ್ತು.

ರೂಪರಾಶಿ ಪಾರ್ವತಿಯು ಹದಿನಾರು ಸಾವಿರ ವಿಳಾಸಿನಿಯರೊಂದಿಗೆ ಜಲಕ್ರೀಡೆಗೆ ಕೇಳೀ ವನಕ್ಕೆ ಬಂದಳು.

ಸಖಿಯರೊಡನೆ ಜಲಕ್ರೀಡೆ

ಆ ವನದ ಒಂದು ಹೂವಿನ ಕೊಳದಲ್ಲಿ ಅರಳಿದ ಕಮಲದ ಸುವಾಸನೆಗೆ ದುಂಬಿಗಳು ಮುತ್ತಿದ್ದವು. ನೈದಿಲೆಗಳಲ್ಲಿ ಸಿಕ್ಕ ಮರಿಗಳು ಜಿನುಗುತ್ತಿದ್ದವು. ತಾವರೆಯ ಅಕ್ಕಿಯನ್ನು ಹಂಸಗಳು ಸವಿಯುತ್ತಿದ್ದವು. ಚಕ್ರವಾಕಗಳು ಮದನ ಸುಖದಲ್ಲಿದ್ದವು. ಆ ನಿರ್ಮಲ ಕೊಳವನ್ನು ಕಂಡ ವಿಳಾಸಿನಿಯರಿಗೆ ಮನಸೋಇಚ್ಚೆ ಜಲಕ್ರೀಡೆ ಆಡಬೇಕೆನ್ನಿಸಿತು.

ಅವರಲ್ಲಿ ಜಾಣೆಯರಾದ ಕೆಲವರು ಉತ್ತಮ ಚಂದನ, ಕುಂಕುಮ, ಹೊಸಹೂ, ಕಸ್ತೂರಿಗಳೊಡನೆ ಬಂದರು. ಎಲ್ಲರೂಸೇರಿ ಗಿರಿಜೆಯನ್ನು 'ಶಿವೆ ಬಾ, ಸರ್ವಜ್ಞೆಬಾ, ದೇವಿ ಬಾ, ಕಳನಾದ ಪ್ರಿಯೆ ಬಾ' ಎಂದು ಕರೆದರು.

ಆ ಸರೋವರದಲ್ಲಿ ರಸಿಕ ಹೆಣ್ಣುಗಳ ಕಾಲಂದುಗೆ, ಉಂಗುರ, ಹಾರಗಳ ಮಧುರನಾದ ವ್ಯಾಪಿಸಿರುವಾಗ ಶರ್ವಾಣಿ ಅವರ ಜೊತೆಗೂಡಿದಳು. ಅವಳು ಸರೋವರ ಹೊಕ್ಕಿದ್ದು ವಿಮಲಾಕಾಶದಲ್ಲಿ ಎಳೆ ಶಶಿ ಪ್ರವೇಶಿಸಿದಂತಾಯಿತು. ಆ ಹಗಲಿನಲ್ಲಿಯೂ ನೈದಿಲೆಗಳು ಅರಳಿದವು! ಚಕ್ರವಾಕಗಳು ವಿರಹಭಾವ ಹೊಂದಿದವು! ತಾವರೆಗಳು ಮುಚ್ಚಿಕೊಂಡವು.!

ನಗೆಯ ಹೂವಾದ ಗಿರಿಜೆಯೊಡನೆ ವಿಳಾಸಿನಿಯರು ಜಲಕ್ರೀಡೆಯಾಡಿದರು. ಆ ಲಲನೆಯರ ಮುಂಗುರುಳುಗಳೊಡನೆ ದುಂಬಿಗಳು, ನಯನಗಳೊಡನೆ ನೈದಿಲೆಗಳು, ಮುಖದೊಡನೆ ಸರೋಜಪುಷ್ಪಗಳು, ಕುಚದೊಡನೆ ನಿರ್ಮಲ ಚಕ್ರವಾಕಗಳು ನಲಿದಾಡಿದವು.

ಆ ಅಬಲೆಯರು ಪ್ರಾರಂಭದಲ್ಲಿ ತಮ್ಮ ಮೃದುಕೈಗಳಿಂದ ಎರಚಿದನೀರು ಮದನನಿಗೆ ನೀಡುವ ರತ್ನಾಂಜಲಿಯಂತಿತ್ತು. ಜಲಕ್ರೀಡೆಯಲ್ಲಿ ಒಬ್ಬರು ಇನ್ನೊಬ್ಬರಿಗೆ ನೀರೆರೆಚುವಬಗೆ ನೋಡಿದರೆ, ಜಲದೇವತೆಯರು ಹಾರೈಸುತ್ತ ಮುಂಗಾರಿನಲ್ಲಿ ಓಕುಳಿಯಾಡುವಂತಿತ್ತು!

ಜಲಕ್ರೀಡೆಯ ಉಲ್ಲಾಸದಲ್ಲಿ ಒಬ್ಬಳು – ತನ್ನ ಪ್ರತಿಬಿಂಬವನ್ನು ನೀರಿನಲ್ಲಿ ಕಂಡು, 'ಎಲೈ ತರುಣಿ ಹೋಗದಿರು' ಎನ್ನುತ್ತ ಬೆಂಬತ್ತಿ ಈಜಿ ಅಲ್ಲಿ ತಾನು ಕೂಗುತ್ತಿರುವವಳನ್ನು ಕಾಣದೆ ಎಡಬಲ ನೋಡಿದಳು! ಅದನ್ನು ಕಂಡ ಇತರ ಮುಗ್ಧೆಯರು ಉಸಿರುಗಟ್ಟಿ ನಕ್ಕರು!.

ನೀರಾಟದಲ್ಲಿ ಸಡಿಲಗೊಂಡ ಆ ಹೆಂಗಳೆಯರ ತಲೆಗೂದಲು ಚಂದ್ರಬಿಂಬಗಳನ್ನು ಚಲದಿಂದ ಬೆಂಬಿಡದೆ ಮುತ್ತುವ ರಾಹುಮಂಡಲದಂತೆ ಕಾಣುತ್ತಿದ್ದವು. ಸರೋಜಮುಖಿಯರು ಹೀಗೆ ಈಸಾಡಿ, ತುಳುಕಾಡಿ, ಚೆಲ್ಲು ಚೆಲ್ಲಾಗಿ ನಲಿದಾಡುವುದನ್ನು ಕಂಡು ಪಾರ್ವತಿ ಹರ್ಷಗೊಂಡಳು. ತಾನೂ ಅವರಲ್ಲಿ ಒಂದಾಗಿ ಆಡಿದಳು, ನಲಿದಳು. ಉಲ್ಲಾಸ ಮನದಿಂದ ಹೊರಬಂದಳು.

ಪಾರ್ವತಿ ಹೊಸ ರೇಷ್ಮೆವಸ್ತ್ರವನ್ನು ಉಟ್ಟಳು. ದಿವ್ಯಾಭರಣಗಳನ್ನು ತೊಟ್ಟಳು. ಸಕಲಕಲಾ ವಿಭೂಷಿತೆಯಾಗಿ ನಿಶ್ಚಲಚಿತ್ತದಿಂದ ಉನ್ನತಪೀಠದಲ್ಲಿ ಕುಳಿತಳು. ಅಕ್ಕಪಕ್ಕದಲ್ಲಿ ವಿಲಾಸಿನಿಯರು ಕೊಂಡಾಡುತ್ತಿರಲು ಪುರದಕಡೆಗೆ ಹೊರಟಳು. ಅವಳನ್ನು ಕಂಡ ಪುರಜನರು ತಮ್ಮತಮ್ಮಲ್ಲಿಯೇ ಹೀಗೆ ಮಾತಾಡಿಕೊಂಡರು.

'ಗಿರಿಜೆಗೆ ದಿನೇದಿನೇ ರೂಪು ಬೆಳೆಯುತ್ತಿದೆ.'

'ಅಷ್ಟೆ ಅಲ್ಲ! ಯೌವನಸಂಪತ್ತು ವರ್ಧಿಸುತ್ತಿದೆ!'

'ಈಕೆಗೆ ತಕ್ಕವರ ಯಾರು?'

'ಅದನ್ನು ಪರಶಿವನೇ ಬಲ್ಲ!'

ಮಗಳ ರೂಪಾತಿಶಯಕ್ಕೆ ಬೆರಗಾದ ರಾಣಿಮೇನೆ ಮತ್ತು ಗಿರಿರಾಜರು ದಾಕ್ಷಾಯಿಣಿಯೇ ತಮ್ಮ ಉದರಕ್ಕೆ ಕರುಣಿಸಿ ಬಂದ ವಿಷಯವನ್ನೇ ಮರೆತರು! ಅವಳ ಬಗ್ಗೆ ಚಿಂತಿಸತೊಡಗಿದರು. ಆಗ ಆಕಾಶದಲ್ಲಿ ನಳನಳಿಸುತ್ತ, ತಳತಳಿಸುತ್ತ ಒಂದು ಬೆಳಕು ಕಂಡಿತು!.

ಶರ್ವನ ವಧು ಶರ್ವಾಣಿ

ಆ ಪ್ರಕಾಶದೊಳಗಿನಿಂದ ಆನಂದಮಯ ಶೈವಕೀರ್ತಿಯಂತೆ ನಾರದನು ಗೋಚರಿಸಿದನು. ಇಂಪಾಗಿ ವೀಣೆಬಾರಿಸುತ್ತಾ ಇಳಿಬಿದ್ದಜಡೆ, ಭಸ್ಮಧರಿಸಿದ ಶರೀರ, ಮನೋಹರಮುಖದ ತೇಜಸ್ವಿ ನಾರದಮುನಿ ಆಗಮಿಸಿದನು. ಆತನನ್ನು ಸಂಭ್ರಮದಿಂದ ಗಿರಿರಾಜದಂಪತಿಗಳು ಸ್ವಾಗತಿಸಿ, ಬಾಗಿ ನಮಸ್ಕರಿಸಿದರು. ಭದ್ರಾಸನದಲ್ಲಿ ಕುಳ್ಳಿರಿಸಿದರು. ಪಾದವನ್ನು ತೊಳೆದು ಪ್ರೋಕ್ಷಿಸಿಕೊಂಡು ನುಡಿದರು.

'ದೇವ ಗುರುಮೂರ್ತಿ, ಶೈವನಿಧಿ ವರಸುಧಾಕರಮೂರ್ತಿ ತಾವು ದಯಮಾಡಿದುದರಿಂದ ನಾವು ಕೃತಾರ್ಥರಾದೆವು.'

ನಾರದಮುನಿಯು ನಸುನಗುತ್ತ ಮೌನವಾಗಿರಲು ರಾಜನು,

'ಸ್ವರ್ಗದಸುಖ ಬಿಟ್ಟು ಈ ಧರೆಗೆ ಬಂದುದು ನಮ್ಮಪುಣ್ಯ, ನಮ್ಮಜನ್ಮ ಸಾರ್ಥಕವಾಯಿತು. ನಮಗಿಂತ ಸುಖಿಗಳಾರು?'

ಎಂದು ಹೇಳುತ್ತಿರುವಾಗ್ಗೆ, ಗಿರಿಜಾತೆ ತನ್ನ ಸ್ತ್ರೀಪರಿವಾರದೊಡನೆ ಬಂದಳು. ಅಬಲೆಯರ ಮಧ್ಯದಲ್ಲಿ ಅಂಬಿಕೆಯು – ಮಿಂಚಿನಮಾಲೆಯೋ, ಚಂದ್ರಮನ ಅಮೃತದೀಪ್ತಿ ಸ್ವರೂಪವೋ, ಮದನನಅಸ್ತ್ರವೋ, ನೂತನ ವನಲತೆಗಳ ಸಂಕುಲವೋ, ಸುರುಚಿರ ಸೌಂದರ್ಯರಾಶಿಯೋ ಎಂಬಂತೆ ಕಂಡಳು.

ಪುಣ್ಯಮಯಿ, ಅತ್ಯುರುತರದಾನಿ, ನಿರ್ಮಲ ಭವಾನಿ, ಶಂಕರನ ಸುಕೀರ್ತಿಜಗನ್ಮಾತೆ ಬಂದಳು. ಆ ಸ್ತ್ರೀಯರ ನಡುವೆಯ ಗಿರಿಜೆಯು ತಾರೆಗಳನಡುವಣ ಚಂದ್ರನಂತೆ, ಆಕಳುಗಳ ನಡುವಣ ಕಾಮಧೇನುವಿನಂತೆ, ರುದ್ರಾಕ್ಷಿಗಳ ನಡುವಣ ಏಕಮುಖ ರುದ್ರಾಕ್ಷದಂತೆ ವಿರಾಜಿಸುತ್ತಿದ್ದಳು.

ಗಿರಿರಾಜನ ಎದೆಮುಗುಳು ಗಿರಿಜೆ ಮುದ್ದಾಗಿ ಬಂದು ತನ್ನ ತಂದೆಯ ತೊಡೆಯ ಮೇಲೆ ಕುಳಿತಳು. ಅದು ಪೂರ್ವಾಚಲದಲ್ಲಿ ಪೂರ್ಣಚಂದ್ರ ಉದಯಿಸಿದಂತಿತ್ತು. ಪಾರ್ವತಿಯನ್ನು ಕಂಡ ನಾರದಮುನಿಯು ಹರ್ಷದಿಂದ ರೋಮಾಂಚನಗೊಂಡನು. ಅಷ್ಟಾಂಗಪ್ರಣಾಮವನ್ನು ಮಾಡಿದನು. 'ತಾಯೇ ತೇಜೋನಿಧಿ ಶರಣು' ಎಂದು ಮನತುಂಬಿ ಸ್ತುತಿಸಿದನು:

'ಶ್ರೀನಿಧಿ ಶಾಂಕರಿ ಶೈವ
ಜ್ಞಾನಿ ಸದಾವರದೆ ಭುವನ ಚರಿತೆ ಭವಾನೀ
ಮಾನಿನಿ ಮಾತೆ ಮಹೇಶ
ಧ್ಯಾನಿ ಮಹಾದಾನಿ ನೀನೆ ಶರಣು.'

ಹೀಗೆ ಬಣ್ಣಿಸುತ್ತ ಅಗರಾಜಸುತೆಯನ್ನು ನೋಡಿ ತಣಿಯದೆ, ಮತ್ತೆ ಹೊಗಳುತ್ತ ಪ್ರಾರ್ಥಿಸಿದನು:

'ತಾಯೇ ತವರೇ ತ್ರಿಭುವನ
ದಾಯುವೆ ಜಗದುಸಿರೆ ಜಗದಕಣ್ಣೆ ಜಗನ್ನಿ
ರ್ಮಾಯಾನಿಧಿಯೇ ಸುಧಿಯೇ
ಕಾಯೆನ್ನಂ ಕರುಣದಿಂದೆ ಸಲಹು'

ನಾರದಮುನಿಯು ಹೀಗೆ ಆರ್ತನಾಗಿ ಸ್ತುತಿಸುವುದನ್ನುಕಂಡು ಗಿರಿರಾಜ ಮತ್ತು ರಾಣಿಮೇನಾದೇವಿಗೆ ಆಶ್ಚರ್ಯವಾಯಿತು. ಗಿರಿರಾಜನು,

'ಎಲೆ ಮುನೀಂದ್ರ, ತಮ್ಮನ್ನು ಎತ್ತರದ ಸ್ಥಾನದಲ್ಲಿ ಕುಳ್ಳಿರಿಸಿ ಪೂಜೆ ಮಾಡುವವರು ನಾವು.'

'ರಾಜೇಂದ್ರನೇ, ನಿನ್ನ ಗೌರವ ಸಂದಿದೆ.'

'ಪೂಜ್ಯರೇ, ತಾವು ನನ್ನಮಗಳಿಗೆ ವಂದಿಸುತ್ತಿರುವುದು ಅತಿ ಆಶ್ಚರ್ಯವಾಗಿದೆ!'

ದಿವ್ಯಜ್ಞಾನಿ ನಾರದನು ಶೈಲಪತಿಯ ಆ ಮಾತು ಕೇಳಿ ನಗುತ್ತ,

'ಗಿರಿರಾಜನೇ, ದೇವಿಪಾರ್ವತಿಯ ಅಸಾಧಾರಣ ಮಹಿಮೆಯನ್ನು ದೇವತೆಗಳಾಗಲಿ, ಇಂದ್ರನಾಗಲಿ, ಹರಿಬ್ರಹ್ಮಾದಿಗಳಾಗಲಿ, ಮುನಿಗಳಾಗಲಿ ತಿಳಿಯರು.'

'ಮುನಿ ಶ್ರೇಷ್ಠನೇ, ಇವಳು ನನ್ನಮಗಳು!'

'ಹೌದು ಅರಸನೇ, ಯಾವುದೋ ನೆಪದಿಂದ ದೇವಿ ನಿಮ್ಮ ಪುಣ್ಯೋದರದಲ್ಲಿ ಜನಿಸಿದಳು.'

ಗಿರಿರಾಜ ಮೇನೆಯರಿಬ್ಬರೂ ಒಟ್ಟಿಗೆ ಹೇಳಿದರು:

'ಗಿರಿಜೆ ನಮ್ಮಮಗಳು, ನಮ್ಮೊಡಲಕುಡಿ'

'ನಿಜ. ಇಲ್ಲವೆಂದವರು ಯಾರು? ನವರತ್ನದ ಉದಯಕ್ಕೆ ಸಮುದ್ರ, ಮುತ್ತಿಗೆ ಚಿಪ್ಪು, ಲಿಂಗಕ್ಕೆ ನೆಲ, ಅಮೃತಕ್ಕೆ ಪಾಲ್ಗಡಲು, ಕಮಲಕ್ಕೆ ಕೆಸರು ಕಾರಣವಾದಂತೆ ನೀವೇ ದೇವಿಗೆ ಜನನಿ ಜನಕರು!'

ಮೇನಾದೇವಿಯು ತನ್ನೊಲವಿನ ಕುವರಿ ಮಹಾದೇವಿ ಎಂಬುದನ್ನು ಕೇಳುತ್ತ ಮಗಳನ್ನು ತಬ್ಬಿ ಮುದ್ದಿಸಿ ನಲಿಯುತ್ತ ನುಡಿದಳು,

'ಮುನಿವರ್ಯರೇ, ತಮ್ಮ ನುಡಿ ನಮಗೆ ಮಾನ್ಯ.'

'ಮೇನಾದೇವಿಯೇ, ನಿನ್ನ ತಪಸ್ಸಿಗೆ ಮೆಚ್ಚಿ ಮಹಾದೇವಿ ಕರುಣದಿಂದ ನಿನ್ನ ಹೊಟ್ಟೆಯಲ್ಲಿ ಹುಟ್ಟಿದ್ದಾಳೆ. ಜ್ಞಾನ ನಿಧಿಯನ್ನು ನಿನ್ನಮಗಳು ಎನ್ನುವೆಯಾ?'

ರಾಣಿಮೇನೆಯು ಅಚ್ಚರಿಗೆ ಕಣ್ಣುಬಂದಂತೆ ಮೂಕಳಾದಳು. ನಾರದರು ಮಾತು ಮುಂದುವರೆಸಿದರು,

'ಶಿವನಸುಧೆ, ಶಿವನಜೀವ, ಶಿವನಆನಂದ, ಶಿವನಪುಣ್ಯ, ಶಿವನಸುಖ. ಶಿವನಮುಖ, ಶಿವನಆಯುವಾಗಿರುವ ಈಕೆಯನ್ನು ನಿನ್ನ ಮಗಳೆನ್ನುವೆಯಾ?

'ಮೇನಾದೇವಿಯೇ, ನೀನು ದೇವಿಯನ್ನು ಕುರಿತು ತಪಸ್ಸು ಮಾಡಿದ್ದು ನೆನಪಿಸಿಕೊ. ಆಗ ಪ್ರತ್ಯಕ್ಷಳಾದ ದೇವಿ, ನಿನ್ನ ಹೊಟ್ಟೆಯಲ್ಲಿ ಹುಟ್ಟುವುದಾಗಿ ಅಭಯ ನೀಡಿದ್ದನ್ನು ನೆನಪು ಮಾಡಿಕೊ.'

'ನಿಜ ಮುನಿವರ್ಯರೆ, ಆ ದೇವಿಯೇ ನನ್ನ ಕುವರಿ!'

ಎಂದು ಆನಂದಾಶ್ರುಗಳೊಡನೆ ಗಿರಿಜೆಯನ್ನು ತಬ್ಬಿಕೊಂಡಳು.

'ನಿಮ್ಮ ಕುವರಿ ಪರಶಿವನ ಅರ್ಧಾಂಗಿ. ಈಕೆಗೆ ಪರಮೇಶ್ವರನೇ ವರ. ಸಂತಸದಿಂದ ಇವಳನ್ನು ಶಿವನಲ್ಲಿಗೆ ಕಳುಹಿಸುವುದು ಉಚಿತ.'

ಅದುವರೆಗೂ ತನ್ನ ರಾಣಿ ಹಾಗೂ ನಾರದಮುನಿಗಳಿಗೆ ಕಿವಿಯಾಗಿದ್ದ ಗಿರಿರಾಜ ತಕ್ಷಣ ನುಡಿದ,

'ಕನ್ನೆಯನ್ನು ಶಿವನಲ್ಲಿಗೆ ಕಳುಹಿಸುವುದೇ?'

ತ್ರಿಲೋಕ ಸಂಚಾರಿ ನಾರದರು ಶಾಂತಚಿತ್ತದಿಂದ,

'ಗಿರಿಸುತೆ ಬೆಳೆದು ದೊಡ್ಡವಳಾಗುವವರೆಗೂ ಶಿವನು ಹೇಮಕೂಟದಲ್ಲಿ ನಿಜಯೋಗ ಭೋಗ ರಾಗೋನ್ನತಿಯಲ್ಲಿರುತ್ತಾನೆ.' ಎಂದು ಹೇಳಿ ಆ ದಂಪತಿಗಳಿಗೆ ಹಿತೋಪದೇಶ ಮಾಡುತ್ತ ಹೇಳಿದರು :

'ಎಲೈ ನಗರಾಜನೇ ಕೇಳು. ಜವ್ವನೆ, ಶಾಂತೆ, ಲೋಕಮಾತೆ ಪಾರ್ವತಿಯನ್ನು – ನನ್ನ ಮಗಳು ಮಾತ್ರ ಎಂಬ ಭಾವ ಬಿಡು. ಇವಳು ಶರ್ವನ ವಧು ಶರ್ವಾಣಿ ಎಂಬುದನ್ನು ತಿಳಿ, ನಾನು ಈ ಕೂಡಲೆ ಕೈಲಾಸಪರ್ವತಕ್ಕೆ ಹೋಗುತ್ತಿರುವೆನು.'

ಗಿರಿರಾಜನು ಆಶ್ಚರ್ಯ ಚಕಿತನಾಗಿ, ವಿನಯದಿಂದ ಕೈ ಮುಗಿಯುತ್ತ,

'ಮುನಿವರ್ಯರೇ, ತಾವು ಹೇಳಿದಂತೆ ಭವಾನಿ ಎಂಬುದನ್ನು ನಾವು ಮರೆತು ಹೋಗಿದ್ದೆವು. ನಿಮ್ಮ ಬೋಧೆಯಿಂದ ಎಲ್ಲವೂ ಸ್ಪಷ್ಟವಾಯಿತು. ಈ ಜಾಣೆಯನ್ನು ಪಂಪಾವಿರೂಪಾಕ್ಷನಿರುವಲ್ಲಿಗೆ ಕರೆದೊಯ್ಯುವೆನು. ನೀವು ಇಂದು ನಮ್ಮ ಅರಮನೆಯಲ್ಲಿದ್ದು; ಶಿವಾರ್ಚನೆ ಮಾಡಿ, ನಾಳೆ ಹೋಗಬೇಕೆಂಬುದು ಬಿನ್ನಹ.'

ಗಿರಿರಾಜನ ಪ್ರಾರ್ಥನೆಯನ್ನು ಒಪ್ಪಿ ನಾರದಮಹರ್ಷಿಯು ಅಲ್ಲಿಯೇ ಉಳಿದನು. ರಾಜನೊಂದಿಗೆ ಮೃಗಧರಚೂಡ ಶಿವನ ಅರ್ಚನೆಯನ್ನು ಮಾಡಿ, ಪ್ರಸಾದ ಸ್ವೀಕರಿಸಿದನು. ಈರ್ವರೂ ಕನಕಪೀಠದಲ್ಲಿ ಕುಳಿತಿರುವಾಗ ಸೂರ್ಯನಕುದುರೆಗಳು ಪಶ್ಚಿಮಗಿರಿಯನ್ನು ಏರಿ ಸಂಜೆಯಾಯಿತು.

ಕಾಲ್ದೆಗೆಯೆ ಬಿಳ್ದಿನಂ ಮಿಗೆ ಸಾಲ್ದೆಗೆದುದು ವಿಹಗ ವೀಥಿ

ಬಿಳುಪಾದ ಹಗಲು ಕಾಲ್ತೆಗೆಯಲು, ಹಕ್ಕಿಗಳು ಸಾಲು ಸಾಲಾಗಿ ಸಾಗುತ್ತ ಗೂಡು ಸೇರಿದವು. ತಾವರೆಗಳು ಮುಚ್ಚಿಕೊಂಡವು. ಚಕ್ರವಾಕಪಕ್ಷಿಗಳು ಕೀಲು ತೆಗೆದಂತೆ ಪರಸ್ಪರ ಅಗಲಿದವು. ನೊಂದು ಜೋಲುಮುಖವಾದವು. ಶಿವಾಲಯಗಳಲ್ಲಿ ಸಂಧ್ಯಾಸಮಯದ ಪೂಜೆ ನಡೆದು, ಮೃದು ಮೃದಂಗ, ಪಟಹ, ಶಂಖಭೇರಿಗಳು ಮೊಳಗಿದವು, ಬಹುರತ್ನ ರಚಿತವಾದ ಬೀದಿ ಬೀದಿಗಳ ಪ್ರತಿಮನೆಯಲ್ಲಿ ವಾರನಾರಿಯರ ಸಂಗೀತ ನೃತ್ಯಗಳು ನಡೆದವು.

ನಸುಗತ್ತಲೆ, ಅರೆಗತ್ತಲೆ, ಮುಸುಕುಗತ್ತಲೆ, ಪೆರ್ಗತ್ತಲೆ, ನಾಲ್ದೆಸೆಗಳತ್ತಲೆಗಳು ಹರಡಿ ಕಗ್ಗತ್ತಲೆಯಾಯಿತು. ಕಣ್ಣು ಮುಚ್ಚಿದರೆ ಮುಚ್ಚಿರಬೇಕು; ತೆಗೆದಿರೆ ತೆಗದಿರಬೇಕು ಹೊರತು ರೆಪ್ಪೆಹೊಡೆಯಲು ತೆರಪಿಲ್ಲದಷ್ಟು ಕತ್ತಲೆ ದಟ್ಟವಾಗಿತ್ತು! ಆ ಕತ್ತಲು ಕವಿದ ಮನೆಗಳಲ್ಲಿ ಹೊತ್ತಿಸಿದ ದೀವಿಗೆಗಳು ಕತ್ತಲೆ ಲೇಪಿಸಿದಂತೆ ಮಂದಪ್ರಕಾಶದಿಂದಿದ್ದವು! ನೆಲಮುಗಿಲನ್ನು

ಆವರಿಸಿದ ಆ ಕಾರ್ಗತ್ತಲೆಯಲ್ಲಿ ಜಾರರು ತಮ್ಮ ಪ್ರೇಯಸಿಯರನ್ನು ಹುಡುಕಿಕೊಂಡು ಕಳ್ಳಹಾದಿ ಹಿಡಿದು ಸಾಗುತ್ತಿದ್ದರು.

ಸಂಕೇತ ಸ್ಥಳದಲ್ಲಿ ಪ್ರಿಯನನ್ನು ನಿರೀಕ್ಷಿಸುವ ಅಭಿಸಾರಿಕೆಯರು ಆ ನಿಶೆಯಲ್ಲಿ ಪ್ರಿಯರೊಡಗೂಡಿ ಸಮಸುಖದಲ್ಲಿ ಉಬ್ಬಿ ನಲಿದರು. ಇಳೆಯನ್ನು ಮುಚ್ಚಿ ಮುಸುಕಿದ ಕತ್ತಲನ್ನು ಪ್ರೀತಿಯಿಂದ ದುಂಬಿ ಎಂದು, ಕಾಳಿಂದಿ ನದಿಯು ತರಂಗವೆಂದು, ನೀಳಮೇಘವೆಂದು ತಮ್ಮ ಮುಂಗುರುಳುಗಳಿಂದ ಒತ್ತಿ ಜಲಕ್ರೀಡೆ, ನವಿಲಾಟಗಳ ಲೀಲೆಯಲ್ಲಿ ಮಗ್ನರಾದರು. ಹಾಗೆ ಸುಖಿಸುವ ಸಮಯದಲ್ಲಿ ಕಗ್ಗತ್ತಲನ್ನು ಚೆನ್ನಾಗಿ ನೋಡಲು ಬಯಸಿದ ಅಂಬರವು ಅನೇಕ ಕಣ್ಣುಗಳನ್ನು ಪಡೆಯಿತೋ ಎಂಬಂತೆ ನಭದಲ್ಲಿ ತಾರೆಗಳು ಮೂಡಿದವು.

ರಾತ್ರಿಯ ವಿಹಾರ

ಪೂರ್ವ ದಿಕ್ಕಿನಲ್ಲಿ ಎದ್ದು ಬಂದ ಚಂದ್ರನು – ಅಂಬರವೆಂಬ ಬೇಡಿತಿಯು ಧರಿಸಿರುವ ಮೂಗುತಿಯಂತೆ ಹೊಳೆಯುತ್ತಿದ್ದನು. ಆಗ ನೈದಿಲೆಗಳು ಅರಳಿದವು. ಉದಯಾದ್ರಿಯಲ್ಲಿ ಪ್ರಕಾಶಿಸುವ ಆ ಚಂದ್ರ ಬಿಂಬವು – ವಿರಹ ಸಮುದ್ರದಿಂದ ಹೊಮ್ಮಿದ ರಾಗವೆಂಬ ಬಡಬಾಗ್ನಿಯಂತೆ – ವಿರಹಿಗಳಿಗೆ ಕಾಣಿಸಿತು.

ಹೀಗೆ ಚಂದ್ರೋದಯವಾಗುತ್ತಿರಲು ನಾಗರಿಕ, ವಿಟ, ವಿದೂಷಕ, ಪೀಠ ಮರ್ದಕ (ಶೃಂಗಾರ ವಿಷಯದಲ್ಲಿ ನಾಯಕನಿಗೆ ಸಹಾಯ ಮಾಡುವವನು)ರು ಆಸ್ಥಾನಕ್ಕೆ ಬಂದು ಗಿರಿರಾಜನಿಗೆ ಕೈಮುಗಿದು ಬಿನ್ನವಿಸಿದರು :

'ದೇವಾ, ಗಗನದಲ್ಲಿ ತಾರೆಗಳು ಬೆಳಗುತ್ತಿವೆ. ಚಂದ್ರನು ಮೂಡಿದ್ದಾನೆ, ಮನ್ಮಥನು ಹೂಬಾಣ ಹೂಡಿದ್ದಾನೆ. ವಿರಹಿಗಳು ಸೋತಿದ್ದಾರೆ. ತಾವು ಇಂದಿನ ಪ್ರಕಾಶಮಯ ಬೆಳದಿಂಗಳಲ್ಲಿ ರಾತ್ರಿ ವಿಹಾರಕ್ಕೆ ಹೊರಡುವ ವೇಳೆಯಾಗಿದೆ.'

ಅವರ ರಸಿಕನುಡಿಗೆ ರಾಜನು ಮೆಚ್ಚಿ ಉಡುಗೊರೆ ನೀಡಿದನು. ಓಲಗವನ್ನು ಮುಕ್ತಾಯಗೊಳಿಸಿದನು. ನಾರದನೊಡನೆ ಶುಚಿರ್ಭೂತನಾಗಿ ಭಸ್ಮ ರುದ್ರಾಕ್ಷಗಳನ್ನು ಧರಿಸಿದನು. ಶಿವಾರ್ಚನೆಯನ್ನು ಮಾಡಿ, ಪ್ರಸಾದ ಸ್ವೀಕರಿಸಿದನು.

ಮುತ್ತಿನ ಆಭರಣದಂತಹ ಬೆಳದಿಂಗಳು

ಶೈಲಪತಿಯು ತಾಂಬೂಲ ಸೇವಿಸಿ, ತುರುಬಿಗೆ ಸುಗಂಧಪುಷ್ಪ ಮುಡಿದುಕೊಂಡನು. ಹೊಸವಸ್ತ್ರಗಳನ್ನು ಧರಿಸಿ, ದಿವ್ಯಾಭರಣಗಳನ್ನು ಹಾಕಿಕೊಂಡು ಕಸ್ತೂರಿ, ಪುನುಗು ಲೇಪಿಸಿಕೊಂಡು ಶೃಂಗಾರಗೊಂಡನು. ದಕ್ಷಿಣ, ಅನುಕೂಲ, ಧೃಷ್ಟ, ಶಠರೆಂಬ ರಾಜಪುತ್ರರನ್ನು ಕೂಡಿಕೊಂಡು; ಸುಕುಮಾರ ರಸಿಕರು ಹಿಂಬಾಲಿಸುತ್ತಿರಲು ನಾರದಮುನಿ ಸಹಿತ ಅರಮನೆಯಿಂದ ಹೊರಟನು. ರಾಜವೀದಿಯಲ್ಲಿ ನಿಂದು ಪೂರ್ವದಿಕ್ಕಿನಲ್ಲಿ ಬೆಳಗಿನಿಂದ ದಟ್ಟೈಸಿರುವ ಚಂದ್ರಬಿಂಬವನ್ನು ನೋಡಿ ಉಲ್ಲಾಸಗೊಂಡನು.

ಗಿರಿರಾಜನ ಜೊತೆಗೂಡಿ ಬಂದಿದ್ದ ರಸಿಕ ನಾಗರಿಕನು ರಾಜನಿಗೆ ಕೈಮುಗಿದು ಪರಿಪೂರ್ಣ ಚಂದ್ರಮಂಡಲವನ್ನು ಬಣ್ಣಿಸಿದನು,

'ಹೇ ನಗರಾಜ, ಈ ಬೆಳದಿಂಗಳು – ಹರನು ಲೇಪಿಸಿದ ಕುಂದಿಲ್ಲದ ವಿಭೂತಿಯ ಪ್ರಕಾಶವೋ, ಚಂದ್ರಶೇಖರನು ಆನಂದ ತುಂದಿಲನಾಗಿ ನಕ್ಕ ಕಾಂತಿಯೋ, ಸರ್ವೇಶ್ವರನ

ಸತ್ಕೀರ್ತಿಯೋ, ಪರಮೋತ್ತುಂಗ ದೇವನದಿ ಗಂಗೆಯ ಉಜ್ವಲ ಬಿಳುಪು ಭೂ ಭಾಗದಲ್ಲಿ ಹರಿದಿದೆಯೋ ಎಂಬಂತೆ ದಟ್ಟೈಸಿದೆ.'

'ಓಹ್, ನಿನ್ನ ವರ್ಣನೆಯಿಂದ ಬೆಳದಿಂಗಳಲ್ಲಿಯೇ ಶಿವನನ್ನು ಕಂಡ ಹಾಗಾಯಿತು!'

'ಮಹಾರಾಜನೇ, ಈ ಬೆಳದಿಂಗಳು ಮುಡಿಯುವವರಿಗೆ ಮಲ್ಲಿಗೆ, ಲೇಪಿಸಿ ಕೊಳ್ಳುವವರಿಗೆ ನವ್ಯಚಂದನ, ತೊಡುವವರಿಗೆ ಮುತ್ತಿನ ಆಭರಣ, ಈಜುವವರಿಗೆ ಹಾಲ ಕಡಲು, ಒಲಿದು ನೋಡುವವರಿಗೆ ರಜತಾದ್ರಿಯಂತಿದೆ.'

'ದಿಟ ನುಡಿದೆ. ನೆಲದ ಮನುಜರಿಗೆ ದೈವತ್ವ ನೀಡುವವನು ಚಂದ್ರ.'

'ಹೇ ರಾಜನ್. ಅಚ್ಚ, ಹೊಸಬೆಳುದಿಂಗಳು ಇಳೆಯನ್ನು ವ್ಯಾಪಿಸಿರುವುದನ್ನು ಕಂಡಾಗ – ಬ್ರಹ್ಮನು ಶಿವಕೀರ್ತಿರಸದಿಂದ ಜಗತ್ತನ್ನು ತೊಳೆದಿರುವನೋ ಅಥವಾ ಅಮೃತಸಾಗರದ ಬೆಳಗಿನಿಂದ ಬೆಳ್ಳಗಾಗಿಸಿರುವನೋ ಎಂಬಂತಿದೆ.'

'ನಾಗರಿಕ, ನಿನ್ನ ಕಾವ್ಯ ಪ್ರತಿಭೆ ಗರಿಗೆದರಿದೆ.'

ಎಂದು ಹರ್ಷಿಸಿ ನುಡಿದ ನಗರಾಜನು ಪಟ್ಟಣದ ವೈಚಿತ್ರ್ಯಗಳನ್ನು ನೋಡುತ್ತ ಕೇಳೀವನವನ್ನು ಪ್ರವೇಶಿಸಿದನು. ನಾಗರಿಕನು ಆ ಕೇಳೀವನದ ಎಳೆ ಚಿಗುರುಗಳಲ್ಲಿ, ಹೂವಿನ ಹಾಸಿಗೆಗಳಲ್ಲಿ, ಮಾವಿನ ಮರದಡಿಯಲ್ಲಿ, ಮರಳು ದಿಬ್ಬಗಳಲ್ಲಿ, ಚಂದ್ರಕಾಂತಶಿಲೆಗಳ ಮೇಲೆ, ಕೊಳದಲ್ಲಿ, ವನದಲ್ಲೆಲ್ಲ ವಿಹರಿಸಿ ವಿರಹಿಗಳು ತಾಪಶಮನ ಮಾಡಿಕೊಳ್ಳುವುದನ್ನು ತಿಳಿಸಿದನು. ಅಲ್ಲಿಂದ ಪಣ್ಯಾಂಗನಾ ವೀದಿಗೆ ತೆರಳಿ ಅಲ್ಲಿಯ ಚಂಚಲತೆಯ ನೋಟಗಳನ್ನು ಕಾಣಿಸಿದನು. ಅದು ರತಿಮನ್ಮಥರ ವಿಲಾಸದ ನೆಲೆಯಾಗಿತ್ತು.

ನಿಶೆಯಲ್ಲಿಯ ಮನುಜರ ಸೋಜಿಗಗಳನ್ನು ನೋಡುತ್ತ ನಗರಾಜನು ಅರಮನೆಗೆ ಹಿಂದಿರುಗಿದನು. ಮಿಂದು ಮಡಿವಸ್ತ್ರ ಧರಿಸಿದನು. ಭಸ್ಮ ರುದ್ರಾಕ್ಷ ಭೂಷಿತನಾದನು. ಕರಕಮಲದಲ್ಲಿ ಶಿವಲಿಂಗವನ್ನು ಭಕ್ತಿಯಿಂದ ಅರ್ಚಿಸಿದನು. ನಾರದ ಮುನಿಗಳನ್ನು ದೇವಲೋಕಕ್ಕೆ ಕಳುಹಿಸಿ ಸಿಂಹಾಸನಾರೂಢನಾದನು.

* * * * *

ವಿರೂಪಾಕ್ಷ ದರ್ಶನ

ಸೂರ್ಯನ ಕಿರಣಗಳು ಇಳೆಗೆ ಆವರಿಸಿದ್ದ ಕತ್ತಲೆಂಬ ಮುಸುಕನ್ನು ತೆರೆದವು. ಕಮಲಗಳನ್ನು ಅರಳಿಸುತ್ತ, ಚಂದ್ರನನ್ನು ಕಳೆಗುಂದಿಸಿ ಎಲ್ಲೆಡೆ ಹರಡಿದವು. ಜಗಚ್ಚಕ್ಷು ರವಿಯು ಬೆಳಗುತ್ತಿದ್ದನು. ಸೂರ್ಯೋದಯದಲ್ಲಿ ಓಷಧಿ ಪ್ರಸ್ತಪುರದ ಹಾಗೂ ರಾಜ ಮಂದಿರದ ಶಿವಾಲಯಗಳಲ್ಲಿ ಪ್ರಾತಃಕಾಲ ಪೂಜೆ ನಡೆಯಿತು. ಕೊಂಬು, ತಮಟೆ, ಶಂಖ, ಭೇರಿ, ಜಾಗಟೆಯ ಪಂಚ ಮಹಾಶಬ್ದಗಳು ಮೊಳಗಿದವು. ಬ್ರಾಹ್ಮಣರು ಸಂಧ್ಯಾವಂದನೆಗಾಗಿ ಕೆರೆಯ ದಡದಲ್ಲಿ ಸೇರಿದ್ದರು.

ಗಜಗಳಿಗೆ ತರಬೇತಿ ನೀಡಲು ವೀರಯೋಧರು ಕೂಡಿದ್ದರು. ಕುದುರೆ ಸವಾರಿ ಕಲಿಸುವ ಶಿಕ್ಷಕರು ಕುದುರೆಹತ್ತಿ ತಮ್ಮ ವ್ಯೂಹದಲ್ಲಿ ಗಟ್ಟಿಯಾಗಿ ಕೂಗಾಡುತ್ತ ಉತ್ಸಾಹದಿಂದಿದ್ದರು. ಸೇವಾ ಮನೋಭಾವದ ಸಾಮಂತರಾಜರು ಸಡಗರದಿಂದಿದ್ದರು. ರಾಜನಿಲಯಕ್ಕೆ ಬರುವ ಲಲನಾಮಣಿಯರ ಕೈಬಳೆಗಳು ಮಧುರ ಧ್ವನಿ ಹೊಮ್ಮಿಸುತ್ತಿದ್ದವು. ನರ್ತಕ ನರ್ತಕಿಯರ, ಹಾಡುಗಾರರ, ವಂದಿಮಾಗಧರ, ಬ್ರಾಹ್ಮಣರ ಆಶೀರ್ವಾದದ ಸಮೂಹ ಧ್ವನಿಗಳು ಪುರದಲ್ಲಿ ಹಾಗೂ ರಾಜಮಂದಿರದಲ್ಲಿ ಮೊಳಗಿದವು.

ಆ ಪ್ರಭಾತ ಸಮಯದಲ್ಲಿ ಗಿರಿರಾಜನು ಉಚಿತಸ್ಥಾನದಲ್ಲಿ ಕುಳಿತು ನಾರದ ಮುನೀಶ್ವರನ ಸೂಚನೆಯನ್ನು ನೆನೆದನು. ಗಿರಿಜೆಯನ್ನು ಹೇಮಕೂಟದಲ್ಲಿರುವ ಪರಂಜ್ಯೋತಿ ಸ್ವರೂಪನಾದ ಶ್ರೀ ವಿರೂಪಾಕ್ಷನಲ್ಲಿಗೆ ಕಳುಹಿಸಬೇಕೆಂದು ತೀರ್ಮಾನಿಸಿದನು. ಅಂತಃಪುರದಲ್ಲಿಯ ಉತ್ತಮಸ್ತ್ರೀಯರಲ್ಲಿ ಜಯೆ, ವಿಜಯೆ ಎಂಬ ಇಬ್ಬರೊಡನೆ ಹೊರಡಲು ಸಿದ್ಧನಾದನು. ಮೂರು ಪುಷ್ಪಕ ವಿಮಾನಗಳನ್ನು ತರಿಸಿದನು.

ಶಾಂತೆ, ಸತ್ಯೆ, ಶಾಶ್ವತ ಗುಣನಿಧಿಯಾದ ಮಗಳು ಶರ್ವಾಣಿಯನ್ನು ಕರೆದನು. ಪುಳಕಗೊಂಡ ಹಂಸಗಮನೆ, ಬಿಂಬಾಧರೆ ಮಹಾದೇವಿಯು ತಂದೆಯ ಬಳಿಗೆ ಬಂದು ನಿಂತಳು. ಅಲ್ಲಿಗೆ ಬಂದ ಮೇನಾದೇವಿಯು ಮಗಳನ್ನು ನೋಡಿ ಮುದ್ದಾಡಿದಳು. 'ದೇವಿ, ಹೇಮಕೂಟದಲ್ಲಿ ಹುಲಿ, ಕರಡಿ, ಮಹಾಸರ್ಪಗಳು, ಸಿಂಹ, ಆನೆಗಳಿವೆ. ಎಚ್ಚರಿಕೆಯಿಂದಿರು' ಎಂದು ಬುದ್ಧಿ ಹೇಳಿದಳು. ತಾಯಿಯ ಮಾತಿಗೆ ವಿನಯದಿಂದ ಒಪ್ಪಿದ ಗಿರಿಜೆಯು ತಂದೆಯೊಡನೆ ಪುಷ್ಪಕ ವಿಮಾನದಲ್ಲಿ ಕುಳಿತಳು. ರಾಜನು ಜಯೆ, ವಿಜಯೆ ಮತ್ತಿತರ ಸಖಿಯರನ್ನು ಬೇರೆ ಇನ್ನೆರಡು ವಿಮಾನಗಳಲ್ಲಿ ಬರಹೇಳಿ ದಕ್ಷಿಣಾಭಿಮುಖವಾಗಿ ಹೊರಟನು.

ಸೇವಿಸಿದನೆ ಮುಕ್ತಂ ಕೇಳ ತುಂಗಭದ್ರೆಯ ಜಳಮಂ

ವಿಮಾನದಲ್ಲಿ ಹೋಗುವಾಗ ಗಿರಿರಾಜನು ಮಗಳಿಗೆ ಹಲವು ದೇಶಗಳನ್ನು, ವೈಭವಯುತ ನಗರಗಳನ್ನು, ನದಿ ಕೆರೆಗಳನ್ನು, ಹೊಲಗದ್ದೆ, ತೋಟಗಳನ್ನು, ಬೆಟ್ಟಸಾಲುಗಳನ್ನು, ವಿಂಧ್ಯಪರ್ವತ ಪಂಕ್ತಿಗಳನ್ನು ತೋರಿಸಿದನು. ಕೊಳಗಳಲ್ಲಿಯ ತಾವರೆಗಳು, ಹಂಸಪಕ್ಷಿಗಳನ್ನು ನೋಡುತ್ತ ತಂದೆ ಮಗಳು ಪಯಣಿಸುತ್ತಿರಲು ತುಂಗಭದ್ರಾ ನದಿಯು ಕಂಡಿತು. ಗಂಗಾನದಿಗೆ ಸಮನಾದ ಆ ಪುಣ್ಯನದಿಯು ಉಜ್ವಲತರಂಗಗಳಿಂದ ಕೂಡಿ, ಹೊಸನೊರೆಯಲ್ಲಿ ಹಲವು ಜಲಚರಗಳ ತಾಣವಾಗಿತ್ತು. ನದಿಯನ್ನು ನೋಡುತ್ತ ಆನಂದಭರಿತನಾದ ಗಿರಿರಾಜನು ಗಿರಿಜೆಗೆ ಹೇಳಿದ:

'ಮಗಳೇ, ಈ ಸುರುಚಿರ ನದಿಯ ಹೆಸರು ತುಂಗಭದ್ರೆ.'

'ಅಪ್ಪಾಜಿ, ತುಂಗಭದ್ರೆಯ ವೈಶಿಷ್ಟ್ಯವೇನು?'

'ಅಮ್ಮಾಗಿರಿಜೆ, ತುಂಗಭದ್ರೆಯು ಪರಮ ಸುಧಾರಸಾರ್ದ್ರೆಯಾಗಿದ್ದು, ಅತಿ ಆಳ ವಿಸ್ತಾರದಿಂದ ಹರಿಯುತ್ತ ಪಾಪ ಪರಿಹಾರಕಳಾಗಿರುವಳು. ಅನೇಕ ಮುನೀಂದ್ರರಿಗೆ ಸೇವ್ಯವಾದುದಾಗಿ ಪುಣ್ಯದ ನೆಲೆಯಾಗಿರುವಳು. ಈ ನದಿಯ ದಡದಲ್ಲಿ ಮಾವು, ಜಂಬುನೇರಳೆ, ತೆಂಗು, ಅಡಕೆ, ಹೊಂಗೆ, ದಾಳಿಂಬೆ, ಬಾಳೆ, ಹಲಸು, ಬೇವು ಮುಂತಾದ ಮರಗಳಿದ್ದು ಶಿವನ ನೆಲೆಯ ಸಸ್ಯಕಾಶಿಯಾಗಿದೆ.'

'ಅಪ್ಪಾಜಿ, ಈ ನದಿ ಮಂಗಳಮಯವಾಗಿದೆಯಲ್ಲವೇ?'

'ನಿಜ ನನ್ನ ಕುವರಿ. ಈ ನದಿಯನ್ನು ನೆನೆದವನು ಧನ್ಯ. ನೋಡಿದವನು ಪಾಪರಹಿತ, ಸೋಂಕಿದವನು ಅಮರನಾಗುವನು. ಮುಳುಗಿದವನು ಗಣ ಪದವಿ ಗಳಿಸುವನು. ಪವಿತ್ರ ಜಲಸೇವಿಸಿದವನೇ ಮುಕ್ತ!

'ಈ ನದಿಯ ದಡದಲ್ಲಿ ಸಂಧ್ಯಾಸಮಯದಲ್ಲಿ ತಪಸ್ವಿಗಳು ಕುಳಿತು ಮಂತ್ರಪಠನ ಮಾಡುತ್ತಾರೆ. ಪರ್ಣಶಾಲೆಗಳಲ್ಲಿರುವ ವಿಪ್ರರು ಶಂಭುವಿನ ಧ್ಯಾನದಲ್ಲಿದ್ದು, ನಾನಾ ಜಪಹೋಮಗಳಲ್ಲಿ ತೊಡಗಿದ್ದಾರೆ. ಹೇಮಕೂಟ ಪ್ರಾಂತ್ಯದಲ್ಲಿಯೇ ಇದು ತುಂಬಾ ಮನೋಹರವಾದುದು.'

ಅಲ್ಲಿ ಒಂದು ಕಪಿಯು ಎಲೆ ಹರಿದು ಹಲ್ಲು ಕಿರಿಯುತ್ತ ಹರ್ ಹರ್ ಎಂದು ಹುಬ್ಬು ಏರಿಸಿ ಕೂಗಿ ಬಾಗಿ ನೋಡುತ್ತಿದೆ. ಕೊಂಬೆಯಿಂದೊಗೆದು ದಾಟುವಾಗ ತೂಗಿ ಝುಂಕಿಸಿ, ಬಾಯ್ದೆರೆದು ಒಲೆದಾಡುತ್ತಿದೆ. ಕೈಗಳನ್ನು ಬಾಗಿಸಿ ಕುಗ್ಗಿ ಹಂಗಿಸುತ್ತ ತಾಪಸ ಕುಮಾರರನ್ನು ನಗಿಸುತ್ತಿದೆ. ಹಾಗೆ ಮುಂದೆ ಸಾಗಿದರೆ ಪೊದೆ ಬಳ್ಳಿ ಮರಗಳಿಂದಾವರಿಸಿದ ಗುಹೆ ಗವಿಗಳಿವೆ. ಅಲ್ಲಿ ಶಿವಧ್ಯಾನ ನಿರತ ತಪಸ್ವಿಗಳಿದ್ದಾರೆ. ಹೇಮಕೂಟವು ಪುಣ್ಯತೀರ್ಥವಾಗಿದ್ದು ಪ್ರತಿಮರದಕಳಗೆ ಅನಾದಿಕಾಲದಿಂದ ಹಿರಿಯ ವ್ರತಿಗಳು ನಿಶ್ಚಲ ಆಸನಾರೂಢರಾಗಿ, ಭಕ್ತಿಯಿಂದ ಪರಮ ತಪೋಮಗ್ನರಾಗಿದ್ದಾರೆ. ಅಲ್ಲಿ ವೇದಾಧ್ಯಯನ ಶೀಲರು, ಭಕ್ತಿಯ ಬೋಧಕರು, ಸಾತ್ವಿಕರು, ಸಿದ್ಧರು, ಸಾಧಕರು, ಶಿವಾರಾಧಕರು ವಿರಾಜಿಸುತ್ತಿದ್ದಾರೆ. ಅದು ತಪೋನಿರತರ, ಸಚ್ಚರಿತ್ರರ, ಪರಮ ತತ್ತ್ವರತರ, ಕರುಣಾಳುಗಳ, ಶರಣರ ನೆಲೆಯಾಗಿದೆ ಎಂದು ರಾಜನು ಮಗಳಿಗೆ ಆ ಪ್ರದೇಶದ ಸೊಬಗು ವೈಶಿಷ್ಟ್ಯಗಳನ್ನು ತೋರಿಸಿದನು.

ಆ ತಪೊಭೂಮಿಯನ್ನು ನೋಡುತ್ತ ಬರುತ್ತಿರಲು ಶಿವನು ಸಮಾಧಿ ಮಗ್ನನಾಗಿರುವ ಪರ್ವತದಲ್ಲಿ ಎಲ್ಲವೂ ಶಾಂತ ಗಂಭೀರವಾಗಿತ್ತು. ಅಲ್ಲಿ ಗುರು ಶರ್ವನ ಸಮಾಧಿಗೆ ಭಂಗಬಾರದೆಂದು ಕೋಗಿಲೆಗಳು ಕೂಗುತ್ತಿರಲಿಲ್ಲ. ದುಂಬಿಗಳು ಮೊರೆಯುತ್ತಿರಲಿಲ್ಲ. ಗಿಳಿಗಳು ಗಳಹುತ್ತಿರಲಿಲ್ಲ. ಗಾಳಿ ಚಲಿಸುತ್ತಿರಲಿಲ್ಲ. ಮರಗಿಡಗಳ ಲತೆಯು ಅಲುಗಾಡುತ್ತಿರಲಿಲ್ಲ!.

ಗಿರಿಶಿಖರದ ಮುಖದ್ವಾರದಲ್ಲಿ ಸೂರ್ಯನಂತೆ ತೇಜಸ್ವಿಯೂ, ಮಹೇಶಧ್ಯಾನಾ ರೂಢನೂ, ಅತಿ ಚೆಲುವನೂ, ನಿರ್ಮಲ ಗುಣ ಶಿಖರನೂ, ಶಿವಜ್ಞಾನ ಮಗ್ನನೂ, ಸುಧೀರನೂ, ಸಾನಂದನೂ ಆದ ಶ್ರೀ ನಂದೀಶನು ಭಕ್ತಿಯಿಂದ ಕಾದು ನಿಂತಿದ್ದನು. ಗಿರಿಜೆ ಬಂದುದನ್ನು ಕಂಡು ಗೌರವದಿಂದ ಇದಿರುಗೊಂಡು ಪಕ್ಕಕ್ಕೆ ಸರಿದು, 'ತಾಯೇ ದೇವಿ, ಶಾಂತೆ, ಅನಂತಗುಣಾಭರಣೆ, ಕರುಣಿ ಶರಣು' ಎಂದನು.

ಶರತ್ಕಾಲದ ಮೋಡದೊಳಗಿಂದ ಮಿಂಚು ಇಳಿಯುವ ರೀತಿ ಗಿರಿಸುತೆಯು ವಿಮಾನದಿಂದಿಳಿದಳು. ಗಿರಿರಾಜನೂ ವಿಮಾನದಿಂದ ಇಳಿದನು. ಜಯೆ ವಿಜಯೆಯರು ನವರತ್ನದ ಪಾದುಕೆಗಳನ್ನಿಡಲು ಗಿರಿಜೆ ಅವುಗಳನ್ನು ಮೆಟ್ಟಿದಳು. ಶಿವನ ಒಲವನ್ನು ಮುಟ್ಟಿದಳು. ಪರಮೇಶ್ವರಿಯು ಚಂದ್ರಶೇಖರನನ್ನು ನೋಡುವ ಆಕಾಂಕ್ಷೆಯಿಂದ ತಂದೆಯ ಕೈಹಿಡಿದು ನಡೆದು ಬರುತ್ತಿದ್ದಾಗ ಅವಳ ನೂಪುರದನಿಯು ಹೇಮಕೂಟವನ್ನೂ, ಜಗತ್ತನ್ನೂ ವ್ಯಾಪಿಸಿತು.

ತಪೋನಿರತ ಶಿವ

ಹಾಗೆ ಬರುವಾಗ ವಿರೂಪಾಕ್ಷನ ಪ್ರಭಾಮಂಡಲ ಕಾಣಿಸಿತು. ಅದು ವಿದ್ಯುತ್ತಿನ ಪ್ರಭೆಯೋ, ಪೂರ್ಣಚಂದ್ರ ಕಿರಣ ಸಂಪತ್ತೋ, ಕೋಟಿ ಸೂರ್ಯರ ಹೊಳಪಿನ ಕಾಂತಿಯೋ, ಸರ್ವೇಶ್ವರನ ನಿಜ ಪ್ರಕಾಶನಿಧಿಯೋ ಎಂಬಂತೆ ತೋರಿ ದಿಗಂತ ವ್ಯಾಪ್ತಿಯಾಗಿತ್ತು.

ಶಿವನು ಭಸ್ಮಭೂಷಿತನೂ, ವಲ್ಕಲಧಾರಿಯೂ ಆಗಿ ರುದ್ರಾಕ್ಷ – ಅಕ್ಷಮಾಲೆಗಳನ್ನು ಧರಿಸಿದ್ದನು. ಅವನು ಕೆಂಜೆಡೆಗಳೊಡನೆ ಸದ್ಗುಣಗಳೇ ಯಜ್ಞೋಪವೀತವಾಗಿ; ಮುಚ್ಚಿದ ಕಣ್ಣುಗಳಿಂದ ನಿಶ್ಚಲಚಿತ್ತನಾಗಿ ಪದ್ಮಾಸನದಲ್ಲಿ ಕುಳಿತು ತಪೋನಿರತನಾಗಿದ್ದನು.

ವಿರೂಪಾಕ್ಷನು ನಿರ್ಮಾಯ, ನಿಷ್ಕಾಮಿ, ನಿಷ್ಕಂಪ, ನಿವಾತ ಜ್ಯೋತಿ ರೂಪನೆನಿಸಿದ್ದನು. ಅವನು ಭಿನ್ನಾಭಿನ್ನನೂ, ಜ್ಞಾನಮಯನೂ, ನಿಜ ತೇಜೋವಿಲೀನನೂ, ಅಚಲನೂ ಆಗಿ ತನ್ನನ್ನೇ ತಾನು ಧ್ಯಾನಿಸುವ ಬಿನ್ನಾಣದಲ್ಲಿದ್ದನು.

ಹೇಮಕೂಟದಲ್ಲಿ ಶಿವನ ಧ್ಯಾನಮೂರ್ತಿ ಪ್ರಭಾವವು – ಸತ್ಯಸ್ವರೂಪವೋ, ಶಾಂತಿಯನೆಲೆವನೆಯೋ, ಪುಣ್ಯದತೌರುಮನೆಯೋ, ಜ್ಞಾನದ ಪ್ರಕಾಶವೋ, ತತ್ವದ ತೇಜಃಪುಂಜವೋ, ಯೋಗಸಂಧಾನವೋ ಎಂಬಂತೆ ಬೆಳಗುತ್ತಿತ್ತು. ಜ್ಞಾತೃ, ಜ್ಞಾನ, ಜ್ಞೇಯ ಎಂಬ ತ್ರಿಪುಟಿಯನ್ನು ಮೀರಿ ಶಿವನು ತಾನೇ ತಾನಾಗಿದ್ದನು.

ಮುನಿಗಳಿಗೆ ಗೋಚರವಾಗದ, ಶಾಸ್ತ್ರವು ಅರಿಯದ, ವೇದವು ಪ್ರವೇಶಿಸದ ಘನತೇಜೋರಾಶಿ ಪರಶಿವನು ನಿಜನಿವೇಶದೊಳಿದ್ದನು. ಸ್ವಚ್ಛಅರಿವಿನಲ್ಲಿ ತನ್ಮಯನಾಗಿ ನಿಜಸಮಾಧಿಯಲ್ಲಿದ್ದನು.

ಗಿರಿರಾಜನು ಮೆಲ್ಲಡಿಗಳನ್ನಿಡುತ್ತ ಮುಂದೆ ಹೋಗಿ, ತಾಪಸಿ ಪರಶಿವನನ್ನು ಕಂಡು ಹರ್ಷಗೊಂಡನು. ಪುಳಕಗೊಂಡು ಸಾಷ್ಟಾಂಗ ನಮಸ್ಕಾರ ಮಾಡಿದನು. ತನ್ನ ಕುವರಿಗೆ,

'ಗಿರಿಜೆ, ಅನುಪಮನಿಗೆ ಶರಣಾಗು, ಶಾಶ್ವತ ಮೂರ್ತಿಯನ್ನು ಕಣ್ತುಂಬಿಸಿಕೊ, ಚಂದ್ರಧರನನ್ನು ನಂಬು. ನಿಜೇಶನನ್ನು ಸೂಕ್ಷ್ಮವಾಗಿ ನೋಡು. ಅಪ್ರತಿಮನನ್ನು ಸ್ತುತಿಸು. ಶಂಭುವನ್ನು ಪ್ರೀತಿಯಿಂದ ಅರ್ಚಿಸು' ಎಂದು ಹೇಳುತ್ತ ಶಿವನನ್ನು ಧ್ಯಾನಿಸುತ್ತ ಹೀಗೆ ನುಡಿದನು,

'ಮಗಳೇ, ಈತ ಭಕ್ತರ ಅಚ್ಚಶರಣರ ನಿಧಿ, ಕರುಣೆಯ ಕಡಲು, ನಿನ್ನ ಒಡೆಯನೆಂಬ ಕಲ್ಪವೃಕ್ಷ. ಶಿವನೇ ಆನಂದದ ಮೊದಲು, ಪರಮಾರ್ಥದ ತುದಿ! ಶಿವನನ್ನು ನೆನೆ, ಸ್ತುತಿಸು.'

ಗಿರಿರಾಜನು ಹರನ ಪರತತ್ವಮಯ ಸೌಂದರ್ಯ ರೂಪವನ್ನು ಸವಿಯುತ್ತ; ಮಗಳು ಗಿರಿಜೆಗೆ ತೋರಿಸುತ್ತ, 'ನಮಸ್ಕರಿಸು, ನಮಸ್ಕರಿಸು' ಎಂದು ಹೇಳುತ್ತಿದ್ದನು.

ಗಿರಿಜೆಗೆ ಕೌತುಕರಸದಲ್ಲಿ ಆನಂದವು ಸ್ಫುರಿಸಿ, ಭಯರಸದಲ್ಲಿ ಭಕ್ತಿ ಅಂಕುರಿಸಿ, ಸ್ನೇಹರಸದಲ್ಲಿ ಆಶಯು ಹೊರಹೊಮ್ಮಿ, ಶೃಂಗಾರ ರಸದಲ್ಲಿ ಲಜ್ಜೆ ಆವರಿಸಿತು. ಕಲ್ಪವೃಕ್ಷದ ಬಿಳಲು ಮಹಾನಿಧಾನಕ್ಕೆ ಎರಗುವಂತೆ, ಮಂದಾನಿಲದ ಸೋಂಕಿಗೆ ಪುಷ್ಪಮಾಲೆ ಬಳುಕುವಂತೆ, ಕುಸುಮಬಾಣನು ಕಾಲಿಗೆ ಸಮಸ್ಕರಿಸುವಂತೆ – ಮುಂದೆ ನಿನ್ನ ಎಡಭಾಗವನ್ನು ಸೂರೆಗೊಳ್ಳುವುದಕ್ಕೆ ಇದೇ ಸಂಕೇತ ಎಂಬಂತೆ ಬಿಂಕದಿಂದ ಕೊಂಕಿನಿಂತಳು. ಉಲ್ಲಾಸದಿಂದ ಶಿವನ ಎಡ ಅಂಗುಷ್ಟವನ್ನು ಹಣೆಯಿಂದ ಮುಟ್ಟಿ ನಮಸ್ಕರಿಸಿದಳು. ಭಾವಪರವಶಳಾಗಿ ಶಿವನನ್ನು ನೋಡುತ್ತ, 'ನಾನು ಇರುವಂತೆ ಇರಲು ಆಗುವುದಿಲ್ಲವೆ? ಬೇಡ ತಪಸ್ಸು, ನೀನೇ ಸದ್ಗತಿ, ದೇವ, ದಯೆ ತೋರು' ಎಂದು ಪ್ರಾರ್ಥಿಸಿದಳು. ಹಾಗೆ ಬಿನ್ನವಿಸುತ್ತ – ಶಿವನು ವೈರಾಗ್ಯದಿಂದ ದೂರನಾಗಿ ನಾನಾ ಭೋಗದಲ್ಲಿ ಎಂದು ಒಂದುಗೂಡುವನೋ ಎಂಬ ಆಸೆಯಲ್ಲಿ ನೋಡಿದಳು.

'ಈ ಶಿವನೇ ನನ್ನವಲ್ಲಭ, ನನ್ನಗುರು, ನನ್ನನುಆಳುವವನು ಎಂಬುದನ್ನು ತಿಳಿದೆನು. ಅಪ್ಪ ನೀನಿನ್ನು ಹಿಂತಿರುಗು. ಪ್ರತಿನಿತ್ಯವೂ ಉತ್ಸಾಹದೊಡನೆ ಸಂತಸದಿಂದ ಅರ್ಚಿಸುತ್ತೇನೆ. ಆಶಾಭಾವದಲ್ಲಿ ಇರುತ್ತೇನೆ' ಎಂದು ತಂದೆಗೆ ಹೇಳಿದಳು. ಗಿರಿರಾಜನು ತುಂಬಿದೊಲವಿಂದ ಮಗಳನ್ನು ನೋಡುತ್ತ,

'ಅಮ್ಮ ಗಿರಿಜೆ. ಇದು ನಟ್ಟಡವಿ. ಗುಹೆ ಗಹ್ವರ, ಮಡು, ದಟ್ಟ ಮರಗಳಿಂದ ಕೂಡಿದೆ. ಇಲ್ಲಿ ಎಚ್ಚರಿಕೆಯಿಂದಿರು. ಶಾಂತಿ ಸಮಾಧಾನಗಳಿಂದ ಶಿವನನ್ನು ಪೂಜಿಸು.'

ಎಂದು ಹೇಳಿ ಹತ್ತು ಹೆಜ್ಜೆ ಮುಂದಕ್ಕೆ ಹೋಗಿದ್ದವನು ಮಗಳ ಮೋಹದಿಂದ ಅಳ್ಳಿರಿದು ತಿರುಗಿಬಂದನು.

'ಅಮ್ಮ ಮಗಳೇ, ಗಿರಿಜೇ, ಲೋಕೋತ್ತಮೇ ಹೋಗುವೆ' ಎಂದು ಮತ್ತೆ ಮತ್ತೆ ಮಗಳನ್ನು ಮುದ್ದಿಸಿ ತಲೆಮೂಸಿ ಹರಸಿ ಹೋದನು.

ಶರ್ವನ ಪೂಜೆಗೆ ಗಿರಿಜೆಯ ಹೂ ಸಂಗ್ರಹ

ತಂದೆ ಹೋದನಂತರ ಮುಂದಿದ್ದ ತಪೋಮಯ, ಭಸಿತಕಾಯ, ಸೌಂದರ್ಯ ಸ್ವರೂಪ, ಜ್ಞಾನದೀಪ ಶಿವನನ್ನು ನೋಡಿದಳು. ಶೃಂಗಾರರಸಕ್ಕೆ ಮನಸ್ಸುಕೊಟ್ಟು ವೈರಾಗ್ಯರಸಕ್ಕೆ ಮೈಯೊಡ್ಡಿ ಸಹಚರಿಯರಾದ ಜಯೆ ವಿಜಯೆಯರಿಗೆ,

'ಎಲೈ ಸಖಿಯರೇ, ಶಿವನದು ತಪಸ್ಸು. ನನ್ನದು ವಿರಹತಾಪ. ಶಿವನತಪಸ್ಸು ಸೂರ್ಯನತೇಜಸ್ಸಿಗೂ, ಕುಬೇರನಅರಿವಿಗೂ ಮೀರಿದ್ದು. ಹಾಗಾಗಿ ಅದು ಸೋಜಿಗವೂ, ಅಭೇದ್ಯವೂ ಆಗಿದೆ.

'ವೇದ, ವಿಷ್ಣು, ಬ್ರಹ್ಮ ಅರಿಯಲಾಗದ ಶಿವನನ್ನು ತಾನು ಅರಿಯಲು ಸಾಧ್ಯವೇ? ನನ್ನ ತಿಳಿವಿನ ಪ್ರಕಾರ ಸಾತ್ವಿಕ ಭಕ್ತಿಗಲ್ಲದೆ ಶಿವ ಒಲಿಯನು. ಆದ ಕಾರಣದಿಂದ ಭಕ್ತಿಪ್ರದ ವಿರೂಪಾಕ್ಷನ ಪಾದಕಮಲಗಳನ್ನು ಪೂಜಿಸುತ್ತೇನೆ. ಸದಮಳ ಶಿವಮುಖದ ಸಂಪತ್ತಿನಲ್ಲಿದ್ದು, ಬಳಿಕ ಶರ್ವನ ತನುವನ್ನು ಅಪ್ಪುತ್ತೇನೆ.'

ಎಂದು ಹೇಳಿ ಭಕ್ತಿ ಆವರಿಸಿದ ಮನದಲ್ಲಿ ಮುದಗೊಂಡು ಹೂಗಳನ್ನು ಸಂಗ್ರಹಿಸಲು ಹೊರಟಳು.

ಅವಳ ನೂಪುರದ ನುಣ್ದನಿಗೆ ಹಂಸೆಗಳು ಮುತ್ತಿ ಬಂದವು. ಅವುಗಳನ್ನು ಎಡವುತ್ತಾ

ಸದ್ಭಾವದ ಭಾಮಿನಿ, ಶಿವನ ಜೀವಶೃಂಗಾರ ವಾರಿನಿಧಿ ಗಿರಿಜೆ ನಡೆದು ಹೂ ತೋಟವನ್ನು ಹೊಕ್ಕಳು.

ಸುಕುಮಾರೆ ಮೆಲ್ಲಡಿ ಇಡುತ್ತ ಹರನ ಜಡೆಮುಡಿಗೆ ಇರವಂತಿಗೆ ಹೂ ಬಿಡಿಸಿದಳು. ಚಂಪಕನಾಸಿಕೆಯೂ, ಚಂಪಕ ಸುಗಂಧಿಯೂ ಆದ ಅವಳು ಸಂಪಿಗೆಹೂ, ಕಣಗಿಲೆಹೂ, ಪಾದರಿಹೂಗಳನ್ನು ಸಂಗ್ರಹಿಸಿದಳು. ತಿಳಿಗೊಳದಲ್ಲಿಯ ಹೊಸ ತಾವರೆಹೂಗಳನ್ನು, ಅರಳಲಿರುವ ನೈದಿಲೆಗಳನ್ನು ಆರಿಸಿಕೊಂಡಳು.

'ಶರ್ವನ ಮುಡಿಗೇರಿಸಲು ನಿಮ್ಮಲಿಗೆ ಬಂದಿರುವೆ' ಎನ್ನುತ್ತ ಸಮ್ಮುದದಿಂದ ಮಲ್ಲಿಗೆಹೂ ಗೊಂಚಲನ್ನು ಕೊಯ್ದಳು. ಸುಗಂಧಯುಕ್ತ ಮರುಗವನ್ನು, ಮುಡಿವಾಳದ ಸುಗಂಧ ಬೇರುಗಳನ್ನು ಆಯ್ದು ತೆಗೆದುಕೊಂಡಳು. ಅಲ್ಲಿಂದ ಹೊಸ ಚಿಗುರ ಎಳೆಮಾವಿನ ಮರದ ಕಡೆಗೆ ನಡೆದಳು. ಜಯೆ ವಿಜಯೆಯರು ಅಲ್ಲಿಗೆ ಬಂದು ಹೂಬುಟ್ಟಿಗಳನ್ನು ಗಿರಿಜೆಯಿಂದ ಪಡೆದು ನಿರ್ಮಲ ಸ್ಥಾನದಲ್ಲಿರಿಸಿ ಮುದದಿಂದ ನಮಸ್ಕರಿಸಿದರು.

ಎಳೆ ಮಾವಿನಮರದ ಅಡಿಯಲ್ಲಿ – ಬಹಳ ಸುಂದರವಾದ ಕಿರಣಗಳು ಅಂಕುರಿಸಿದಂತೆ ನಳನಳಿಸುತ್ತಲಿರುವ ಹೊಸಗರಿಕೆಯ ಮೇಲೆ – ಬಾಳೆ ಎಲೆಗಳನ್ನು, ತಾವರೆಎಲೆಗಳನ್ನು, ಹೊಂಬಾಳೆಯನ್ನು ಹಾಸಿದರು. ಸಂಗ್ರಹಿಸಿ ತಂದ ಬಗೆಬಗೆಯ ಹೂಗಳನ್ನು ಸುರಿದು ಅದರ ಸುವಾಸನೆಗೆ ಮುತ್ತುವ ದುಂಬಿಗಳನ್ನು ಸೋವಿದರು. ಸುಕುಮಾರಿ ನಗತನೂಜೆಯನ್ನು ಕರೆದರು.

ಗಿರಿಜೆಯು ತನ್ನ ಮೃದುಪಾದಗಳನ್ನು ಮೆಲ್ಲನೆ ಊರುತ್ತ ಬಂದು ಮಾವಿನ ಚಿಗುರಿನ ಹೊಸ ಹಸೆಯ ಮೇಲೆ ಕುಳಿತುಕೊಂಡಳು. ಪರಿಮಳದ ಅಧಿದೇವತೆಯೋ, ವರ ಕುಮುದದೊಡನೆ ಬಂದ ಶಶಿಕಲೆಯೋ, ಸರೋಜ ಪುಷ್ಪದ ನಡುವಿಂದ ಎದ್ದುಬಂದ ಲಕ್ಷ್ಮಿಯೊ ಎಂಬಂತೆ ಕಂಗೊಳಿಸುತ್ತಿದ್ದಳು.

ಮುಟ್ಟಿದರೆಬಾಡುವ, ನೆಟ್ಟನೆದಿಟ್ಟಿಸಿ ನೋಡಿದರೆ ಕುಂದುವ, ನೆನೆದರೆ ತಟ್ಟನೆ ಕೊರಗುವ ಇಂಥ ಹೂಗಳನ್ನು ಕಟ್ಟುವರೀತಿ ಹೇಗೆಂದು ಚಿಂತಿಸಿದಳು. ಭಕ್ತಿಭರಿತ ಪೂಜೆಗೆ ಸಿದ್ಧಗೊಳಿಸ ಬೇಕಾಗಿರುವುದರಿಂದ ಮುಟ್ಟಿದರೆ ಅವು ಕೊರಗುವುದಿಲ್ಲವೆಂದು ಭಾವಿಸಿದಳು. ಅತಿ ಸುಕುಮಾರಿಯಾದ ಮೃಡಾಣಿಯು ತನ್ನ ಮೃದುಬೆರಳುಗಳಿಂದ ಇರುವಂತಿಗೆ ಹೂಗಳನ್ನು ಹಿಡಿದು, ಕಮಲದಂಟಿನ ಎಳೆಗಳಿಂದ ಮಾಲೆ ಕಟ್ಟಿದಳು. ಸರಸಿಜಬಂಧ, ಮದ್ದಳೆಬಂಧ, ತರುಬಂಧ, ನಾಗಬಂಧ, ಗಿರಿಬಂಧ, ಲಿಂಗಬಂಧ, ಚಂದ್ರಬಿಂಬ ರವಿಬಿಂಬ ಬಂಧಗಳೆಂಬ ವಿವಿಧ ಬಗೆಯ ವಿನೂತನ ಬಂಧಗಳ ಹೂ ಮಾಲೆ ಕಟ್ಟಿದಳು.

ಚಂದದ ಬಂಧಗಳನ್ನು ಕುಸುರಿ ಕಲೆಯಂತೆ ಹೆಣೆದು ಬಳಲಿದಳು. ಕೆನ್ನೆ ಗಲ್ಲಗಳಲ್ಲಿ ಬೆವರು ಮೂಡಿ, ಕೈಸೋತವು. ಆಯಾಸಗೊಂಡ ಪಾರ್ವತಿಗೆ ಸೇವಂತಿಗೆಯ ತಂಪಾದ ನೀರಿನಲ್ಲಿ ಸ್ನಾನ ಮಾಡಿಸಿದರು. ಹೂ ಪರಾಗವನ್ನು ಮೈಗೆ ಲೇಪಿಸಿದರು. ಮಕರಂದದ ತಿಲಕವಿಟ್ಟರು. ಕದಂಬ ಹೂವಿಂದ ಮುಡಿಯನ್ನು ಸಿಂಗರಿಸಿದರು. ಮಲ್ಲಿಗೆ ಮೊಗ್ಗಿನ ಏಕಾವಳಿಯಹಾರ ಹಾಕಿ ಮೊಲ್ಲೆಯ ಮೊಗ್ಗುಗಳ ಕಂಕಣ ಕಟ್ಟಿದರು. ನವಲತೆಯನ್ನು ಚಿಗುರುಗಳಿಂದ ಅಲಂಕರಿಸುವಂತೆ, ಪಿನಾಕಿಯ ಮನೋರಥವನ್ನು ಪುಣ್ಯದ ಫಲದಿಂದ ಪ್ರಸಾದಗೊಳಿಸುವಂತೆ, ಕುಸುಮಬಾಣವನ್ನು ಹೊಸ ಕಂಪಿಂದ ಹರಿತ ಗೊಳಿಸುವಂತೆ

ಶರ್ವಾಣಿಯನ್ನು ಶೃಂಗರಿಸಿದರು. ಅವರು ಉಡಿಸಿದ್ದ ರೇಷ್ಮೆ ಸೀರೆಯಿಂದ ಅವಳ ಲಾವಣ್ಯ ಮೇರೆ ಮೀರಿತ್ತು.

ಪೊಡೆಮಡುತ್ತಾನಂದಾಶ್ರುಗಳಿಂದೆ ಚರಣತಳಮಂ ತೊಳೆದಳ್

ತುರುಬನ್ನು ಅಲಂಕರಿಸಿದ ಕದಂಬ ಪುಷ್ಪದಗೊಂಚಲು ಅಲುಗುವುದು ಶಿವನ ಮನೋರಥ ಮೂರ್ತಿಗೊಂಡಂತಿತ್ತು. ಚಂದ್ರಕಳೆ ಕಣ್ದೆರೆದಂತೆ ಬಂದ ಗಿರಿಜೆಯು ಚಂದ್ರಧರನ ಮುಂದೆ ನಿಂತಳು. ಅವಳು ಗಿರೀಶನ ಪಾದಗಳಿಗೆ ಅರ್ಪಿಸಿದ ಹೂಗಳು ಮನ್ಮಥನು ಹಗಲು ಇರುಳು ಬಿಟ್ಟ ಹೂ ಬಾಣಗಳಂತಿದ್ದವು. ಗಿರಿಜೆಯು ಭಾವಪೂರ್ಣವಾಗಿ ನಮಿಸುತ್ತ ಪುಳಕಗೊಂಡು ಆನಂದಾಶ್ರುಗಳಿಂದ ಶಿವನ ಪಾದವನ್ನು ತೊಳೆದಳು.

ಗಿರಿಜೆಯು ಪ್ರೀತಿಯಿಂದ ಶಿವನ ಪಾದದ ಮೇಲೆ ಹಣೆಯೊತ್ತಿ ನಮಸ್ಕರಿಸಿದಾಗ ಅವಳ ಮಕರಂದ ತಿಲಕದ ಗುರುತು ಅಲ್ಲಿಯೇ ಉಳಿಯಿತು. ಅದು ಹರನ ಪಾದಕ್ಕೆ ಚಂದನದ ಸೊಬಗಾಗಿ ಶೋಭಿಸಿತು. ಶಿವನ ಕುತ್ತಿಗೆಗೆ ಹೊಸ ಹೂಮಾಲೆ ಹಾಕುವಾಗ ಅವನನ್ನು ಮುಟ್ಟಿ ಪುಳಕಗೊಂಡಳು. ಅಭವನನ್ನು ಹೂಗಳಿಂದ ಸಿಂಗರಿಸುತ್ತ ನಗೆಮೊಗದ ಕಾಂತಿಯ ಆರತಿಯನ್ನು ಬೆಳಗಿದಳು. ಶರ್ವನಿಗೆ ಭಕ್ತಿಯಿಂದ ಆರೋಗಣೆ ಬಡಿಸಿದಳು.

ಶಿವನ ಮನೋಹರ ಕಾಂತಿಮಯ ಸುಕುಮಾರ ಅವಯವಗಳನ್ನು ನೋಡಿ ನಲಿದಳು. ಅವನ ಘನವೈರಾಗ್ಯಕ್ಕೆ ಅಂಜಿ ಸಿಡಿಮಿಡಿಗೊಂಡಳು. ಮೇನಾ ದೇವಿಯ ಕುವರಿ ಗಿರಿಜೆ ಮದನಾಸಕ್ತಿಯಿಂದ ಶಿವನನ್ನು ಸುತ್ತಿ, ಹೆದರಿ ಹಿಮ್ಮೆಟ್ಟಿ, ಬಾಡಿ ಕುಂದಿ, ಅತ್ತು ಬಳಲಿದಳು.

ನೋಡುವವರ ಕಣ್ಣಿಗೆ ಚಂದ್ರನಂತೆ ಶೀತಳವಾದ ಸುಧಾಕಿರಣಗಳನ್ನು ಬೀರುವ, ಮುಟ್ಟುವವರಿಗೆ ಸೂರ್ಯನಂತೆ ತೀವ್ರ ಪ್ರತಾಪವನ್ನುಂಟುಮಾಡುವ, ಹೊಗಳುವವರ ನಾಲಗೆಗೆ ಅಮೃತದಂತಿರುವ ಕೇಳುವವರ ಕಿವಿಗೆ ಮಧುರ ವಾಣಿಯಂತಿರುವ, ನೆನೆಯುವವರ ಮನಕ್ಕೆ ನಿರುಪಾದಿಕ ಜ್ಯೋತಿಯಂತೆ ಬೆಳಗುವ ರುದ್ರನ ಮನೋಹರ ಮೂರ್ತಿಯನ್ನು – ಪಾರ್ವತಿ ನೋಡಿನೋಡಿ ತಣಿಯದೆ, ಸೋಂಕಿಸೋಂಕಿ ಸವೆಯದೆ, ಹೊಗಳಿಹೊಗಳಿ ತೀರದೆ –ಪ್ರತಿ ದಿನವೂ ಹೊಚ್ಚ ಹೊಸ ಹೂಗಳನ್ನು ತಂದು ಭಕ್ತಿಯಿಂದ ಅರ್ಚಿಸುತ್ತಿದ್ದಳು.

* * * * *

ಅತುಳ ಪರಾಕ್ರಮಿ ತಾರಕಾಸುರ

ತಾರಕಾಸುರನೆಂಬ ರಾಕ್ಷಸನು ಅತಿಬಲಾಢ್ಯನಾಗಿ ಸೊಕ್ಕಿನಿಂದಿದ್ದನು. ಅವನು ದೇವತೆಗಳು, ನರರು, ಸರ್ಪಗಳ ಮಸ್ತಕಕ್ಕೆ ಶೂಲನಂತಿದ್ದನು. ಲೋಕಪಾಲಕರಿಂದ ವಂದಿತನಾಗಿ ಪ್ರಖ್ಯಾತನಾಗಿದ್ದನು. ಅವನು ಸರ್ಪಗಳ ಸಮುದ್ರಕ್ಕೆ ಬಡಬಾನಲನಂತೆಯೂ, ಮರ್ತ್ಯದ ಮಾನವರಿಗೆ ಕಾಳ್ಗಿಚ್ಚಿನಂತೆಯೂ, ಸುರರ ಸಮೂಹವೆಂಬ ಮೋಡಕ್ಕೆ ಬಿರುಗಾಳಿಯಂತೆಯೂ ಇದ್ದನು. ಅವನು ಯುವಕನಿದ್ದು ತೀವ್ರ ಕೋಪಿಷ್ಠನೂ, ಬಲಿಷ್ಠನೂ ಆಗಿ ಮೂರು ಲೋಕಗಳನ್ನು ಸದಾ ಶೋಷಿಸುತ್ತಾ ಹಿಂಸಿಸುತ್ತಿದ್ದನು.

ತಾರಕಾಸುರನು ಆತ್ಮಬಲವೆಂಬ ಕಣ್ಣುಗಳ ಮಧ್ಯದಲ್ಲಿ ಶ್ರೀ ತಾರಕೆಯನ್ನು ಹೊಂದಿದ್ದು, ಶತ್ರುರಾಜರೆಂಬ ಕಗ್ಗತ್ತಲನ್ನು ಭೇದಿಸುವ ಕಿರಣಗಳುಳ್ಳವನಾಗಿದ್ದನು. ಅವನು ಭೂಲೋಕದ ಜನರನ್ನು ಬಡಿದು, ಅಷ್ಟದಿಕ್ಪಾಲಕರ ಗಂಟಲನ್ನು ಮೆಟ್ಟಿ, ಭೀಕರ ಫಣಿಲೋಕವನ್ನು ಒತ್ತಿ, ನಾಕದ ದೇವತೆಗಳನ್ನು ಓಡಿಸಿದ್ದನು.

ಮಹಾ ಪರಾಕ್ರಮಶಾಲಿಯಾದ ಅವನ ಹಿಂಸೆಯನ್ನು ತಡೆಯಲಾಗದೆ ನಾಗ, ನರ, ಸುರ, ಕಿನ್ನರ ಕಿಂಪುರುಷರೆಲ್ಲರೂ ಒಟ್ಟುಗೂಡಿದರು. ಮೇರು ಪರ್ವತದಲ್ಲಿರುವ ವಿಷ್ಣು, ಬ್ರಹ್ಮ ದೇವೇಂದ್ರರ ಸಭಾನಿಲಯಗಳ ದ್ವಾರಗಳ ಮುಂದೆ ನಿಂತರು. ಅವರು ಸಂತೋಷರಹಿತರಾಗಿ, ಮುಂದುಗೆಟ್ಟು ಒಟ್ಟಾಗಿ ನಿಂತಿದ್ದರು. ಅವರ ಮೊರೆಯನ್ನು ಕೇಳಿದ ವಿಷ್ಣು, ಬ್ರಹ್ಮ, ದೇವೇಂದ್ರರು ಮರುಗಿದರು. ಈ ಘೋರ ಶೋಕಕ್ಕೆ ಯಾರು ಕಾರಣ? ಈ ಸಂಕಟವನ್ನುಂಟು ಮಾಡಿದವನು ಯಾರು? ಎಂದು ಆಲೋಚನೆಗೆ ಒಳಗಾದರು.

ಗುಂಪು ಗೂಡಿ ಬಂದಿದ್ದ ನರ, ಸುರ, ಉರಗ ಸಮೂಹವು ಹೆದರುತ್ತ, ಕಣ್ಣಲ್ಲಿ ನೀರು ಸುರಿಸುತ್ತ, ಕೈಯಲ್ಲಿ ಅಸಹಾಯಕ ಸೂಚಕವಾಗಿ ಹುಲ್ಲು ಹಿಡಿದು, ನೋವಿನ ತಾಪದಲ್ಲಿ ಪ್ರಾರ್ಥಿಸಿದರು:

'ವಿಷ್ಣುವೇ ಕಾಪಾಡು. ಬ್ರಹ್ಮನೇ ಕಾಪಾಡು. ದೇವೇಂದ್ರನೇ ಕಾಪಾಡು. ತಾರಕಾಸುರನಿಂದ ನೊಂದು ಬೆಂದಿದ್ದೇವೆ. ನಮ್ಮಲ್ಲಿ ಕರುಣೆ ತೋರಿಸಿ. ನಮಗೆ ನೆಲೆಯಿಲ್ಲ, ರಕ್ಷಣೆಯಿಲ್ಲ. ನಮಗೆ ಮುಂದೇನು ಎಂಬ ಚಿಂತೆಯಾಗಿದೆ. ನಮಗೆ ಆಶ್ರಯ ಕೊಡಿ.

'ತಾರಕನ ಏಳಿಗೆ, ಪರಾಕ್ರಮ, ಅಹಂಕಾರ ಮಿತಿಮೀರಿದೆ. ಅವನ ಆಜ್ಞೆಯಿಂದ ವಿಪರೀತ ದಾಳಿಯಾಗಿದೆ. ಅವನ ಉತ್ಸಾಹಭರಿತ ಕ್ರೌರ್ಯ, ಮೂರ್ಖತನ ಮೇರೆಮೀರಿದೆ.

'ತಾರಕನು ಪಾಪಕೃತ್ಯಗಳಿಂದ ಭೂಮಿಗೆ ಭಾರವಾಗಿದ್ದಾನೆ. ಅವನು ಪಾಪಿಷ್ಠನಾಗಿ, ಪಾಪ ಪ್ರೇರಕನಾಗಿದ್ದಾನೆ. ಅಂತಹ ದುರ್ಗುಣಗಳ ರಕ್ಕಸನನ್ನು ಎದುರಿಸುವವರು ಯಾರು?'

ವಿಷ್ಣು, ಬ್ರಹ್ಮ, ಇಂದ್ರರು ಮೂರು ಲೋಕಗಳವರ ಸಂತಾಪಕ್ಕೆ ನೊಂದು, ಸಂತೈಸಿದರು. ಅನಂತರ ಏಕಾಂತದಲ್ಲಿ ಕುಳಿತು ಸಮಾಲೋಚನೆಯಲ್ಲಿ ತೊಡಗಿದರು.

ಪರಮೇಶ್ವರನು ನಿರುಪಮ ತಪೋಮಗ್ನನಾಗಿದ್ದಾನೆ. ಲೋಕದ ಜನ ತಲ್ಲಣಗೊಂಡು ಹುಯ್ಯಲಿಡುತ್ತಿದ್ದಾರೆ. ಅದನ್ನು ಸೈರಿಸಲು ಆಗುತ್ತಿಲ್ಲ. ವೀರ ತಾರಕಾಸುರನು ಅತುಳ ಪ್ರತಾಪನಿಧಿಯಾಗಿದ್ದು, ಅವನೊಡನೆ ಕಾದುವವರು ಯಾರೂ ಇಲ್ಲ. ಈ ಪರಿಸ್ಥಿತಿಯಲ್ಲಿ

ಯುದ್ಧ ಮಾಡುವುದು ನಿರರ್ಥಕ. ಅವನೊಡನೆ ಸಂಧಾನ ನಡೆಸುವುದೇ ಸರಿಯಾದ ಮಾರ್ಗ. ದೇವಗುರು ಬೃಹಸ್ಪತಿಯನ್ನು ಈ ಕಾರ್ಯಕ್ಕೆ ಕಳುಹಿಸೋಣ ಎಂದು ತೀರ್ಮಾನಿಸಿದರು. ದೇವಗುರುವನ್ನು ಕಂಡು,

'ಎಲೈ ಬೃಹಸ್ಪತಿಯೇ, ಸಕಲಕಲಾಪೂರ್ಣನೂ, ಅಕಳಂಕಚರಿತನೂ ಆದ ನೀನು ನಮ್ಮ ದೇವಗುರು. ಘನ ಸಾತ್ವಿಕನಾದ ನೀನು ತಾರಕಾಸುರನ ಬಳಿಗೆ ಹೋಗಿ ಸಂಧಾನ ಮಾಡು. ಅವನೊಡನೆ ವಿನಯದಿಂದ ಆಲೋಚನೆ ನಡೆಸು. ಅನುಕೂಲನಂತೆ ಅವನೊಡನೆ ವ್ಯವಹರಿಸಿ ಸಾಮೋಪಾಯದಿಂದ ಯುದ್ಧ ಕೈ ಬಿಡುವಂತೆ ಮಾಡು. ಅದಕ್ಕೆ ಅವನು ಒಪ್ಪದಿದ್ದರೆ ಏನಾದರೂ ಕೊಡುವುದಾಗಿ ತಿಳಿಸಿ ಯುದ್ಧ ವಿಮುಖನನ್ನಾಗಿ ಮಾಡು.

'ಅವುಗಳಿಗೆ ಅವನು ಬಗ್ಗದಿದ್ದರೆ, ಮಾತಿನಲ್ಲಿ ಸಿಕ್ಕಿ ಬೀಳದೆ ಅವನ ಮನಸ್ಸನ್ನು ದಾನೋಪಾಯದಿಂದ ಸಮಾಧಾನಪಡಿಸು. ಇವು ಯಾವುದಕ್ಕೂ ಅವನು ಒಪ್ಪದೆ ತನ್ನ ಚಂಚಲ ಸ್ವಭಾವದಿಂದ ಮೀರಿ ನಡೆದರೆ ಅವನನ್ನು ಯುದ್ಧದಲ್ಲಿ ಎದುರಿಸೋಣ' ಎಂದು ರಾಜ ನೀತಿಯನ್ನು ವಿವರಿಸಿ ಬೃಹಸ್ಪತಿಯನ್ನು ತಾರಕನಲ್ಲಿಗೆ ಕಳುಹಿಸಿದರು.

ತಾರಕನೊಡನೆ ಸಂಧಾನ

ಸ್ಥಿರಚಿತ್ತ, ಸರ್ವಕಾರ್ಯಸಾಧನಾ ಪರಿಣತ, ಹರಪಾದಾರಾಧಕನಾದ ವಾಚಸ್ಪತಿಯು ಪುಷ್ಪಕ ವಿಮಾನವನ್ನೇರಿ ತಾರಕನ ರಾಜಧಾನಿಗೆ ಹೋದನು. ಉತ್ಸಾಹಭರಿತನಾದ ದೇವಗುರುವು ರಾಜಗೃಹದ ಪ್ರತಿಹಾರ ಪ್ರದೇಶದಲ್ಲಿ ನಿಂತನು. 'ಸುರೇಂದ್ರನಮಂತ್ರಿ ಬಂದಿರುವೆನು' ಎಂದು ತಿಳಿಸಿದನು. ದ್ವಾರಪಾಲಕನು ರಾಜಸಭಾ ಭವನದ ಬಾಗಿಲು ತೆರೆದನು. ಬೃಹಸ್ಪತಿಯನ್ನು ಕಂಡು ತಾರಕನು ಉಪಚರಿಸಿದನು. ಕೊಂಡಾಡುತ್ತ ಉನ್ನತಾಸನವನ್ನಿತ್ತು ಪ್ರಶ್ನಿಸಿದನು,

'ಎಲೈ ದೇವಗುರುವೇ, ಇಂದ್ರನು ಕುಶಲವೇ? ಬ್ರಹ್ಮನು ಕ್ಷೇಮವೇ? ವಿಷ್ಣುವು ಆರೋಗ್ಯವೇ? ನೀವು ಇಲ್ಲಿಗೆ ಬಂದ ಕಾರಣವೇನು?'

'ಎಲೈ ದನುಜೇಶ್ವರ, ನಿನ್ನ ಪರಾಕ್ರಮದ ತೀಕ್ಷ್ಣತೆ..' ಎಂದು ಬೃಹಸ್ಪತಿ ಹೇಳುವಷ್ಟರಲ್ಲಿ ಅಟ್ಟಹಾಸದ ನಗು ನಗುತ್ತ ತಾರಕನು ನಡುವೆ ಮಾತಾಡಿದನು,

'ಓಹ್, ಅದರ ಕಾವು ನಿಮ್ಮನ್ನು ಸುಡುತ್ತಿದೆಯಲ್ಲವೇ?'

'ನನ್ನನ್ನು ಅಲ್ಲ. ನಾಗ, ಮರ್ತ್ಯ, ದೇವತಾ ಸಮೂಹಗಳೆಲ್ಲವೂ ನಿನ್ನ ಉಪದ್ರವದಿಂದ ತತ್ತರಿಸಿ ಹೋಗಿದೆ'.

ಅದನ್ನು ಕೇಳಿದ ತಾರಕಾಸುರನು ಮೈಯುಬ್ಬಿ, ಹುಬ್ಬೇರಿಸುತ್ತ, ಮೀಸೆ ಹುರಿ ಮಾಡಿಕೊಂಡು ಹೇಳಿದನು,

'ಅದು ನನ್ನ ಸಾಹಸದರೀತಿ.'

'ನಿನ್ನ ಸಾಹಸ ಮೂರು ಲೋಕಗಳಿಗೂ ದುಃಖವಾಗಿದೆ. ನಾಗ ನರ ದೇವತೆಗಳ ನೋವನ್ನು ಬ್ರಹ್ಮ, ವಿಷ್ಣು, ಇಂದ್ರರು ಒಂದೆಡೆಸೇರಿ ಕೇಳಿದರು. ಅವರಲ್ಲಿ ಕರುಣೆ ಉಂಟಾಯಿತು. ನನ್ನನ್ನು ಕರೆದು ಸಮಸ್ಯೆ ಬಗೆಹರಿಸುವ ಬಯಕೆಯಿಂದ ನಿನ್ನಲ್ಲಿಗೆ ಕಳುಹಿಸಿದರು.'

'ನನ್ನ ಶೌರ್ಯದ ಝಳ ಅವರಲ್ಲಿ ಕರುಣೆಗೆ ಕಾರಣವಾಗಿದೆ!' ಎಂದು ಬಡಿವಾರದನಗು

ನಕ್ಕಾಗ ಇಂದ್ರನ ಮಂತ್ರಿಗೆ ಕೋಪ ಉಂಟಾಯಿತು. ಆದರೂ ಅದನ್ನು ತೋರಗೊಡದೆ ನಯವಾಗಿ,

'ತಾರಕಾಸುರನೇ, ಯುದ್ಧದಲ್ಲಿ ನಿನಗೆ ಸಮಾನರಾದವರು ಇರುವರೇ?' ಎಂದು ಹೇಳುತ್ತ ರಕ್ಕಸನು ಹರ್ಷದಿಂದ ಸಂಧಾನಕ್ಕೆ ತೆರೆದುಕೊಳ್ಳುವಂತೆ ಮಾಡಿದರು.

'ಬೃಹಸ್ಪತಿಗಳೇ, ನಿಮ್ಮ ನಾಲಗೆ ಸತ್ಯವನ್ನು ಸಾರುತ್ತಿದೆ.'

'ಎಲೈ ತಾರಕ, ಗಂಭೀರನೂ ಧೀರನೂ ಆಗಿ ಶತ್ರುಸೈನ್ಯವೆಂಬ ಅರಣ್ಯಕ್ಕೆ ದಾವಾನಲ ನಂತಿರುವ ನಿನಗೆ ಅಸಾಧ್ಯವಾದುದು ಯಾವುದಿದೆ ಹೇಳು.'

ತಾರಕನಿಗೆ ಸಂತೋಷ ಇಮ್ಮಡಿಸಿತು. ಆದರೂ ಜಾಣನಾದ ಅವನು ಸುರೇಂದ್ರ ಮಂತ್ರಿಯ ಮಾತಿನ ತೊಟ್ಟುಹಿಡಿದು,

'ಎಲೈ ಬೃಹಸ್ಪತಿ, ಈ ಬಗೆಯ ನೀತಿ ಏತಕ್ಕೆ? ಜಯವನ್ನು ಮುಂದಿಟ್ಟುಕೊಂಡು ಬಂದಿರುವ ರಾಜನೀತಿಜ್ಞ ನೀನು. ಅತಿ ನಿರ್ಣಯದ ಮಾತುಗಳನಾಡುತ್ತಿರುವೆ, ಯುದ್ಧಸಿದ್ಧತೆ ಏನಾದರೂ ಇದೆಯೇ?'

'ಯುದ್ಧಸಿದ್ಧತೆ ನಿನ್ನಎದುರೆ? ನಿನ್ನಉಪದ್ರವ ನಿಲ್ಲಿಸು ದಾನವೇಂದ್ರ.'

'ಇಂದ್ರನ ಮಂತ್ರಿಯೇ, ಅದು ಸಾಧ್ಯವಿಲ್ಲ.'

ನಯದ ಮಾರ್ಗವನ್ನು ನಿರಾಕರಿಸಿದ ತಾರಕನಿಗೆ ಸುರಗುರು ಹೇಳಿದ,

'ನೀನು ನಯವನ್ನು ಒಲ್ಲೆ. ರಾಜನೀತಿ ನಿಪುಣ ಸಚಿವರು ನಿನ್ನಲ್ಲಿ ಇಲ್ಲ. ಇರುವ ಸಚಿವರು ಹೇಳುವ ಹಿತವಚನವನ್ನು ನೀನು ಕೇಳುವುದಿಲ್ಲ. ಸಂದೇಹ ಮನದ ನೀನು ಯಾರನ್ನೂ ನಂಬುವುದಿಲ್ಲ. ನಂಬಿದ ಹಿತಜನ ಆಡುವ ಮಾತನ್ನು ನೀನು ಸ್ವೀಕರಿಸುವುದಿಲ್ಲ. ನೀನು ತನುಮದದಿಂದ ಮೇರೆ ಮೀರಿರುವೆ.'

ಬುದ್ಧಿವಂತನಾದ ತಾರಕನು ದೇವಗುರುವಿನ ಮಾತು ಸಾಮೋಪಾಯ ಬಿಟ್ಟು ಭೇದೋಪಾಯಕ್ಕೆ ಸಾಗಿರುವುದನ್ನು ತಿಳಿದು ನಕ್ಕು,

'ಎಲೈ ಬೃಹಸ್ಪತಿಯೇ, ನನ್ನ ಅಂತರಂಗವನ್ನು ತಿಳಿಯದೆ ಹೀಗೆಹೇಳಬಹುದೇ? ಸಮರದ ಬಗ್ಗೆ ನನಗೆ ಬೇರೆ ಅಭಿಪ್ರಾಯವಿಲ್ಲ. ಸುಮ್ಮನೆ ಇರು. ತಾರಕನೊಡನೆ ಘರ್ಷಣೆ ಏಕೆ?' ಎಂದು ಹೇಳುತ್ತ ತನ್ನ ಅತಿ ಬಲಾಢ್ಯಶಕ್ತಿಗೆ ಹೆಮ್ಮೆ ಪಟ್ಟುಕೊಳ್ಳುತ್ತ ಮಾತು ಮುಂದುವರಿಸಿ ಹೇಳಿದ,

'ಹೇ ವಾಚಸ್ಪತಿ, ನೀನು ಹೇಳಿದ ಮಾತು ಸುಳ್ಳಲ್ಲ. ಮಹಾಸಂಗ್ರಾಮಗಳಲ್ಲಿ ನನಗೆ ಹಿತರೆಂದರೆ ಹರಿತವಾದ ಖಡ್ಗ ಮತ್ತು ಶಕ್ತಿಯುತ ನಿಡುದೋಳು.'

ತಾರಕನ ಅಂತರಂಗದನುಡಿ ಆಲಿಸಿದ ಬೃಹಸ್ಪತಿಯು ಸಾಮ ಮತ್ತು ಭೇದೋಪಾಯಗಳು ಫಲಿಸದಿರಲು, ದಾನೋಪಾಯವನ್ನು ಅನುಸರಿಸಿ,

'ಎಲೈ ತಾರಕನೇ, ಬ್ರಹ್ಮಾದಿಗಳು ಯುದ್ಧಕ್ಕೆ ಹಿಂಜರಿಯುವರೆಂದು ತಿಳಿಯಬೇಡ. ಯುದ್ಧದ ಪ್ರಸಕ್ತಿ ಬೇಡ. ನಿನ್ನ ಮನದ ಬಯಕೆ ಏನಾದರೂ ಇದ್ದರೆ ತಿಳಿಸು. ಕನಕಾದ್ರಿಗೆ ಒಡೆಯರಾದ ಅವರು ನೀನು ಬಯಸಿದುದನ್ನು ಕೊಡುವರು. ಸಮುದ್ರಗಳಿಂದ ಆವೃತವಾದ ಈ ಭೂಲೋಕದಲ್ಲಿ ನೀನು ಬಯಸಿದ ಭೂಪ್ರದೇಶವನ್ನು ಕೊಡುತ್ತಾರೆ' ಎಂದನು.

ಅದನ್ನು ಕೇಳಿ ತಾರಕಾಸುರನ ಕೋಪ ಪುಟಿದೆದ್ದು ಮುಖದಲ್ಲಿಮೂಡಿ, ಕಣ್ಣಿನಲ್ಲಿ ಹರಡಿತು. ಹುಬ್ಬುಗಂಟಿಕ್ಕಿ ಕೋಪೋದ್ವೇಗದಲ್ಲಿ ನಿಮಿರಿ ನಡುಗುತ್ತ ನುಡಿದನು :

'ಎಲೈ ಸುರೇಂದ್ರ ಮಂತ್ರಿಯೇ, ನನ್ನ ಜೊತೆ ಈ ಬೆಡಗಿನ ಮಾತೇಕೆ? ಭೂಲೋಕವೇ ನನ್ನ ಕೈಯಲ್ಲಿರುವಾಗ, ಅದನ್ನೇ ತಿರುಗಿ ಕೊಡುವೆವು ಎನ್ನುವುದು ಎಂಥ ವಿಚಿತ್ರ!' ಎಂದು ಉಗ್ರಪ್ರತಾಪಿಯಾದ ರಕ್ಕಸನು ಯುದ್ಧೋತ್ಸಾಹದಲ್ಲಿ ಮಾತನ್ನು ಮುಂದುವರಿಸಿ ಹೇಳಿದನು, 'ವೈರಿ ಮೇಘಗಳಿಗೆ ಮಹಾಬಲನಾದ ವಾಯು ನಾನಾಗಿರುವಾಗ – ಹರಗಿರಿ, ರವಿಗಿವಿ, ಶಿಖಿಗಿಖಿ, ಸುರಪತಿ ಗಿರಿಪತಿ ನನಗೆ ಸಮಾನರೇ?'

ತಾರಕಾಸುರನ ಶೌರ್ಯಪೂರ್ಣ ಅಹಂಭಾವದ ನುಡಿ ಕೇಳಿ ಸುರಗುರು,

'ಎಲೈ ತಾರಕ ನೀನು ಧೈರ್ಯವಂತ ದಿಟ. ಆದರೂ ದೇವತೆಗಳನ್ನು..' ಎಂದು ಮಾತಾಡುವಷ್ಟರಲ್ಲಿ ತಾರಕನು,

'ಹೇ ಅಮರಗುರುವೇ ಕೇಳು. ನೀನು ನಿನ್ನ ದೇವತೆಗಳು ಅಮರಾವತಿ ಬಿಟ್ಟು ರಜತಗಿರಿಯ ಗುಹೆಗಹ್ವರ ಸೇರಿಕೊಳ್ಳಿ, ನಾನು ಯುದ್ಧಕ್ಕೆ ಸಿದ್ಧ' ಎಂದು ತನ್ನ ರಣೋತ್ಸಾಹವನ್ನು ಮೆರೆದನು.

ಅವನ ನಿರ್ಣಯಾತ್ಮಕವಾದ ವೀರನುಡಿಗಳನ್ನು ಕೇಳಿ ಬೃಹಸ್ಪತಿಯು ಅಚ್ಚರಿಗೊಳಗಾದನು. ಖೇದಉಂಟಾಗಿ ಭಯ ಆವರಿಸಿದರೂ, ಧೈರ್ಯವನ್ನು ತಂದುಕೊಂಡು ಸಮಾಧಾನಕ್ಕೊಳಗಾದನು. ಸಾಮ ದಾನ ಭೇದಗಳನ್ನು ಉಲ್ಲಂಘಿಸಿರುವ ಕರ್ಕಶನಾದ ಈ ರಕ್ಕಸನಲ್ಲಿ ದಂಡೋಪಾಯ ಯಶಸ್ವಿಯಾಗದು ಎಂದು ಮನಸು ಅಳುಕಿತು. ಆದರೂ ಸಮಾಧಾನದಿಂದ ಸಾಮರ್ಥ್ಯವನ್ನು ಕಳೆದುಕೊಳ್ಳದರೀತಿ ತಾರಕನೊಡನೆ ಮಾತಾಡಿ ಬೀಳ್ಕೊಂಡನು.

ಸಂಗ್ರಾಮ ಕಾಲ ಭಯಂಕರ ತಾರಕನ ಸೈನ್ಯ

ಬೃಹಸ್ಪತಿಗಳು ಬರುವುದನ್ನೇ ವಿಷ್ಣು, ಬ್ರಹ್ಮ ದೇವೇಂದ್ರಾದಿಗಳು ಕಾಯುತ್ತಿದ್ದರು. ಬಂದ ಗುರುವಿನ ಕಣ್ಣುಸೊರಗಿದ್ದು, ಮುಖ ಬಾಡಿರುವುದನ್ನು ಕಂಡ ಅವರು ಸಂಧಾನ ಫಲಿಸಿಲ್ಲ ಎಂದುಕೊಂಡರು. ಗುರುವಿಗೆ ವಂದಿಸಿದರು. ಬೃಹಸ್ಪತಿಗಳು,

'ಎಲ್ಲ ರೀತಿಯಿಂದಲೂ ರಾಕ್ಷಸನಜೊತೆ ಮಾತಾಡಿದೆ. ಅವನಿಗೆ ಸಾಮ ದಾನಗಳು ಬೇಕಾಗಿಲ್ಲ. ಸಂಧಾನವನ್ನು ಒಪ್ಪುತ್ತಿಲ್ಲ. ಅವನು ನೀರಸಸ್ವಭಾವದ ಮಹಾದುಷ್ಟ. ಅವನಲ್ಲಿ ಅಪಾರ ಪದಾತಿಸೈನ್ಯವಿದೆ. ಅವನು ಅಪರಿಮಿತ ಅಶ್ವಸೈನ್ಯ, ಗಜಸೈನ್ಯ ಹೊಂದಿದ್ದಾನೆ. ನಮ್ಮ ಅಶ್ವಪತಿ, ಗಜಪತಿ ಮತ್ತು ನರಪತಿಗಳೆಲ್ಲರಿಗಿಂತ ಮಿಗಿಲಾಗಿದ್ದಾನೆ. ಯುದ್ಧದತ್ತಲೇ ಅವನ ಮನಸ್ಸಿದೆ. ಅವನೊಡನೆ ಕಾದುವುದೊಂದೇ ಉಳಿದಿರುವ ಮಾರ್ಗ' ಎಂದು ಮಾತು ಮುಗಿಸುವಷ್ಟರಲ್ಲಿ ಒಬ್ಬ ಗಂಧರ್ವ ನಾಯಕ ವೇಗವಾಗಿ ಬಂದು,

'ಓಹ್, ಏನು ಬುದ್ಧಿವಂತಿಕೆಯ ಮಾತಾಡುತ್ತ, ಮಂತ್ರಾಲೋಚನೆಯಲ್ಲಿರುವಿರಿ! ಏನು ಆಜ್ಞೆಮಾಡುವವರಿದ್ದೀರಿ! ತಾರಕಾಸುರನ ಸೈನ್ಯ ಈಗಾಗಲೇ ಬೀಡುಬಿಟ್ಟಿದೆ!' ಎಂದು ಹೇಳುತ್ತ ಆ ಅಗಾಧ ಅಪಾರ ಸೈನ್ಯದ ಬಗ್ಗೆ 'ಅದು ನೋಡಲು ಅದ್ಭುತವಾಗಿದೆ. ಅವನ ರಥ ಕುದುರೆ ಗಜ ಸಮೂಹಕ್ಕೆ, ಕಾಲಾಳುಪಡೆಗೆ ನೆಲ ಸಮುದ್ರ ಬೆಟ್ಟ ದಿಕ್ಕುಗಳು ಸಾಲದಾಗಿವೆ! ಸಂಗ್ರಾಮಕಾಲಭಯಂಕರ ತಾರಕನ ಸೈನ್ಯ ಎಲ್ಲೆಲ್ಲೂ ಹರಡಿದೆ!' ಎಂದನು. ಆ ಸುದ್ದಿ ಕೇಳಿ ಕೋಪಗೊಂಡ ವಿಷ್ಣುವು,

‘ಎಲೈ ಇಂದ್ರ, ಅಗ್ನಿ, ಯಮ, ನೈಋತ್ಯ, ವರುಣ, ವಾಯು, ಕುಬೇರ ಮತ್ತು ಈಶಾನ್ಯರೇ ನಿಮ್ಮ ನಿಮ್ಮ ವಾಹನಗಳನ್ನು ಏರಿ ಯುದ್ಧಕ್ಕೆ ನಡೆಯಿರಿ’ ಎಂದು ಹೇಳುತ್ತ ಮಂತ್ರಿ ಬೃಹಸ್ಪತಿಯ ಕಡೆ ತಿರುಗಿ ‘ಸುರ, ಕಿನ್ನರ, ಖೇಚರ, ಗಂಧರ್ವ, ಗರುಡ, ವಿದ್ಯಾಧರ, ರಾಕ್ಷಸ, ಯಕ್ಷರೆಲ್ಲರೂ ಒಂದೊಂದು ದಿಕ್ಕಿನಲ್ಲಿ ತಮ್ಮ ತಮ್ಮ ಸೈನ್ಯದೊಡನೆ ಮುನ್ನುಗ್ಗಲಿ’ ಎಂದು ಆಜ್ಞೆ ಮಾಡಿದನು.

ದೇವೇಂದ್ರನು ಸಮರೋತ್ಸಾಹ ಭೇರಿಯನ್ನು ಹೊಡೆಸಿದನು. ಅದರ ಧಳಂ ಧಳಂ ಧಳಂ ಎಂಬ ಘೋರ್ಗರೆತ ಮೂರು ಲೋಕವನ್ನು ವ್ಯಾಪಿಸಿತು. ನೆಲ ನಡುಗಿತು. ಕಡಲು ಉಕ್ಕಿತು, ದಿಕ್ಪತಿಗಳು ಬೆಚ್ಚಿದರು, ಪರ್ವತಗಳು ಬಿರುಕು ಬಿಟ್ಟವು, ತಾರೆಗಳು ಉದುರಿದುವು. ದೇವಲೋಕದ ಸೇನಾಮುಖ್ಯಸ್ಥರು ಡಕ್ಕೆಗಳಶಬ್ದಕ್ಕೆ ಸೈನ್ಯವನ್ನು ಹುರಿದುಂಬಿಸುತ್ತ ‘ಆನೆಗಳನ್ನು ಸಿದ್ಧಪಡಿಸಿ, ಕುದುರೆಗಳನ್ನು ರಥಕ್ಕೆ ಹೂಡಿ, ಪದಾತಿಗಳೇ ಆಯುಧ ಹಿಡಿದು ಸಾಗಿ’ ಎಂದು ಕೂಗಿ ಹೇಳುತ್ತಿದ್ದರು.

ಸುರ ಸೈನ್ಯವು ಸಂಭ್ರಮಗೊಂಡು ಘಡುಘುಡಿಸಿ ಮುನ್ನಡೆಯಿತು. ಅದರಲ್ಲಿ ವೈರಿಜಗತ್ತನ್ನು ಸೂರೆಮಾಡಿದ, ವೀರಘಂಟೆ ಧರಿಸಿದ, ಹಗಲು ಕೈದೀವಿಗೆಯುಳ್ಳ ಅಸುರರನ್ನು ಸಂಹರಿಸುವ, ಹಲವು ಬಿರುದುಗಳ ವೀರ ಸೈನಿಕರಿದ್ದರು. ಅವರು ಹಿಡಿದ ಆಯುಧಗಳ ತುದಿ ರವಿಕಿರಣಗಳನ್ನು ಮೀರಿಸಿ, ಸೂರ್ಯ ಬಿಂಬವನ್ನು ಪ್ರಕಾಶಿಸುತ್ತ, ಸಿಡಿಲ ಬಳಗವೇ ಚಿಗುರಿದಂತಿತ್ತು. ಅವರು ಗಂಡುಗತ್ತಿ, ಗಂಡುಗೊಡಲಿ, ಚಕ್ರ, ಕತ್ತಿ, ಕಠಾರಿ, ಗರಗಸ, ಗಂಡಕತ್ತರಿ, ಗದೆ ಮುಂತಾದ ಆಯುಧಗಳನ್ನು ಹಿಡಿದು ಗುಂಪಾಗಿ ಸಾಗುತ್ತಿದ್ದರೆ ನೆಲವು ಪ್ರಸವಿಸಿದಂತಿತ್ತು. ಕುದುರೆ, ಆನೆ, ರಥ, ಕಾಲಾಳುಗಳ ಚತುರಂಗಬಲ ತಾರಕನ ಸೇನೆಯನ್ನೆದುರಿಸಲು ಉತ್ಸಾಹದಿಂದ ಮುನ್ನುಗ್ಗಿತು.

ಅದರ ಎದುರು ತಾರಕಾಸುರನ ಚತುರಂಗಬಲವು ಹೆಬ್ಬುಲಿಯ ಹಿಂಡಿನಂತೆ, ನಂಜಿನಪುಂಜದಂತೆ, ಕಾಡುಗಿಚ್ಚಿನಪ್ರಳಯದಂತೆ, ಕಾಲಾಗ್ನಿಯ ಮಾಲೆಯಂತೆ, ಹಂತಕನಸಂತತಿಯಂತೆ, ಭೈರವನಬಳಗದಂತಿತ್ತು. ದಳದ ನಡುವೆ ನಿಂತಿದ್ದ ವೀರತಾರಕಾಸುರನು ತನ್ನ ಸೈನ್ಯಕ್ಕೆ ಎದುರಾದ ಸುರ ಸೈನ್ಯವನ್ನು ನೋಡಿ, ರಾಕ್ಷಸರ ಗುರುವಾದ ಶುಕ್ರಾಚಾರ್ಯರನ್ನು ಪ್ರಾರ್ಥಿಸಿದನು:

‘ಗುರುಗಳೇ, ನನಗೆ ಕಟ್ಟಿದಿರಾಗಿ ನಿಂತಿರುವವರು ಯಾರು ಯಾರೆಂದು ಪರಿಚಯ ಮಾಡಿಕೊಡಿ.’

‘ಎಲೈ ದನುಜೇಂದ್ರನೇ, ಸುರಗಂಧರ್ವ ಯಕ್ಷರ ಮಧ್ಯೆ ಬಿಳ್ಗೊಡೆಯಲ್ಲಿ ವಜ್ರಾಯುಧ ಹಿಡಿದು ಐರಾವತದ ಮೇಲೆ ಕುಳಿತಿರುವವನೇ ಇಂದ್ರ. ಅವನ ಪಕ್ಕದಲ್ಲಿ ಬಲಿಷ್ಠಟಗರನ್ನು ವಾಹನವಾಗಿರುವವನೇ ಅಗ್ನಿ, ಕಾಲದಂಡ ಹಿಡಿದು ಭೀಕರಮುಖ ಹೊಂದಿ ಕೋಣವೇರಿರುವವನೇ ಯಮಧರ್ಮ.’

‘ಗುರುವೇ, ದಿಕ್ಪಾಲಕರ ಪರಿಚಯವಾಗಲಿ.’

‘ಅಸುರಾಧಿಪನೇ, ನರವಾಹನವಾಗಿ ನಿಂತಿರುವವನು ನಿರ್ಋತಿ, ಮೊಸಳೆ ಏರಿ ವಿಶಾಲ ಪಾಶ ಹಿಡಿದಿರುವವನು ವರುಣ. ಕೆದರಿದ ಮುಂಗುರುಳುಗಳಿಂದ ಚಿಗುರೆಏರಿ ಈಟಿ ಹಿಡಿದಿರುವವನು ವಾಯುದೇವ. ಗರುಡ ಗಂಧರ್ವ ಯಕ್ಷರೊಡನೆ ಹೊಳೆಯುವ ಬಿಳಿಕೊಡೆ ಅಡಿಯಲ್ಲಿ ಕುದುರೆಏರಿ ಬರುತ್ತಿರುವವನೇ ಕುಬೇರ.’

'ಇವರೆಲ್ಲರ ಮಾರ್ಗದರ್ಶಿ ಸೂತ್ರಧಾರಿಗಳಾದ ವಿಷ್ಣು ಮತ್ತು ಬ್ರಹ್ಮರ ಗುರುತು ತಿಳಿಸಿ, ಗುರುಗಳೇ.'

'ದನುಜೇಶ್ವರನೇ, ವರ ಸುದರ್ಶನಚಕ್ರ ಶಾರ್ಙ್ಗವೆಂಬ ಧನುಸ್ಸು ಗದೆಯೊಡನೆ ಯುದ್ಧ ರಂಗಕ್ಕೆ ರಭಸದಲ್ಲಿ ಬರುತ್ತಿರುವವನೇ ಅಸುರಮರ್ದನ ವಿಷ್ಣು. ದೇವ ಗಂಧರ್ವಕುಲದ ನಡುವೆ ಎಲ್ಲ ವಿಲಾಸಗಳೊಡನೆ ಅತಿ ಸಂಭ್ರಮದಿಂದ ಬರುತ್ತಿರುವ ಹಂಸವಾಹನನೇ ಚತುರ್ಮುಖ ಬ್ರಹ್ಮ.'

ತಾರಕಾಸುರನು ವೈರಿವ್ಯೂಹ ಪರಿಚಯದಲ್ಲಿರುವಾಗ, ದೇವೇಂದ್ರನು ಸಮರಕ್ಕೆ ಸನ್ನದ್ಧವಾಗಿರುವ ತನ್ನ ಸೈನ್ಯಕ್ಕೆ ಯುದ್ಧಪ್ರಾರಂಭಿಸಲು ಸಂಜ್ಞೆ ಮಾಡಿದನು. ವೀರರು ಭೇರಿ, ತಮಟೆ, ಚಂಬಕಗಳನ್ನು ಬಾರಿಸಿದರು. ಕೊಂಬು, ಕಹಳೆ, ಡೌಡೆ, ಪಟಹ, ಡಕ್ಕೆ ತಿತ್ತಿರಿಗಾಳೆಗಳು ಮೊಳಗಿದುವು. ವೈರಿಗಳನ್ನೆದುರಿಸಲು ಪದಾತಿಬಲ ಮುನ್ನುಗ್ಗಿತು. ಯುದ್ಧ ಪ್ರವೃತ್ತವಾಯಿತು. ರಥ ಅಶ್ವ ಗಜ ಸೇನೆಯು ತನತನಗೆ ಇದಿರಾದ ರಕ್ಕಸ ಬಲವನ್ನು ಹೊಡೆದು ಕೆಡವಿತು.

ಸುರಸೇನೆಯ ಆಕ್ರಮಣ ಕಂಡ ತಾರಕಾಸುರನು ಕೋಪದಿಂದ ಆಸ್ಫೋಟಿಸುತ್ತ, ತೋಳುಗಳನ್ನು ಚಪ್ಪರಿಸುತ್ತ ಗದರಿ ಗರ್ಜಿಸಿದನು. ತನ್ನ ಪಡೆಗೆ ಕೈಬೀಸಿ ಹೊರಾಡಲು ಸೂಚಿಸಿದನು.

ಯುದ್ಧ ಸಂಘರ್ಷದಲ್ಲಿ ನೆಲದಿಂದ ಎದ್ದ ಧೂಳು ಗಗನವನ್ನು ವ್ಯಾಪಿಸಿತು. ಕುದುರೆಗಳ ಹೇಷಾರವ ದಿಗ್ಗಜಗಳನ್ನು ಎಚ್ಚರಿಸಿದರೆ, ಆನೆಗಳಘೀಳು ಬ್ರಹ್ಮಾಂಡವನ್ನು ತುಂಬಿತು. ಕಾಲಾಳು ಕಾಲಾಳುಗಳೊಡನೆ, ಅಶ್ವದಳ ಅಶ್ವದಳದೊಡನೆ, ಗಜಸೇನೆ ಗಜಸೇನೆಯೊಡನೆ, ರಥಸಾಹಸಿಗರು ರಥವೀರರೊಡನೆ ಯುದ್ಧ ಮಾಡಿದರು.

ಕಾಲಾಳುಗಳ ಹೋರಾಟದ ನೆಕ್ಕುನೆರಿಲ್, ನೆಳಿಲ್ ನೆಳಿಲ್, ದೊಪ್ಪ ಧಡಲ್, ಖಣಿಲ್ ಖಣಿಲ್, ತಟಿಲ್ ನಿಟಿಲ್ ಪಟಿಲ್ ಎಂಬ ನಿಷ್ಠುರ ಶಬ್ದಗಳು ಯುದ್ಧರಂಗದಲ್ಲಿ ಮಾರ್ದನಿಗೊಂಡವು. ರಾವುತರು ರೋಷ ಆವೇಶದಲ್ಲಿ ಕಡಿದ ತಲೆ ಕೆಳಕ್ಕೆಬೀಳುವಾಗ ಇತರರತಲೆ ತಾಗಿದವು! ತಲೆಕತ್ತರಿಸಲ್ಪಟ್ಟ ರುಂಡವು ಅದೇ ತರಹದ ರುಂಡದೊಡನೆ ಹೋರಾಡುತ್ತಿತ್ತು! ರಭಸದಿಂದ ತಾಗಿ ಪ್ರತಿಭಟಿಸುವ ಆನೆಗಳು ಒಂದಕ್ಕೊಂದು ಘರ್ಷಿಸಿದಾಗ ಅವುಗಳಲ್ಲಿ ದಂತಾದಂತಿ, ನಖಾನಖಿ ಯುದ್ಧವಾಯಿತು. ಅಂತಹ ಯುದ್ಧದಲ್ಲಿ ದಂತದಿಂದ ಕಿಡಿ ಹೊರಸೂಸುತ್ತಿದ್ದವು!.

ರಕ್ಕಸರನ್ನು ಎದುರಿಸಿ ಮುನ್ನುಗ್ಗುತ್ತಿರುವ ದೇವತೆಗಳ ಸಾಹಸ ಕಂಡು ತಾರಕಾಸುರನು ಅತಿ ಕೋಪಗೊಂಡನು. ಆನೆಯನ್ನೇರಿ ತನ್ನ ಅಕ್ಕಪಕ್ಕದ, ಹಿಂದು ಮುಂದಿನ ಚತುರಂಗ ಬಲವನ್ನು ಒಟ್ಟುಗೂಡಿಸಿಕೊಂಡು ಬಿಲ್ಲಿನ ಹೆದೆಯನ್ನು ಮಿಡಿದು ಯುದ್ಧಕ್ಕೆ ತೊಡಗಿದನು.

ವೀರತಾರಕನು ಭೋಂಕನೆ ಯುದ್ಧಕ್ಕೆ ಮುನ್ನುಗ್ಗಲು ಅವನನ್ನು ಎದುರಿಸುವವನು ಯಾರು? ಅವನೊಡನೆ ಮತ್ಸರದಿಂದ ಮುನ್ನುಗ್ಗುವವನು ಯಾರು? ಅವನನ್ನು ಸಹಿಸಿಕೊಂಡು ನಿಭಾಯಿಸುವವನು ಯಾರು? ಸಾಮರ್ಥ್ಯದಿಂದ ತಲೆ ತೋರಿಸುವವನು ಯಾರು? ಎಂದು ಅಂತರಿಕ್ಷದಿಂದ ಈಕ್ಷಿಸುತ್ತಿರುವ ಯಕ್ಷರು ಮಾತಾಡಿಕೊಂಡರು.

ಯುದ್ಧ ವಿಮುಖರಾದ ದೇವತೆಗಳು

ತಾರಕಾಸುರನ ಯುದ್ಧ ತೀವ್ರತೆಯೆಂದರೆ ಅದು ಕುಳಿಕನೆಂಬ ವಿಷಸರ್ಪನ ತೀಕ್ಷ್ಣತೆಯೋ, ಬಡಬಾಗ್ನಿಯ ತೀವ್ರತೆಯೋ, ಕಾಡ್ಗಿಚ್ಚಿನ ಪ್ರತಾಪವೋ, ಭೈರವನ ಭೀಕರತೆಯೋ, ಮೃತ್ಯುವಿನ ಉಗ್ರತೆಯೋ ಎಂಬಂತ್ತಿತ್ತು! ಅವನ ಮತ್ತು ಅವನ ಅತುಳ ಸೈನ್ಯದ ಪರಾಕ್ರಮಕ್ಕೆ ಸುರರಸೈನ್ಯ ಸೋತಿತು. ಅಶ್ವದಳ ಸಹಿಸಿಕೊಳ್ಳಲಾರದೆ, ಗಜಸೈನ್ಯ ಧೈರ್ಯಗೆಟ್ಟು ಬೆನ್ನು ತೋರಿಸಿ ಯುದ್ಧ ವಿಮುಖವಾಯಿತು.

ಅವರನ್ನು ಬೆನ್ನಟ್ಟಿದ ತಾರಕಾಸುರನು ಭಯಗ್ರಸ್ತರಾದವರನ್ನು ಹಿಂಬಾಲಿಸುವುದನ್ನು ಬಿಟ್ಟು, ಮನದ ಉಲ್ಲಾಸಕ್ಕಾಗಿ ಆನೆಗಳನ್ನು ಗರಗರನೆ ತಿರುಗಿಸಿ ಎಸೆದನು! ರಣರಂಗವನ್ನು ನೋಡುತ್ತ ಹಿಂದಿರುಗಿದನು.

* * *

ಸದಾ ಬಾಲ್ಯ ಕೌಮಾರ್ಯ ಯೌವನಗಳೆಂಬ ಮೂರು ಅವಸ್ಥೆಗಳನ್ನು ಮಾತ್ರ ಉಳ್ಳ ತ್ರಿದಶರು ಓಡಿ ಮೇರುಗಿರಿ, ರಜತಾದ್ರಿಗಳ ಮಹಾಗುಹೆ, ಗಹನ ಗಹ್ವರಗಳಲ್ಲಿ ಅಡಗಿದರು. ಅಂಜಿಸೊರಗಿ ಬಾಡಿಹೋದರು.

ಹಾಗೆ ಭಯಭೀತರಾಗಿ ಗಂಡುಡುಗಿದ ದೇವತೆಗಳೆಲ್ಲ ಜಾಣತನದಿಂದ ಮೆಲ್ಲಮೆಲ್ಲನೆ ಇಂದ್ರ ಬ್ರಹ್ಮ ವಿಷ್ಣುವಿದ್ದ ತಾಣಕ್ಕೆ ಬಂದರು. ಕಡುನೊಂದ ಅವರು ಆಲೋಚನೆಗೆ ತೊಡಗಿದರು. ಆಗ ಇಂದ್ರನು,

'ನಾನಿದ್ದೇನೆ. ಬ್ರಹ್ಮ ವಿಷ್ಣುಗಳಿದ್ದಾರೆ. ಅಂಜುವುದೇತಕ್ಕೆ?'

ಎನ್ನಲು ಅತುಳ ಉಪಾಯ ಕೋವಿದನೂ, ಸ್ಥಿತಿಕರ್ತನೂ, ಮುಂದೆ ಸಂಭವಿಸುವುದನ್ನು ತಿಳಿದವನೂ ಆದ ವಿಷ್ಣುವು,

'ಎಲೈ ಇಂದ್ರನೇ, ನಾವು ಮೂರೂಜನವಿದ್ದು ಅಖಿಲಭುವನವಿಧ್ವಂಸಕ ತಾರಕನ ಮುಂದೆ ಏನೂ ಮಾಡಲು ಸಾಧ್ಯವಾಗಲಿಲ್ಲ ಅಲ್ಲವೇ?'ಎಂದು ಆತ್ಮ ವಿಮರ್ಶೆ ಮಾಡಿಕೊಳ್ಳುತ್ತ ತಾರಕನ ಸಂಹಾರದ ಬಗ್ಗೆ ತನಗೆ ತಿಳಿದ ಸತ್ಯ ಹೊರಗೆಡಹಿದನು. 'ಐದು ಮುಖ, ಹತ್ತುಭುಜಗಳ ಈಶ್ವರನಿಗೆ ಷಣ್ಮುಖನು ಹುಟ್ಟಿದ ಏಳನೆಯ ದಿನಕ್ಕೆ ತಾರಕನನ್ನು ಸಂಹಾರ ಮಾಡುವನೆಂದು ಬ್ರಹ್ಮನ ವರವಿದೆ. ಇದನ್ನು ತಿಳಿದು ಕಪರ್ದಿಯ ತಪವನ್ನು ಭಂಗಪಡಿಸುವ ವೀರನ ಬಗ್ಗೆ ಇಂದೇ ಆಲೋಚಿಸಬೇಕಾಗಿದೆ. ಇದೇ ಉಚಿತ ಕಾರ್ಯ.'

ಅದಕ್ಕೆ ಎಲ್ಲ ತ್ರಿದಶರಾದ ದೇವತೆಗಳು ಒಂದಾಗಿ ಮಾತಾಡಿ ಸಕಲ ಜಗತ್ತಿನ ಜನರ ವಶೀಕರಣ ಪಟುವೂ, ಕುಸುಮಕೋದಂಡನೂ, ಮಕರಧ್ವಜನೂ ಆದ ಮನ್ಮಥನೇ ಆ ಕಾರ್ಯಕ್ಕೆ ಸಮರ್ಥನೆಂದು ನಿಶ್ಚಯಿಸಿದರು. ಅದಕ್ಕೆ ವಿಷ್ಣು ಒಪ್ಪಿ, ತಡಮಾಡದೆ ಕಾರ್ಯ ಪ್ರವೃತ್ತನಾಗುವಂತೆ ಇಂದ್ರನಿಗೆ ಕಣ್ಣಿನಲ್ಲಿಯೇ ಸೂಚಿಸಿದನು.

* * * * *

ಪುಟವಿಟ್ಟ ಪುಣ್ಯಂ ಪುರುಷಾಕಾರಮಾದಂತಿರ್ದ ಕಂದರ್ಪರಾಜ

ದೇವೇಂದ್ರನು ವಿಷ್ಣುವಿನ ಸೂಚನೆಯನ್ನು ಅರಿತು ಮಂತ್ರಿ ವಾಚಸ್ಪತಿಯನ್ನು ಕರೆದು, 'ಈಗಲೇ ಹೋಗಿ ಕಾಮನನ್ನು ಕಂಡು ಕರೆದುಕೊಂಡು ಬಾ' ಎಂದು ಹೇಳಿದನು.

ಇಂದ್ರನ ಮಾತಿನಂತೆ ಸಕಲಕಲಾಪ್ರವೀಣನೂ, ಸದ್ಗುಣಶಾಲಿಯೂ ಆದ ಗುರುಬೃಹಸ್ಪತಿಯು ಪುಷ್ಪಕವಿಮಾನವನ್ನು ಏರಿ ಮನ್ಮಥರಾಜ್ಯಕ್ಕೆ ಬಂದನು. ಚೆಲುವಿನ ತಾಣವಾದ ರತೀಶ್ವರನ ರಾಜಧಾನಿಯನ್ನು ಪ್ರವೇಶಿಸಿ, ಅರಮನೆಯಲ್ಲಿ ತುಂಬಿ ಓಡಾಡುತ್ತಿರುವ ಸುಂದರ ಲಲನೆಯರನ್ನು ಕಂಡನು.

ಪುಷ್ಪಚಾಪನ ಮೊಗ್ಗೆಯ ಅಂಬಿನಂತೆ ಶೋಭಿಸುತ್ತಿದ್ದ ಓರ್ವ ಸುಂದರಿ ಕಮಲದ ಕೊಡೆಯ ನೆರಳಿನಲ್ಲಿ ಮೆಲ್ಲಗೆ ಬಂದಳು. ಬೃಹಸ್ಪತಿಯ ಕಿವಿಗೆ ನೂಪುರದಧ್ವನಿ ಬೀಳುವಷ್ಟರಲ್ಲಿ ರಸಿಕಳೋರ್ವಳು ರತ್ನದರ್ಪಣದಂತೆ ಪ್ರಕಾಶಿಸುತ್ತ ಕಾಮನ ಸಭೆಗೆ ಬಂದಳು.

ಕುಸುಮಾಸ್ತ್ರನ ಗಂಧ ತೇಯುವವರಲ್ಲಿಯ ನವ ತರುಣಿಯೊಬ್ಬಳು ಬನದಿಂದ ತಾವರೆಎಲೆಯಲ್ಲಿ ಚಂದನರಸವನ್ನು ತುಂಬಿಕೊಂಡು ಮೆಲ್ಲಡಿಯಿಡುತ್ತಾ ಬಂದಳು. ಚಂದ್ರಬಿಂಬದಿಂದ ಇಳಿವ ತಣ್ಣನೆಯ ಕಿರಣವೋ ಎಂಬಂತೆ ಹೊಂಬಾಳೆಯ ಚಾಮರವನ್ನು ಹಿಡಿದು ಮತ್ತೊಬ್ಬ ಇಂದುಮುಖಿ ಬಂದಳು.

ಅತಿಶಯ ಸೌಂದರ್ಯದ ಸುಕೋಮಲ ಲಲನೆಯರನ್ನು ಕಂಡು; ಬೃಹಸ್ಪತಿಯು ಮನದಲ್ಲಿ ಅಳುಕಿ, ಬುದ್ಧಿಯಲ್ಲಿ ಬೆದರಿ, ಚಿತ್ತದಲ್ಲಿ ಕೌತುಕಪಡುತ್ತ ಕಾಮನ ಆಸ್ಥಾನವನ್ನು ಪ್ರವೇಶಿಸಿದನು.

ಮನ್ಮಥನ ಓಲಗ

ಮನ್ಮಥನ ಓಲಗವು ಪುಷ್ಪಮಾಲೆಗಳಿಂದ ಅಲಂಕೃತವಾಗಿ ಸುಗಂಧ ಹೀರುವ ದುಂಬಿಗಳಿಂದ ಕೂಡಿತ್ತು. ರತ್ನದೀಪ್ತಿಯಿಂದ ಪ್ರಕಾಶಿಸುವ ಸಿಂಹಾಸನದ ಮೇಲೆ ಶೃಂಗಾರ ಕಾಂತನೂ, ಜನಸ್ತುತ್ಯನೂಆದ ರತಿನಾಥನು ನಿಶ್ಚಿಂತನಾಗಿ ಆನಂದದಿಂದ ಕುಳಿತಿದ್ದನು.

ಮದನ ಭೂಭುಜನನ್ನು ದೂರದಿಂದ ನಿರೀಕ್ಷಿಸುತ್ತ ಬರುತ್ತಿರುವ ದೇವಗುರುವು ಗಮಗಮಿಸುವ ಕದಂಬ ಕುಸುಮದ ಕಂಪನ್ನು ಆಸ್ವಾದಿಸಿದನು. ರವಿಕಿರಣಗಳು ಕೆಳಗೆ ಬೀಳದಂತೆ ಸುತ್ತಿಮುತ್ತಿ ಕವಲೊಡೆದುಹಬ್ಬಿ ಕವಿದ ಹೂಬಳ್ಳಿಗಳ ಬಲೆಯಿಂದಾದ ನೆಳಲಿನಿಂದ ಓಲಗಸಾಲೆ ಕತ್ತಲಿಸಿತ್ತು. ಅಲ್ಲಿ ಬಂದುಗೆ (ಬಂದೂಕ) ಹೂಗಳ ಬಣ್ಣದ ನಿಬಿಡಬೆಳಕು ಮತ್ತು ತಮ್ಮ ಕಣ್ಣ ಹೊಳಪು ಇಮ್ಮಡಿಯಾಗಿ ಮೈದೋರಿದಂತೆ – ಕೈದೀವಿಗೆ ಹಿಡಿದಿದ್ದ ಖೇಚರಿಯರಿದ್ದರು.

ಕಾಮನಪತ್ನಿ ರತಿದೇವಿಯ ಮೊಗ್ಗಿನ ಸಿಂಹಾಸನದ ಎರಡೂ ಕಡೆ ಮರುಗ, ಹೊಂಬಾಳೆಯ ಚಾಮರ ಹಿಡಿದ ಹಸ್ತಿನಿಯರಿದ್ದರು. ಅಲ್ಲಿ ನೆರೆದಿರುವ ಗಿಳಿಗಳಿಗೆ ಕಾಮಾದ್ವೈತ ಶಾಸ್ತ್ರ ಪಾಠ ಮಾಡುವ ಚಿತ್ತಿನಿಯರಿದ್ದರು. ತಮ್ಮ ಮೇಲೆ ಬೀಳುವ ಕಾಮದೇವನ ಕುಡಿನೋಟಕ್ಕೆ ಭಯಪಟ್ಟು, ರತಿದೇವಿಯ ಕಾಲಿಗೆ ಎರಗಿ ಕೈಮುಗಿದು ಪಕ್ಕಕ್ಕೆ

ಸರಿದ ಶಂಖಿನಿಯರಿದ್ದರು. ಕಮಲಗಳಲ್ಲಿ ಅಮೃತ ರಸತುಂಬಿ ಸಂತೋಷದಿಂದ ಹಿಡಿದು ನಿಂತ ಪದ್ಮಿನಿ ನಾಯಕಿಯರಿದ್ದರು.

ಹಂಸಗಳಗುಂಪಿಗೆ ನಡೆಕಲಿಸುವ ಗಜಗಮನೆಯರು, ನವಿಲನ್ನು ಆಡಿಸುವ ನರ್ತಕಿಯರು, ದುಂಬಿಗಳಹಿಂಡಿಗೆ ಮಾರಭೂಪನ ಬಿರುದಿನ ಏಳ್ಗೆಗಳ ಗೀತ ಗೋಷ್ಠಿಗಳನ್ನು ನಡೆಸುವ ನೂತನಗಾಯಕಿಯರು ಆ ಓಲಗದಲ್ಲಿ ಮೇಳೈಸಿದ್ದರು.

ಚಕ್ರವಾಕಗಳ ಮಿಥುನದ ಸುರತಶ್ರಮವನ್ನು ಆದರದಿಂದ ಆರಿಸುವ ಚಕ್ರ ಕುಚೆಯರು; ಹೆಣ್ಣುಹರಿಣಗಳ ಹುಸಿಮುನಿಸನ್ನು ತಿಳಿಸಿ ಹರಿಣಗಳನ್ನು ಒಂದುಗೂಡಿಸುವ ಬೆಡಗಿ ಹರಿಣಾಕ್ಷಿಯರು ಅಲ್ಲಿದ್ದರು.

ಅಶೋಕವನ್ನು ಒದೆದು ಚಿಗುರಿಸುವ ಪದ್ಮಮುಖಿಯರು; ಗೋರಂಟಿಯನ್ನು ಆಲಂಗಿಸಿಕೊಂಡು ಪಲ್ಲವಿಸುವಂತೆ ಮಾಡುವ ತರುಣಿಯರು; ಪುಷ್ಪರಸವನ್ನು ಮುಕ್ಕುಳಿಸುವುದರಿಂದ ಬಕುಳ ವೃಕ್ಷವು ಮೊಗ್ಗುಬಿಡುವಂತೆ ಮಾಡುವ ಲಕ್ಷಣವತಿಯರು ಅಲ್ಲಿ ಬೀಡುಬಿಟ್ಟಿದ್ದರು.

ಮೀನಕೇತನನಾದ ಮನ್ಮಥನ ಕೇತಕಿಬಾಣವನ್ನು ಪರಾಗದ ಸಾರಣೆಯಿಂದ ಪರಿಮಳಗೊಳಿಸುವ, ದುಂಬಿಯಂತೆ ಕಪ್ಪಾದ ಕೂದಲ ಸುಂದರಿಯರು; ಮೊಗ್ಗಿನ ಕಠಾರಿಯನ್ನು ಸಿಂಗರಿಸಲು ಜೊತೆಗೂಡಿದ ಮುಗ್ಧೆಯರೂ; ತಳಿರು ಎಂಬ ತೋಮರವನ್ನು ತಿದ್ದುವ ಇಂಪಾದ ಧ್ವನಿಯುಳ್ಳ ಕಳಕಂಠ ನಿನಾದೆಯರು ಅಲ್ಲಿ ನೆರೆದಿದ್ದರು. ನೈದಿಲೆಯೆಂಬ ಬರ್ಜಿ (ಸಬಳ)ಯನ್ನು ಒಪ್ಪವಾಗಿಸುವ ಕುಮುದಾಕ್ಷಿಯರು; ಚಕೋರಿಗಳಿಗೆ ಬೆಳದಿಂಗಳನ್ನು ಉಣಿಸುವ ರೋಹಿಣಿ ವಿಲಾಸಿನಿಯರು; ಕುಬೇರನ ರೂಪವನ್ನು ತಮ್ಮ ನೂಪುರದಲ್ಲಿ ಎಳೆಯುವ ಲೀಲಾವಿನೋದದ ಚಪಲೆಯರು; ಜಿತೇಂದ್ರಿಯರನ್ನು ಗೆಲ್ಲುವ ವಿಜಯಧ್ವಜ ವೀರೆಯರು ಮನ್ಮಥನ ಆಸ್ಥಾನದಲ್ಲಿ ವಿಜೃಂಭಿಸಿದ್ದರು.

ಪಕ್ಕದಲ್ಲಿ ನಿಲ್ಲಿಸಿದ ಕಬ್ಬಿನಬಿಲ್ಲು, ಮಲಗಿಸಿದ ಪುಷ್ಪ ಬಾಣ, ಸಮಸ್ತ ವಸ್ತು ವಿಲಾಸದಿಂದ ರತಿರಾಜನಿದ್ದನು. ಅವನು ಕಮಲದ ದಂಟಿನ ಎಳೆಗಳಿಂದ ಮಾಡಿದ ವಸ್ತ್ರದ ಮಲ್ಲಗಂಟು ತೊಟ್ಟಿದ್ದನು. ಮಲ್ಲಿಗೆಮೊಗ್ಗಿನ ಕಂಕಣ, ಮಲ್ಲಿಗೆ ಹೂವಿನ ಹಾರ, ಬಂದುಗೆಹೂವಿನ ಬಾಹುಪೂರ, ದಾಳಿಂಬೆಯ ಕರ್ಣಾಭರಣ ಧರಿಸಿ, ಶ್ರೀಗಂಧದ ತಿಲಕವನ್ನಿಟ್ಟುಕೊಂಡಿದ್ದನು. ಶ್ಯಾಮಲವರ್ಣದ ಕೋಮಲಾಂಗನ ಕಣ್ಣಬೆಳಕು ಹಾಗೂ ಮುಖಕಾಂತಿ ಸೌಂದರ್ಯವನ್ನು ಮುಮ್ಮಡಿಯಾಗಿಸಿತ್ತು. ಅದು ಮೂರು ಲೋಕಗಳನ್ನು ಗೆಲ್ಲಲು ಶೃಂಗಾರ ರಸವೇ ದೇಹಧರಿಸಿದಂತೆ, ಸೌಕುಮಾರತೆಯೇ ಆಕಾರಗೊಂಡಂತೆ, ಸೊಬಗು ಸಂದಣಿಸಿದಂತೆ, ಕೋಮಲತೆ ಬೆಳೆದಂತೆ ಇತ್ತು.

ಕಣ್ಣುಗಳ ಭಾಗವು ಕವಲೊಡೆದು, ಮನೋರಥವು ಮದವೇರಿ, ಪುಟವಿಟ್ಟ ಪುಣ್ಯವು ಪುರುಷಾಕಾರವಾದಂತಿದ್ದ ಕಂದರ್ಪರಾಜನ ಕಮನೀಯ ರೂಪವು ಬೃಹಸ್ಪತಿಯ ಕಣ್ಣ ಒಳಹೊಕ್ಕಿತು. ಅದು ಅವನನ್ನು ಅಲ್ಲಾಡಿಸಿ, ಬುದ್ಧಿಯನ್ನು ಬೆದರಿಸಿತು! ಅವನ ಚಿತ್ತವು ಹೊಯ್ದಾಡಿ ಮದನಾಕಾರದ ಜೊಂಪು ಕಚಗುಳಿಯಿಡಲು ಮೈ ಮರೆತನು!.

ಕಾಮವಿಕಾರ ಹೆಡೆಯಾಡಲು ತನ್ನನ್ನೂ ಎದಿರನ್ನೂ ಅರಿಯದೆ, ತಾನು ಬಂದ ಕಾರ್ಯವನ್ನು ಮರೆತನು. ಸುಖದಸೊಕ್ಕಿಂದ ಉಕ್ಕುವ ಕಾಮರಸದ ತೆರೆಯಲ್ಲಿ ಓಲಾಡುತ್ತಿದ್ದರೂ ಬೇಗ ಎಚ್ಚೆತ್ತನು. ತನ್ನನ್ನು ಸಂತೈಸಿಕೊಂಡನು. ಸುರೇಂದ್ರ ಮಂತ್ರಿ ಕುಗ್ಗಿದ

ಮನದವನಾದನು. ಮೆಲ್ಲನೆ ನಡೆಯುತ್ತ ಬಾಗಿ ಪಂಚಶರನಿಗೆ ಹೊಸ ಹೂಗೊಂಚಲನ್ನು ಕಾಣಿಕೆಯಾಗಿ ನೀಡಿ ಕುಳಿತುಕೊಂಡನು. ಅದನ್ನು ಸ್ವೀಕರಿಸಿದ ಮನ್ಮಥನು,

'ದೇವ ಗುರುಗಳೇ, ಇಂದ್ರ ಬ್ರಹ್ಮ ವಿಷ್ಣು ಸುಖವಾಗಿರುವರೇ? ತಾರಕಾಸುರನೊಡನೆ ನಡೆದ ಯುದ್ಧವೇನಾಯಿತು?'

'ಸುಖವು ಹೇಗೆ ಸಾಧ್ಯ?'

'ಅಂದರೆ, ತಾರಕಾಸುರನೊಡನೆ ನಡೆದ ಕಾಳಗ?'

'ಅದು ಇನ್ನೂ ಮುಗಿದಿಲ್ಲ. ಇಂದ್ರ ಬ್ರಹ್ಮ ವಿಷ್ಣು ಮೇರು ಪರ್ವತದ ತಪ್ಪಲಲ್ಲಿ ಏಕಾಂತದಲ್ಲಿ ಮಂತ್ರಾಲೋಚನೆಯಲ್ಲಿ ತೊಡಗಿದ್ದಾರೆ.'

'ನೀವು ಬಂದ ಕಾರ್ಯ?'

'ಗುಪ್ತಕಾರ್ಯಗಳಲ್ಲಿ ಸೂಕ್ಷ್ಮ ಆಲೋಚನೆಗಳಿರುವುದರಿಂದ, ತಕ್ಷಣ ನನ್ನನ್ನು ಕಳುಹಿಸಿದರು. ಅಪ್ರತಿಮರಾದ ತಮ್ಮನ್ನು ಕರೆದುಕೊಂಡು ಬರಲು ಆಜ್ಞೆ ಮಾಡಿದರು.'

ಬೃಹಸ್ಪತಿಗಳ ಮಾತು ಕಿವಿಗೆ ಬೀಳುತ್ತಲೆ ಮನ್ಮಥನು ಸುಖಾಸೀನದಿಂದೆದ್ದನು. ಚಂದ್ರ ವಸಂತಾದಿಗಳನ್ನು ವನದಲ್ಲಿ ನಿಲ್ಲಿಸಿದನು. ಆ ತಕ್ಷಣ ರತಿಯೊಡನೆ ಪುಷ್ಪಕ ವಿಮಾನವೇರಿದನು. ಇಂದ್ರನ ಮಂತ್ರಿಯೊಡನೆ ನಾನಾವಿಧವಾದ ಕಾರ್ಯಗತಿಯನ್ನು ಕುರಿತು ಮಾತಾಡಿದನು. ಅವರೆಲ್ಲರೂ ವಿಷ್ಣು ಇಂದ್ರ ಬ್ರಹ್ಮರ ಆಸ್ಥಾನನಿಕೇತನದ ಮುಂದೆ ಬಂದು ಇಳಿದರು.

ಶಿವನ ತಪಸ್ಸು ಕೆಡಿಸು!

ರತಿ ಮನ್ಮಥ ದೇವಗುರುಗಳು ಒಂದಾಗಿ ಆಸ್ಥಾನವನ್ನು ಪ್ರವೇಶಿಸಿದರು. ಹರಿ ಬ್ರಹ್ಮ ಇಂದ್ರರಿಗೆ ವಂದಿಸಿ ಕುಳಿತುಕೊಂಡರು. ಕಾಮನ ಮುಖವನ್ನು ನೋಡುತ್ತ ವಿಷ್ಣುವು,

'ಎಲೈ ದರ್ಪಕನೇ, ತಾರಕನಿಂದ ಮೂರು ಲೋಕವೂ ತಲ್ಲಣಗೊಂಡಿದೆ. ಅವನು ಅತ್ಯಧಿಕ ಬಲಶಾಲಿ.'

'ತಂದೆಯೇ, ಎಂತಹ ಬಲಶಾಲಿಗೂ ಸಾವು ನಿಶ್ಚಿತವಲ್ಲವೇ?'

'ಶಿವನಿಗೆ ಹುಟ್ಟಿದ ಕುಮಾರನಿಂದಲ್ಲದೆ ಅವನಿಗೆ ಬೇರೆ ಮರಣವಿಲ್ಲ.'

'ತಮ್ಮ ಆಲೋಚನೆ?'

'ಎಲೈ ಮನ್ಮಥ ಹರನು ಅತ್ಯಧಿಕ ತಪದಲ್ಲಿದ್ದಾನೆ. ಅವನ ತಪಸ್ಸು ಕುಗ್ಗುವಂತೆ ಮಾಡಿ, ಮನಸ್ಸು ವರಗಿರಿಸುತೆಯಲ್ಲಿ ನೆಲೆಸುವಂತಾಗಿಸುವ ಸಮರ್ಥ ನೀನಾಗಿರುವೆ.'

'ಶಿವನ ಮಹಾತಪ ಸುಡುವ ಕೆಂಡ!'

'ಶಿವನ ಜಪಾಕ್ಷರಗಳಿಗೆ ನಿನ್ನ ಕುಸುಮಾಸ್ತ್ರಗಳು ನಾಟುವಂತೆ ಮಾಡಿ ತಪಸ್ಸನ್ನು ಕೆಡಿಸು. ಗಿರಿಜಾ ವಧುವಿನೊಡನೆ ಶಶಿಧರನು ಸುಖದಿಂದಿರುವಂತೆ ಮಾಡು.'

'ಜನಕನೇ, ಒಳ್ಳೆಯ ಮಾತಾಡಿದಿರಿ! ಸರ್ವೇಶ್ವರ, ಅಪಾರ ಗುಣನಿಧಿ ಶರ್ವನಿಗೆ ಪುಷ್ಪಾಸ್ತ್ರದ ಗುರಿಯಿಡುವಂತೆ ಹೇಳುವುದೇ?'ಎಂದು ತನ್ನ ಮನದ ಅಳುಕನ್ನು ವ್ಯಕ್ತಪಡಿಸುತ್ತ 'ಶ್ರುತಿಗಳು ಕಾಣದ, ಮನುಗಳು ಮುನಿಗಳು ಅರಿಯದ, ಶಾಸ್ತ್ರಗಳು ತಿಳಿಯದ ಅಪ್ರತಿಹತ ಶಿವನನ್ನು ಕಾಣುವುದು ಹೇಗೆ? ಗುರಿಯಿಡುವುದು ಹೇಗೆ?'

'ನನ್ನ ಕುವರನಾದ ನಿನಗೆ ಅದು ಸಾಧ್ಯ.'

'ಎಲೈ ತಂದೆಯೇ, ನನ್ನ ಮನಸ್ಸನ್ನು ಪ್ರೇರೇಪಿಸುವವನು ಶಿವ. ಅವನು ಅಖಿಲಲೋಕ

ಗುರು. ಅವನಿಗೆ ಗುರಿಯಿಡುವ ಅಸಮಾಸ್ತ್ರರು ಈ ಜಗತ್ತಿನಲ್ಲಿರುವರೇ?

'ನನ್ನ ತಂದೆಯಾದ ನೀನು – ಹೆರರ ಮಕ್ಕಳನ್ನು ಬಾವಿಗೆ ತಳ್ಳಿ ಆಳ ನೋಡಿದಂತೆ – ವರ್ತಿಸಬಹುದೇ? ಸೂರ್ಯನಲ್ಲಿಗೆ ಕತ್ತಲೆಯನ್ನು, ಸಿಂಹದ ಹತ್ತಿರಕ್ಕೆ ಆನೆಯನ್ನು, ನವಿಲಿನ ಹತ್ತಿರಕ್ಕೆ ಸರ್ಪವನ್ನು ಕಳುಹಿಸಿದಂತೆ ನೀನು ನನ್ನನ್ನು ಹರನಲ್ಲಿಗೆ ಕಳುಹಿಸಬಹುದೇ?'

'ಮಗ ಕಂದರ್ಪನೇ, ಬಹಳ ಚತುರನುಡಿಗಳಿಂದ ಏನು ಸಾಧ್ಯ? ಸಕಲ ಜಗತ್ತು ಸುಖದಿಂದಿರುವುದಾದರೆ ತನ್ನಪ್ರಾಣದ ಒಳಿತನ್ನು ಅರಸುವರೇ?'

'ಇಡೀ ಜಗತ್ತು ಸುಖದಿಂದಿರುವುದಾದರೆ, ನನ್ನ ಪ್ರಾಣ ಯಾವ ಘನ? ನನಗೆ ಈಗಲೇ ನೂರು ವರ್ಷವಾಯಿತೆಂದು ತಿಳಿಯಿರಿ!' ಎಂದು ಮನ್ಮಥನು ಜಯದ ಭಾವದಲ್ಲಿ ನುಡಿಯುತ್ತ ಒಪ್ಪಿಕೊಂಡನು.

ಅವರಿಂದ ಬೀಳ್ಕೊಂಡು ಹೊರಗಡೆ ಇಟ್ಟಿದ್ದ ಸಿಂಹಾಸನಒಂದಕ್ಕೆ ಒರಗಿಕೊಂಡು ಪುಷ್ಪ ಬಾಣನು ತನ್ನಲ್ಲಿ ತಾನು – ಈ ಪೃಥ್ವಿಯಲ್ಲಿರುವ ಮುಖ್ಯ ಮುನಿಗಳು, ಮನುಗಳು, ಜಿತೇಂದ್ರಿಯರು ನನ್ನ ಧನುಸ್ಸಿನ ಠೇಂಕಾರ ಮಾತ್ರದಿಂದ ಸಂಕೋಚಗೊಂಡು ಸುರುಳುರುಳಿ ರತಾಸಕ್ತರಾಗುತ್ತಾರೆ. ಹಾಗಿರುವಾಗ ಈ ಶೂಲಿಯ ತಪ ತಡೆಯಾಗುವುದೇ ನನಗೆ! – ಎಂದುಕೊಂಡನು.

ಮಧುಮತಿಯೆಂಬ ದೂತಿಯನ್ನು ಕರೆದು ವಸಂತನೇ ಮೊದಲಾದ ಚತುರಂಗಬಲವನ್ನು ಬರಹೇಳಿದನು. ಆಗ ವಸಂತಋತುವಿನ ಪ್ರಾರಂಭವೇ ಆಗಿತ್ತು.

ವಸಂತ ಬಂದ

ಹೊಳೆಯುವ ಮಾಧವಿ ಪುಷ್ಪಗಳು ಹೊಮ್ಮಿಬಂದುದೇ ವಸಂತಾಗಮನವನ್ನು ಸೂಚಿಸಿತ್ತು. ಕೋಗಿಲೆಯ ಧ್ವನಿ, ಮಾವಿನ ಚಿಗುರು, ತೀಡುವ ತಂಗಾಳಿಯು ಮಾರನ ಅತಿಶಯ ಬಾಣಗಳಂತಿರಲು; ಮಾರನೇ ಬೆರಗಾಗಿ ಇದಾವ ಕಾಲ ಎಂದು ಚಿಂತಿತನಾದ!

ಮಾಧವಿಕಂಪು, ಕೋಗಿಲೆಇಂಪು, ಮಾವಿನಸೊಂಪಿಗೆ ಮನ್ಮಥನು ಬಿಲ್ಲನ್ನು ಹೆದಗೇರಿಸಿ ಅಮೋಘ ಅಸ್ತ್ರಗಳನ್ನು ಹೂಡಿದನು. ವಸಂತಮಾಸದಲ್ಲಿ ವಿರಹಿಗಳ ಹೃದಯ ಝಲ್ಲೆಂದಿತು. ಕಾಮನ ಬಾಣದಗುರಿ ತಾಗಿ ನಂದನವನದಲ್ಲಿ ಕೆಂಪು, ಹಸಿರು, ಕಪ್ಪು, ಬಿಳುಪಿನ ವರ್ಣವೈಭವ ಮೂಡಿತು. ಜನರಲ್ಲಿ ಅನುರಾಗ ಅಂಕುರಿಸಿ ಲಲನೆಯರನ್ನು ಬಿಗಿದಪ್ಪಿದರು. ಮುನಿಗಳು ತಪ ತೊರೆದು ವಧುಗಳ ಆಲಿಂಗನದಲ್ಲಿದ್ದರು. ಹರಿಣಗಳು ಹೆಣ್ಣುಜಿಂಕೆಗಳ ಬೆನ್ನತ್ತಿದವು. ಇಳೆಯಲ್ಲಿ ವಸಂತನವೈಭವ ಹಬ್ಬಿ ಹರಡಿತು.

ಜಗದ್ವಲ್ಲಭನಾದ ವಸಂತರಾಜನ ಆಗಮನಕ್ಕೆ ವಿಯೋಗಿಗಳು ನಡುಗಿ ಜೀವವನ್ನು ಒಪ್ಪಿಸಿದರು. ವಸಂತವೈಭವದಲ್ಲಿ ನಡೆಯುವ ದಾರಿಗರು ಹಾವು ಮೇಲೆ ಬಿದ್ದಂತೆ ಹೆದರಿ, ಅಡಿಯಿಡಲಾರದೆ ಕಳೆಗುಂದಿದರು. ನಲ್ಲರಮೈಸಿರಿ ನವ್ಯಭೋಗದಲ್ಲಿ ತೊಡಗಿತು.

ಹೀಗೆ ವಸುಮತಿಯ ಪೆಂಪಿನಸಂಪದವನ್ನು ಸೊಂಪೇರಿಸುತ್ತ, ನವವನಗಳಿಗೆ ಕಾಂತಿಯನ್ನು ನೀಡುತ್ತ, ಕೋಗಿಲೆಯ ಕೊರಲಿಗೆ ಕಳೆಯೇರಿಸುತ್ತ, ಅಶೋಕೆಯನ್ನು ಪಲ್ಲವಿಸಿ, ಕಾಂತೆಯರ ಕಣ್ಣಪುಣ್ಯ ಟಿಸಿಲೊಡೆಯುವಂತೆ ವಸಂತ ಬಂದನು.

ಬಳ್ಳಿಗಳಲ್ಲಿ ಕುಸುಮಕುಲವನ್ನು ಹರಡಿ, ದುಂಬಿಗಳ ಮನೋರಥವನ್ನು ಪಡೆಯುತ್ತ, ತರುಗಳಿಗೆ ನವೀನಫಲನೀಡಿ, ಗಿಳಿಗಳ ನಾಲಗೆಯರುಚಿ ಅರಳಿಸುತ್ತ ಋತುಗಳ ರಾಜ ವಸಂತ ನಲಿದನು.

ಹೂ ಕೊಳವನ್ನು ತಿಳಿಯಾಗಿಸಿ, ನೀರ್ವಕ್ಕಿಗಳ ಸಂತತಿ ಹೆಚ್ಚಿಸಿ ರವಿಕಿರಣಗಳಿಗೆ ಪುಟವಿಟ್ಟು, ಚಕ್ರವಾಕಗಳನ್ನು ಸಂತೋಷಪಡಿಸುತ್ತ; ಕಮಲಗಳನ್ನು ಅರಳಿಸಿ, ಕಲಹಂಸಗಳನ್ನು ತಣಿಸುತ್ತ; ನದಿಯ ನೀರನ್ನು ನಿರ್ಮಲಗೊಳಿಸಿ, ಮೃಗಪಕ್ಷಿ ಸಂಕುಲವನ್ನು ತೃಪ್ತಿಪಡಿಸುತ್ತ ವಸಂತ ಉಲ್ಲಾಸಗೊಂಡನು.

ಚಂದ್ರಕಳೆಯನ್ನು ದಟ್ಟೈಸಿ ಚಕೋರಪಕ್ಷಿಗಳಿಗೆ ಸುಖವನ್ನುಂಟು ಮಾಡಿ, ಇಳೆಯಲ್ಲಿ ಬೆಳದಿಂಗಳನ್ನು ಹರಡಿ, ವಿರಹಿಗಳನ್ನು ನಿರಾಶೆಗೊಳಿಸಿ, ಕಾಮನ ಬಾಣಕ್ಕೆ ಕಂಪುನೀಡಿ, ಕಾಮಿಗಳ ಮೈಯನ್ನು ಎರಡಾಗಿಸುತ್ತ, ಮಲಯಾನಿಲನಿಗೆ ತಂಪು ಕಂಪುಗಳನ್ನಿತ್ತು – ನಲ್ಲ ನಲ್ಲೆಯರ ಸುಖಮಿಥುನ ಸುರತ ಶ್ರಾಂತಿಯನ್ನು ಆರಿಸುತ್ತ ವಸಂತ ಮುದ ತಂದನು.

ವಸಂತರಾಜನು ಸಕಲ ಭುವನವನ್ನು ಮೋಹದಿಂದ ಕುರುಡಾಗಿಸಿ, ಸತಿಯರಲ್ಲಿ ಸದಾಬೆರೆತು ಅನುರಾಗಪೂರಿತ ಸಂಭ್ರಮದಿಂದ ಬಂದನು. ಆ ಅನುರಾಗ ಮನ್ಮಥನಲ್ಲಿ ಪಲ್ಲವಿಸಿ ರತಿಯನ್ನು ಆಲಂಗಿಸುವ ಮನಸ್ಸಾಯಿತು!

ಅದನ್ನು ಕಂಡ ವಸಂತನು ಸಂತೋಷದಿಂದ ಬಂದು ಎಳಗಂಪನ್ನು ಪಸರಿಸುವ ಚಿಗುರು, ಸುವಾಸನೆಯನ್ನು ಹೆಚ್ಚಿಸುವ ಹೂಗೊಂಚಲುಗಳನ್ನು; ಮಧುರಸವನ್ನು ಕುಲುಕಾಡಿಸುವ ನವ್ಯಫಲಗಳನ್ನು ಮೀನಕೇತನನಿಗೆ ಕಾಣಿಕೆಯಾಗಿ ನೀಡಿದನು. ಸಾಷ್ಟಾಂಗವಂದಿಸಿ ಕೈಮುಗಿದು ನಿಂತು,

'ಎಲೈ ಮನ್ಮಥಭೂಪನೇ, ಚತುರಂಗಬಲ ಬಂದಿದೆ ನೋಡು.' ಎಂದು ಹೇಳಿ ತನ್ನ ಸೇನೆಯನ್ನು ತೋರಿಸಿದನು.

ವಸಂತನ ಚತುರಂಗಬಲ

ಮೋಹ ಜನಕವಾದ ನಿರ್ಮಲ ಸೇನೆಯಲ್ಲಿ ಬಳ್ಳಿಗಳು ಹಗ್ಗ, ಪತ್ರವೇ ಆನೆಯ ಪಕ್ಕ ರಕ್ಷೆಯಾದ ಗುಳ, ಹಣ್ಣುಗಳರಸವೇ ಮದೋದಕ, ನೀಳವಾದ ಕೊಂಬುಗಳೇ ಸೊಂಡಿಲು, ಹೂಬಿಟ್ಟ ಎಳೆಯಕೊಂಬುಗಳೇ ದಂತ, ಕೋಗಿಲೆಯ ಇಂಪಾದ ಶಬ್ದವೇ ಆನೆಯ ಘೀಳು ಆಗಿತ್ತು.

ಸಹಕಾರವೆಂಬ ಹೆಸರಿನ ಮಾವಿನ ಮರಗಳೇ ಗಜಸೈನ್ಯವಾಗಿ ಅದರ ಎತ್ತರದಲ್ಲಿರುವ ಎಲೆಗಳೇ ಬಾವುಟಗಳು, ದುಂಬಿಗಳ ಝೇಂಕಾರವೇ ಡಿಂಡಿಮ ಸ್ವನವಾಗಿತ್ತು.

ಗಿಳಿಗಳೇ ಅಶ್ವಸೇನೆ. ಅವುಗಳ ಕೊಕ್ಕಿನ ಕೆಂಪೇ ಕುದುರೆಯ ಮುಖವಾಡ. ಅನುಪಮ ಕಾಂತಿಯೇ ಲಗಾಮು. ಪಾದವೇ ರಿಕಾಪು. ಹೊಳೆಯುವ ರೆಕ್ಕೆಗಳೇ ಪಚ್ಚೆಯ ಜೀನು ಆಗಿತ್ತು.

ಜೋಡಿಹಕ್ಕಿ ಚಕ್ರವಾಕಗಳ ಆಲಿಂಗನವೇ ಅಚ್ಚು. ಎರಡು ರೆಕ್ಕೆಗಳೇ ಚಕ್ರಗಳು, ಕೊಕ್ಕೇ ಮಂಕಣಿಯಾಗಿ ರಥಗಳಿದ್ದವು.

ವಸಂತನು ಕಾಮನಿಗೆ ಪದಾತಿದಳ ಬರುತ್ತಿರುವುದನ್ನು ತೋರಿಸಿ ಹೆಮ್ಮೆಯಿಂದ ಮುಗುಳ್ನಕ್ಕನು.

ದುಂಬಿಗಳು ತಲೆಯಲ್ಲಾಡಿಸಿ ಹಾಡುವಾಗ ಅಲ್ಲಿಗೆ – ಶ್ರೀಕೃಷ್ಣನ ಮನಸ್ಸನ್ನು ಹದಿನಾರು ಸಹಸ್ರ ಭಾಗಮಾಡಿದ ಮನ್ಮಥನ ಕಾಳಗದ ನಾಯಕಿಯೋರ್ವಳು ಬಂದಳು.

ಅಹಲ್ಯೆಯ ಕಾರಣದಿಂದ ಬಂದ ದೇವೇಂದ್ರನನ್ನೇ ಗೆದ್ದ ಪತಾಕೆಯ ಪ್ರತಾಪವೋ ಎಂಬಂತಿದ್ದ ಹೊಳೆವ ಸುಕುಮಾರೆ ವಿಲಾಸ ಸಂಭ್ರಮದಲ್ಲಿ ಬಂದಳು.

ಓರ್ವ ಗಜಗಮನೆಯು ನಡೆದು ಬರುವಾಗ ಅವಳ ಹೊಳೆಯುವ ಕಾಲುಂಗುರದ ಶಬ್ದವು ಡಾಡೇ, ಹರೆಬಾರಿಸುವಂತಿದ್ದು – ಅವಳು ಕುಸುಮಾಸ್ತ್ರನ ಮದಗಜದಂತೆ ಬಂದಳು.

ಮೊಗ್ಗುಗಳೇ ಕಠಾರಿ, ಮರುಗವೇ ಗುರಾಣಿ, ಕಮಲವೇ ಘಂಟೆ, ಮುಡಿವಾಳವೇ ಚಾಮರ, ನೈದಿಲೆಯೇ ಕೊಂತಾಯುಧ, ಕೇತಕಿಯ ಎಸಳೇ ಸಣ್ಣ ಕತ್ತಿ, ಅಬಲೆಯರೇ ಕಾಲಾಳುದಳ ಎಂದು ವಸಂತನು ಕಾಮನಿಗೆ ಹೇಳಿದನು.

ತಳಿರೇಚಕ್ರ, ಬಾಳೆಯ ಎಲೆಗಳೇ ಹಲಗೆಗಳು, ಸುರುಗೀಹೂಗಳೇ ಖಡ್ಗಗಳು, ಕಣಗಿಲೆಗಳೇ ಭರ್ಜಿ, ಬಂದುಗೆಹೂಗಳೇ ತ್ರಿಶೂಲಗಳು, ಮಲ್ಲಿಗೆಯೇ ಈಟಿಯಾಗಿರುವ ಸುಗಂಧ ಕಾಮಿನಿಯರು ಬಂದರು.

ಸುರ ಹೊನ್ನೆಯ ಮೊಗ್ಗುಗಳೇ ಒನಕೆಗಳು, ಬಳ್ಳಿಗಳೇ ಸಲ್ಲೆಹ ಎಂಬ ಆಯುಧ, ಹೊಸ ಪಾದರಿ ಹೂಗಳೇ ಬಲ್ಲೆಹ ಎಂಬ ಆಯುಧ, ಅಂಕುರಗಳೇ ವಜ್ರ ಮುಷ್ಟಿಯಾದ ಚೈತನ್ಯಶೀಲ ಅಂಗನೆಯರು ವಸಂತ ಸೇನೆಗೆ ಕೂಡಿ ಬಂದರು.

ದವನದ ಕೊಡೆ, ಹೊಂಬಾಳೆಗಳ ಚಾಮರ, ಕಡುಕಂಪು ಸಂಪಿಗೆಯ ಛತ್ರಿ ಹಿಡಿದು ಕೆಲವು ಸ್ತ್ರೀಯರು ಅಲ್ಲಿ ನೆರೆದಿದ್ದರು.

ಹಾಲುಗಡಲಿನ ತೆರೆಗಳಂತೆ, ಹೊಳೆವ ಚಂದ್ರನ ಹಾದಿಯಂತೆ, ಕಿಕ್ಕಿರಿದು ಒತ್ತರಿಸಿ ಬರುವ ಸುಂದರಿಯರ ಸೈನ್ಯವನ್ನು ನೋಡಿ ಕಂದರ್ಪರಾಜನೇ ಬೆರಗಾದನು.

ಬಿಲ್ಲು ಪಡೆಯ ನಾರಿಯರ ಕೈಯಲ್ಲಿ ನಳನಳಿಸುವ ಕಬ್ಬಿನ ಬಿಲ್ಲುಗಳಿದ್ದವು. ತಾವರೆಯ ದಂಟಿನ ಎಳೆಗಳಿಂದ ಮಾಡಿದ ಬಿಲ್ಲಿನಹೆದೆಯೂ, ಬಿಲ್ಲಿನಹೆದೆಗೆ ತಾಗದಂತೆ ಚಿಗುರುಗಳಿಂದ ಮಾಡಿ ಮುಂಗೈಗೆ ಕಟ್ಟಿದ ರಕ್ಷಾಕವಚಗಳೂ ಇದ್ದವು. ಹೂವಿನ ಬಾಣಗಳಿಂದ ಸಜ್ಜಾದ ದಳವು ದಾಪುಗಾಲು ಹಾಕುತ್ತ ಮುನ್ನಡೆಯುವುದನ್ನು ಕಂಡು ಜಗವು ಬೊಬ್ಬೆ ಹಾಕಿತು.

ಅಷ್ಟು ಹೊತ್ತಿಗೆ ತಾರಾಧೀಶನಾದ ಚಂದ್ರನು ತನ್ನ ತೊಳತೊಳಗುವ ಅಮೃತ ಕಿರಣಗಳನ್ನು ಎಂಟು ದಿಕ್ಕಿಗೂ ಪಸರಿಸಿದನು. ಚಕೋರಪಕ್ಷಿಗಳಿಂದ ಆವರಿಸಲ್ಪಟ್ಟ ಅವನು ಕನ್ನೈದಿಲೆ ಹೂಗಳೊಡನೆ ನಡೆದು ಬಂದನು. ಅವನ ತಂಪು, ಕಂಪು, ನಿಧಾನ ಗತಿಯು ರತೀರಮಣ ಕಾಮಣ್ಣನನ್ನೇ ಅಲ್ಲಾಡಿಸುತ್ತಿರಲು; ಮಂದ ಮಾರುತನು ಜಗತ್ತನ್ನೇ ಮೋಹಗೊಳಿಸುತ್ತ ಸುಳಿದಾಡಿದನು.

ಅನುಪಮ ಶಬ್ದ ಸ್ಪರ್ಶರೂಪ ರಸಗಂಧದಿಂದೆ ಶಿವನಂಗೆಲ್ವೆಂ

ಅದನ್ನೆಲ್ಲಾ ನೋಡಿದ ಮನ್ಮಥನು ಆನಂದದಿಂದಿರುವಾಗ ವಸಂತನು 'ಇತ್ತ ಅವಧರಿಸು' ಎಂದು ತನ್ನ ಹೊಸಮಾತಿನ ಶೈಲಿಯಲ್ಲಿ ಕಾಮನ ಮನಸ್ಸನ್ನು ಸೆಳೆದು ಹೇಳಿದನು:

'ಎಲೈ ಮದನನೃಪನೇ, ಶಿವನ ನಿಶ್ಚಲವಾದ ಮನಸ್ಸಿನ ಬೆಸುಗೆಯನ್ನು ಒಡೆಯಲು ನಮ್ಮ ಬೆಳಗುವ ಅಂಕುರವೊಂದೇ ಸಾಲದೇ?

'ಹೊಸ ಚಿಗುರುಗಳ ರಸದಿಂದ ಮಸೆದ ಕೋಗಿಲೆಗಳ ಕೊರಲ ಮಧುರ ಧ್ವನಿಯೊಂದೇ ಆ ಶೂಲಿಯ ತಪಸ್ಸನ್ನು ಕೆಡಿಸಬಲ್ಲದು. ಹಾಗಿರುವಾಗ ಉಳಿದ ಪರಿಕರಗಳೇಕೆ?

'ನನ್ನೊಡೆಯ ಕಂದರ್ಪ, ಸರ್ವೇಶ್ವರನ ನಿಶ್ಚಲತಪಸ್ಸಿನ ತೇಜಸ್ಸನ್ನು ಕಡಿಮೆಯಾಗಿಸಲು ಅರಗಿಳಿಗಳ ಮಧುರ ಚಪ್ಪರಣೆ ಸಾಲದೇ? ಇವುಗಳಿಗೂ ಜಗ್ಗದೆ ಇಂದುಧರನಿದ್ದರೆ ಮಂದಮಾರುತನ, ತರುಣಿಯರ, ಫಲಗಳ, ಹೂವುಗಳ ಅನುಪಮ ಶಬ್ದ, ಸ್ಪರ್ಶ, ರೂಪು, ರಸ, ಗಂಧಗಳಿಂದ ಶಿವನನ್ನು ಗೆಲ್ಲುತ್ತೇನೆ.'

ಹೀಗೆ ಜಗತ್ತಿನ ಮನೋನುರಾಗಕ್ಕೆ ಕಾರಣವಾದ ವಸಂತನು ಭಾಷೆಕೊಟ್ಟ ಮೇಲೆ, ಚಂದ್ರನು ಬಂದು ನುಡಿದನು :

'ಚಂದ್ರಕಾಂತ ಶಿಲೆಯನ್ನೇ ಕರಗಿಸುವ ಸುಧಾಮಯ ಕಿರಣಗಳಿಂದ ಹರನ ಚಿತ್ತವನ್ನು ನಾನು ಕರಗಿಸಬಲ್ಲೆ.'

ಅಗ ದಿಟ್ಟತನದಿಂದ ಮುಂದೆಬಂದ ಚಂದ್ರಮುಖಿಯೊಬ್ಬಳು,

'ಎಲೈ ಮಕರಧ್ವಜನೇ, ತ್ರಿನಯನನ ತಪವನ್ನು ಕೆಡಿಸಲು ಕ್ಷಣವೇಧಿಗಳೆನಿಸುವ ನನ್ನ ಚಂಚಲ ಕಡೆಗಣ್ಣನೋಟವಿರುವಾಗ, ಹೂ ಬಾಣಗಳೇಕೆ?' ಎಂದಳು. ಮತ್ತೋರ್ವಳು,

'ಎಲೈ ಮಾರನೃಪನೇ, ನಿನ್ನ ಧನುಷ್ಠಂಕಾರವನ್ನು ಎದುರಿಸುವವರು ಈ ಜಗದಲ್ಲಿ ಯಾರಿರುವರು? ಆದರೂ, ನನ್ನ ನೂಪುರದ ಮಧುರ ಧ್ವನಿಯಿಂದಲೇ ಅಭವನ ಘೋರತಪವನ್ನು ಕೆಡಿಸಬಲ್ಲೆ' ಎಂದಳು. ಹಾಗೆ ಮೀರಿ ನುಡಿದ ನೀರೆಯರ ನಡುವಿನಿಂದ ಭಾಮಿನಿಯೊಬ್ಬಳು ಹೀಗೆ ಭಾಷೆ ಕೊಟ್ಟಳು,

'ಮದನನೃಪಾಲನೇ ಕೇಳು. ಭುವನತ್ರಯವನ್ನು ಕ್ಷಣದಲ್ಲಿ ಗೆದ್ದ ಘನ ಕೀರ್ತಿಯ ಕಬ್ಬಿನ ಬಿಲ್ಲು ಮತ್ತು ಹೂಬಾಣದ ನುಡಿ ಇಲ್ಲೇಕೆ? ನನ್ನ ಹೊಳೆಯುವ ಕಣ್ಣ ಹುಬ್ಬೆಂಬ ಬಿಲ್ಲಿನ ಕುಡಿನೋಟದ ಹೂಬಾಣದ ಲೀಲೆಯಿಂದಲೇ ಜಿತಕಾಲ ಶೂಲಿಯನ್ನು ಗೆಲ್ಲುತ್ತೇನೆ!'

ಹೀಗೆ ಭಾಷೆ ಕೊಟ್ಟ ವಸಂತಾದಿ ಸಂಮೋಹನ ಸೈನ್ಯ ಮುಖ್ಯರ ಸುಧಾರಸ ಪೂರಿತ ಮನೋಹರ ಮಾತುಗಳನ್ನು ಕೇಳಿ ಕುಸುಮಾಯುಧನು ಸಂತುಷ್ಟನಾದನು. ತನ್ನ ಭುಜಗಳನ್ನು ನೋಡಿಕೊಳ್ಳುತ್ತ ಮದೋನ್ಮತ್ತನಾಗಿ,

'ಓಹ್! ಕಬ್ಬಿನ ಬಿಲ್ಲು, ಹೂಬಾಣಗಳು ನನ್ನ ಕೈಸೇರಲು ಈ ತಪೋಮಯರು, ಶಾಂತಿಭೂಷಣರು, ಜಿತಕಾಮರು, ದಿಗಂಬರರು, ಕರ್ಮನಿಷ್ಠರು, ನಿಸ್ಪೃಹರು, ಉತ್ತಮರೆಲ್ಲ ಯಾವ ಲೆಕ್ಕ!

'ಪರಿಮಳವನ್ನು ಎಂಟುದಿಕ್ಕಿಗೆ ಬಿತ್ತರಿಸುವ ಪುಷ್ಪಬಾಣಗಳಿಂದ ಗಿರಿಜೆಗೆ ವಿರಹ ತಾಪವಾಗುವಂತೆ ಮಾಡುವೆನು. ಶಂಕರನ ತಪಸ್ಸೆಂಬ ಛತ್ರದಂಡವನ್ನು ತುಂಡರಿಸುವೆನು. ಸೊಂಪಿನಿಂದ, ಮುದದಿಂದ, ಮೋಹನದಿಂಪಿನಿಂದ, ವಶೀಕರಣದ ಸಂಪತ್ತಿನಿಂದ ಪಂಚಮುಖನಿಗೆ ಪಂಚಬಾಣದ ಸವಿಯನ್ನುಣ್ಣಿಸುವೆನು' ಎಂದು ನುಡಿದ ಮಾರನೃಪನು ಕಮಲದ ದಂಟಿನ ನಾರಿನಿಂದ ನೇಯ್ದ ಹೊಸ ವಸ್ತ್ರವನ್ನುಟ್ಟನು. ದಿವ್ಯಚಂದನವನ್ನು ಲೇಪಿಸಿಕೊಂಡು, ಪರಾಗದ ತಿಲಕವನ್ನಿಟ್ಟು ಕೊಂಡನು. ಕೇತಕೀದಳದ ಹರಿತ ಖಡ್ಗವನ್ನು ಕಿರಿಯ ಕಟ್ಟುಗಳಲ್ಲಿ ಸಿಕ್ಕಿಸಿಕೊಂಡನು.

ವಸಂತನು ಮೃದುವಾದ ಹೊಸ ಮಲ್ಲಿಗೆಯ ಹೂಗಳ ಸೇಸೆಯನ್ನು ಸೂಸಿದನು. ವನಲಕ್ಷ್ಮಿಯು ಸ್ಫಟಿಕದ ಹರಿವಾಣದಲ್ಲಿ ಬಂದುಗೆ ಕುಸುಮದ ವಿಜಯಾರತಿ ಬೆಳಗಿದಳು.ವಿಷ್ಣು ಬ್ರಹ್ಮ ಇಂದ್ರಾದಿಗಳು ಹರಸಿದರು. ಲಕ್ಷ್ಮೀದೇವಿ ಮುಂತಾದ ಮಂಗಳೆಯರು ವಿಜಯಿಯಾಗು ಎಂದು ಶುಭ ಹಾರೈಸಿದರು.

* * * * *

ಕಾಮದಹನ

ಮನ್ಮಥನು ಗರ್ವಪರ್ವತವನ್ನು ಏರುವಂತೆ ಮಾವು ಎಂಬ ಮತ್ತಗಜವನ್ನು ಏರಿದನು. ಹಿಂಭಾಗದಲ್ಲಿ ರತಿದೇವಿಯು ಕುಳಿತುಕೊಂಡಳು. ಹೊಳೆ ಹೊಳೆಯುವ ಚಂದ್ರಮನು ಬೆಳ್ಗೊಡೆಯಾಗಿರಲು, ಮಂದಮಾರುತನು ಸುಗಂಧ ಚಾಮರ ಬೀಸಿದನು. ರೋಹಿಣಿಯು ಕಬ್ಬಿನಬಿಲ್ಲನ್ನು, ಹೂ ಬಾಣಗಳನ್ನು ಹಿಡಿದು ನಿಂದಳು. ಅಕ್ಕ ಪಕ್ಕದಲ್ಲಿ ಗಿಳಿಗಳ ಅಶ್ವಸೇನೆ ಗುಂಪಾಗಲು, ಚಕ್ರವಾಕ ರಥಗಳು ಬಂದು ಸೇರಲು, ಮಾವಿನ ಗಜಸೈನ್ಯ ಸಾಲುಗಟ್ಟಿತು. ಸುಂದರಿಯರ ಪದಾತಿಬಲವು ಮುಂದೆ ನಡೆಯುತ್ತಿರಲು, ಮಕರಧ್ವಜ ಗಗನದಲ್ಲಿ ಹಾರಿತು. ದರ್ಪಕಭೂಭುಜ, ಶೂರ್ಪಕ ಮರ್ದನ, ಮುನಿಜನ ಮನೋಹಾರಿ, ಯತಿಗಳೆಂಬ ಗಜಗಳಿಗೆ ಸಿಂಹಪ್ರಾಯ, ಕಾಂತಾಕುಲಚಕ್ರವರ್ತಿ, ಅಪ್ರತಿಹತವಿಕ್ರಮ ಕಾಮದೇವನು ಹೇಮಕೂಟದ ಕಡೆಗೆ ನಡೆದನು.

ಗಿಳಿಗಳ ಅಶ್ವಸೇನಾ ಸಮೂಹವು ಧರೆಯನ್ನು ಆವರಿಸಿದಂತೆ, ಪುಷ್ಪಾಸ್ತ್ರಗಳ ಸುಗಂಧವು ದಶದಿಕ್ಕುಗಳಿಗೆ ಹಬ್ಬಿದಂತೆ, ಮಕರಂಧದ ಧೂಳಿನಿಂದ ಗಗನವು ತುಂಬಿದಂತೆ ಕುತೂಹಲದ ಮಾರನೃಪನ ಸೇನೆ ಮುನ್ನಡೆಯಿತು. ಅದು ಜಿತೇಂದ್ರಿಯರ ಮನಸ್ಸನ್ನು ಶೋಷಿಸುತ್ತ ಮೆರೆದು ಸಾಗಿತು. ಕುಸುಮಾಯುಧನ ಮನೋಹರಸೇನೆಯ ಹಿಂದೆ ಕೋಗಿಲೆಗಳ ಕೂಜನವು – ನಿಸ್ಸಾಳದಂತೆ ಧಳಂ ಧಳಂ ಧಳಂ ಎಂದು ಮೊಳಗಿತ್ತು. ಆ ರಣಭೇರಿಯ ಕಂಪನಕ್ಕೆ ಮುನಿಗಳ ಕೈಯಲ್ಲಿದ್ದ ಜಪಸರಗಳು ಕೆಳಗೆ ಬೀಳತೊಡಗಿದವು!.

ಈ ಚಿತ್ತಾಕರ್ಷಕ ಬಂದ, ಈ ಋಷಿಗಳ ವಿಮಳ ಆಚಾರದ ಸಂಹಾರಿ ಬಂದ, ಈ ಧರ್ಮಜ್ಞರ ವೈರಿ ಬಂದ, ಈ ಜಿತೇಂದ್ರಿಯರ ವಿಧ್ವಂಸಿ ಬಂದ, ಈ ಯತಿಹರ ಬಂದ, ಬಂದನೀ ಬಂದನೀ ಬಂದ ಎಂದು ಎತ್ತೆತ್ತಿ ಎತ್ತರದ ದನಿಯಲ್ಲಿ ಕಹಳೆಯನ್ನೂದುವಂತೆ– ದುಂಬಿಗಳು ಝೇಂಕಾರ ಮಾಡುತ್ತ ಕಾಮನ ಪ್ರತಾಪವನ್ನು ಮೊಳಗಿಸಿದವು.

ತೊಲಗೆಲೆ ದೇವೇಂದ್ರ, ತೊಲಗೆಲೆ ಚತುರ್ಮುಖ, ತೊಲಗೆಲೆ ಅಗ್ನಿ, ತೊಲಗು ಬೃಹಸ್ಪತಿ, ಕೃಷ್ಣನೇ ತೊಲಗು ಎಂದು ಹಲವು ಕೊಂಬುಗಳು ಮೊರೆಯಿಟ್ಟವು. ಆ ಕಹಳೆಗಳ ದುಂದುಭಿಯ ಮೊರೆತದಲ್ಲಿ; ಬಿಲ್ಲು ಹಿಡಿದ ರತೀಶನ, ಅಪ್ರತಿಮ ವೇಷನ, ಅನೂನವರ ಪ್ರಕಾಶನ ಉತ್ಸಾಹಕ್ಕೆ – ಪರಸ್ಪರ ಒಲಿದವರ, ಅಗಲಿದ್ದವರ ಜೀವ ಶೂನ್ಯವೆನಿಸಿತು. ಕಾಮನ ಬಲದ ಹುಮ್ಮಸ್ಸಿಗೆ ಕಾಮಿನಿಯರು ನಲಿದಾಡಿದರು. ಜಿತೇಂದ್ರಿಯರು ಓಡಿದರು. ವಿಯೋಗಿಗಳ ಉತ್ಸಾಹ ಕುಸಿಯಿತು. ಭೋಗವನ್ನು ತ್ಯಜಿಸಿದ್ದ ಯೋಗಿಗಳಲ್ಲಿ ಭೋಗೆಚ್ಛೆ ಅಂಕುರಿಸಿತು!.

ಶಿವನ ಪರ್ವತಕ್ಕೆ ಮುತ್ತಿಗೆ

ರತೀಶ್ವರನ ಸುಕೋಮಲ ಚತುರಂಗಸೇನೆ ಮುನ್ನಡೆದು ಹೋಗುವಾಗ ಪೃಥ್ವಿಯೇ ಅಚ್ಚರಿಗೊಂಡಿತು! ಮುನಿಗಳ ಧೈರ್ಯವೆಂಬ ಭೂಮಿಗೆ ಧೂಳು ಆವರಿಸಿತು! ಮನುಷ್ಯನ ಮನಸ್ಸೆಂಬ ಪರ್ವತಗಳು ಪುಡಿ ಪುಡಿಯಾದವು! ಯತಿಗಳ ಆಚಾರವೆಂಬ ನದಿಯು ಕೆಸರಾಯಿತು! ನಿರ್ಮಲವ್ರತಿಗಳ ತಪಸ್ಸೆಂಬ ವನ ಬರಿದಾಯಿತು!

ಪುಷ್ಪಶರನಪಡೆ ಮುಂಬರಿಯುವಾಗ ಯತಿಶ್ರೇಷ್ಠರು ಖಿನ್ನರಾದರು. ವಿರಹಿಗಳು

ಅಸುನೀಗಿದರು. ಮನುಮುನಿಗಳು ಶರಣಾದರು. ಜಿತಕಾಮರು ಮರುಳಾದರು, ಹೀಗೆ ಸಕಲಭುವನವನ್ನು ಭಂಗಗೊಳಿಸುವ ಚತುರಂಗಸೇನೆಯೊಡನೆ ತೀವ್ರ ಪರಾಕ್ರಮದಿಂದ ಮನ್ಮಥನು – ಸೋಮಧರನು ತಪಸ್ಸು ಮಾಡುತ್ತಿರುವ ಹೇಮಕೂಟಕ್ಕೆ ಬಂದನು.

ಆ ಗಿರಿಯನ್ನು ನೋಡಿ ಕೋಪಗೊಂಡ ಕಾಮದೇವನು ತನ್ನ ಉನ್ನತಸೇನೆಗೆ ಕೈಬೀಸಿ ಯುದ್ಧ ಸೂಚನೆ ನೀಡಿದನು. ಆಗ ಗಿಳಿಗಳು ಚಪ್ಪರಿಸಿದವು. ದುಂಬಿಗಳು ಮೊರೆದವು. ಕೋಗಿಲೆಗಳು ಕರೆ ನೀಡಿದವು. ಮಂದಾನಿಲ ಬೀಸಿತು. ಚಂದ್ರನು ಬೆಳುದಿಂಗಳನ್ನು ಬೀರಿದನು. ಚಕೋರಗಳು ನಲಿದು ಉಲಿದವು. ಕುಸುಮಗಳು ಕಂಪು ಬೀರಿದವು.

ಮತ್ಸ್ಯ ಪತಾಕೆಯು ಅಚ್ಚರಿಯಲ್ಲಿ ಆಡುತ್ತಿರಲು ಮಾವು ಎಂಬ ಗಜಗಳ ಪೂತ್ಕಾರ, ಚಂದ್ರವಾಕಗಳ ಚೀತ್ಕಾರ, ದುಂಬಿಗಳ ಝೇಂಕಾರ; ತರುಣಿಯರ ಕಾಲುಂಗುರಗಳ ಠಣತ್ಕಾರ, ಕೈಬಳೆಗಳ ಝಣತ್ಕಾರ ಆಗಸವನ್ನು ತುಂಬಿದವು. ಕಾಮನು ತನ್ನ ಎಲ್ಲಬಲವನ್ನೂ ಒಟ್ಟು ಗೂಡಿಸಿ ಬೊಬ್ಬಿಟ್ಟು ಅಬ್ಬರಿಸಿ ಶರ್ವನ ಧ್ಯಾನ ಪರ್ವತಕ್ಕೆ ಮುತ್ತಿಗೆ ಹಾಕಿದನು.

ನಂದಿಕೇಶ್ವರನ ದೃಷ್ಟಿಗೆ ಮಾಯವಾದ ಕಾಮನ ಪಡೆ

ಹೇಮಕೂಟದ ಮುಂದೆ ನಿಂತ ಕಾವಲುಕಾಯಕದ ನಂದಿಕೇಶ್ವರನು ಮನ್ಮಥನ ಮೋಹನಬಲದ ಸುಧಾರಸಮಯ ಸುನಾದವನ್ನು ಕೇಳುತ್ತ ಕಂಪಿಸಿದನು. ಅವನ ಕರಣಗಳು ಕಲಕಿ, ಮನಸ್ಸು ಸ್ವಲ್ಪ ಕದಲಿತು. ತನ್ನ ಚದುರಿದ ಚಿತ್ತವನ್ನು ಮೆಲ್ಲಮೆಲ್ಲನೆ ಸಂತೈಸಿಕೊಂಡನು. ಶಿವಜ್ಞಾನದಿಂದ ಎಚ್ಚರಗೊಂಡು ಕಣ್ಣುತೆರೆದು ಮುಂದೆಇದ್ದ ಸೈನ್ಯವನ್ನು ನೋಡಿದನು.

ಆ ಸೇನೆಯನ್ನು ನೋಡುತ್ತ ಚಿಂತನೆಗೆ ತೊಡಗಿದನು. ಹರನ ಸಮಾಧಿಗೆ ಇದು ಅನುಕೂಲವಾಗಿಲ್ಲ. ಹೀಗೆ ವಿರೋಧವನ್ನುಂಟು ಮಾಡುತ್ತಿರುವವರು ಯಾರು? ಇದು ಯಾರ ಸೈನ್ಯ? ಯಾರ ಮದ ಹೀಗೆ ಲೋಕಭೀಕರ ಶಬ್ದವನ್ನುಂಟು ಮಾಡುತ್ತಿದೆ? ಈ ಸಂಭ್ರಮ ಯಾರದು? ಇದೊಂದು ಮರುಳತನ ಎಂದು ನಂದಿಕೇಶ್ವರನು ಕೋಪಗೊಂಡನು. ಮದನನ ಸೇನೆಯನ್ನು ದಿಟ್ಟಿಸಿ ನೋಡಿದನು.

ಅವನ ದೃಷ್ಟಿಗೆ ದುಂಬಿಗಳು ಮೂರ್ಛೆಹೋದವು. ಕೋಗಿಲೆಗಳು ಗಾಬರಿಗೊಂಡು ದಿಕ್ಕೆಟ್ಟವು. ಚಂದ್ರನು ಕಳೆಗುಂದಿದನು. ಕೋಮಲೆಯರು ದಿಗ್ಭ್ರಮೆಗೊಳಗಾದರು. ಅರಗಿಳಿಗಳು ಓಡಿದವು. ಮಾವಿನಪಡೆ ಘೀಳಿಡುತ್ತ ಕಾಡು ಹೊಕ್ಕಿತು. ಮಂದಾನಿಲ ಅವಿತುಕೊಂಡಿತು. ವಸಂತನು ಘೋರಕಾನನ ಸೇರಿ ತಲೆ ಮರಿಸಿಕೊಂಡನು. ಕಳಹಂಸಗಳು ಅಂಜಿ ಕೊಳದಲ್ಲಿ ಬಚ್ಚಿಟ್ಟುಕೊಂಡವು. ಚಕ್ರವಾಕಗಳು ನಡೆಗೆಟ್ಟವು.

ಕಾಮದೇವನ ಚತುರಂಗಬಲವು – ದಿವಸೇಂದ್ರನ ಮುಂದಿನ ಕತ್ತಲೆಯಂತೆ– ನಂದೀಶ್ವರನ ಕೋಪದ ತೀವ್ರತಾಪಕ್ಕೆ ನೋಡನೋಡುತ್ತಾ ಮಾಯವಾಯಿತು.

ಅರ್ಪುಗುಂದಿದ ದರ್ಪಕ

ಅದನ್ನು ಕಂಡ ಮದನನು ತನ್ನಲ್ಲಿಯೇ ತಾನು – ಈ ಗಣೇಶನ ದೃಷ್ಟಿಗೆ ನನ್ನ ಸೇನೆ ಚದುರಿ ಹೋಯಿತಲ್ಲ! ಇನ್ನು ಶಿವನನ್ನು ಎದುರಿಸಿ ಬಾಣ ಬಿಡುವುದು ಅಸಾಧ್ಯ! ಅಸಾಧ್ಯ! ಎಂದುಕೊಂಡನು. ದುಃಖದಿಂದ ಮುಂದಿನಕಾರ್ಯದ ಬಗ್ಗೆ ಚಿಂತಿಸತೊಡಗಿದನು.

ಆ ಸಮಯದಲ್ಲಿ ಅವನಿಗೆ ಪುಷ್ಪಕ ವಿಮಾನದಲ್ಲಿ ಕುಳಿತು ಬರುತ್ತಿದ್ದ ಪಾರ್ವತಿಯು ಕಂಡಳು. ಎಲ್ಲ ದೇವತೆಗಳು ವಂದಿಸುವ ಸತ್ಕಾರಕಳು. ನಿತ್ಯಾನಂದಳು. ರುದ್ರಾರ್ಚನಾ ಆಸಕ್ತಳು. ವಿಶ್ವಾರಾಧ್ಯೆ, ಕಾರುಣ್ಯದ ನೆಲೆವನೆ ಗಿರಿಜೆಯನ್ನು ಕಂಡು – ಕಾಮದೇವನಿಗೆ ಕಣ್ಣುಬಂದಂತೆ, ಉಸಿರುಬಂದಂತೆ ಆಯಿತು. ಮುದದಿಂದ ತಾಯಿಗೆ ಸಾಷ್ಟಾಂಗನಮಸ್ಕಾರ ಮಾಡುತ್ತ,

'ಜಗನ್ಮಾತೆ, ಸರ್ವೇಶ್ವರಿ, ದಿವ್ಯಜ್ಞಾನಿ, ಸದಲಂಕೃತೆ, ವಿಶ್ವೋದರೆ ನನ್ನನ್ನು ಕಾಪಾಡು' ಎಂದು ಹೊಗಳಿ ಪ್ರಾರ್ಥಿಸಿದನು. ದುಃಖದಿಂದ ಅವನ ಕಣ್ಣಂಚು ತೇವಗೊಂಡವು. ಪರಾಕ್ರಮ ಕುಂದಿದ ದರ್ಪಕನು ದೈನ್ಯನಾಗಿ ದೇವಿಯೊಡನೆ,

'ತಾಯಿ ಮಹಾಮಾತೆ, ಗಿರೀಶನ ತಪಸ್ಸನ್ನು ಭಂಗಗೊಳಿಸಲು ವಿಷ್ಣು ನನ್ನನ್ನು ಕಳುಹಿಸಿದ ಕಾರಣ ಹೇಮಾಚಲಕ್ಕೆ ಮುತ್ತಿಗೆ ಹಾಕಿದೆ. ನಂದೀಶ್ವರನಿಂದ ನನ್ನ ಸಕಲಸೇನೆಯು ಅಳಿಯಿತು. ನಾನು ಮಾತ್ರ ಉಳಿದಿರುವೆನು' ಎಂದು ಹೇಳುತ್ತ ದುಃಖಉಮ್ಮಳಿಸಿ ಕಂಠಬಿಗಿದು 'ತಾಯಿ ನನಗೆ ನೀನೇ ಆಶ್ರಯ. ನೀನೇ ಆಯಸ್ಸು, ನನ್ನ ಪ್ರಾಣವನ್ನು ಕಾಪಾಡು' ಎಂದು ಪ್ರಲಾಪಿಸಿದನು.

ವಾತ್ಸಲ್ಯಮಯಿ ಕಾತ್ಯಾಯಿನಿಯು ದಯೆಯಿಂದ ನೋಡುತ್ತ, 'ಎಲೈ ಕಂದರ್ಪನೇ, ನೀನು ಬಂದ ಕಾರಣ ತಿಳಿದೆನು. ಈ ರೀತಿ ನಂಜುಂಡನ ತೀವ್ರ ಪ್ರತಾಪವನ್ನು ಓಡಿಸುವುದು ನನಗೂಇಷ್ಟ. ಅದೇ ನನ್ನಹರಕೆ, ನನ್ನಇಚ್ಛೆ. ಅದರಿಂದ ನನಗೂಲಾಭ.

'ನಾನಾ ವಿಧದಿಂದ ರುದ್ರನ ಅನೂನತಪದ ಬೆಸುಗೆಯನ್ನು ಬಿಡಿಸು. ಶ್ರೀನಂದನನೇ, ನೀನು ಭಯಪಡಬೇಡ. ನಿನಗೆ ಸಹಾಯ ಹಾಗೂ ರಕ್ಷಕಳಾಗಿ ನಾನಿದ್ದೇನೆ' ಎಂದು ನುಡಿಯಲು, ಕಾಮನು ತನ್ನ ಹಿಂದಿನ ಪರಾಜಯುವನ್ನು ಲೆಕ್ಕಿಸದೆ, ಸಂತೋಷ ಚಿತ್ತನಾದನು. ಪಾರ್ವತಿಯ ಪುಷ್ಪಕವಿಮಾನದ ನೆರಳಲ್ಲಿ ನಡೆಯುತ್ತ ಶಿವನನ್ನೆದುರಿಸಲು ಸಿದ್ಧನಾದನು.

ಆಗ ಮುಗಿದ ಮನಸ್ಸು, ಮುಗಿದ ಕೈ, ಮುಗಿದ ಕಣ್ಣುಗಳಿಂದ ಭಕ್ತಿ ಅರಳಿ ಮೈನವಿರೇಳಿ ಹೊಮ್ಮಿದ ಆನಂದ ಬಾಷ್ಪಗಳೊಡನೆ ತನ್ಮಯ ಭಾವದಲ್ಲಿ ನಿಂತಿರುವ ನಂದಿಕೇಶ್ವರನನ್ನು– ಗಿರಿಜೆ ಕೃಪೆಯಿಂದ ನೋಡಿ, ಅನುಗ್ರಹಿಸಿದಳು.

ಶಿವಾರ್ಚನತತ್ಪರೆಯಾದ ಅವಳು ಹೂಬಿಡಿಸಲು ತೆರಳಿದಳು.

ಮುಕ್ಕಣ್ಣನಿಗೆ ಗುರಿ

ಪುಷ್ಪಚಾಪನು ನಂದೀಶನ ಕಾವಲು ಸೀಮೆಯನ್ನು ದಾಟಿ ಮತಂಗ ಪರ್ವತವನ್ನು ಏರಿದನು. ಮಹೇಶನ ಎಡಭಾಗದಲ್ಲಿ ನಿಂತು, ರತಿಯನ್ನು ಪಕ್ಕದಲ್ಲಿ ನಿಲ್ಲಲು ಹೇಳಿದನು. ಅವನು ಶೌರ್ಯ ಸಾಹಸದಿಂದ ಉಬ್ಬಿರಲು ನಭದ ದೇವತೆಗಳು ಭಾಪು! ಭಾಪು! ಎಂದು ಹೊಗಳುತ್ತಿದ್ದರು, ಪುಷ್ಪಶರನು ನಿಟಿಲಾಕ್ಷನ ಕಡೆಗೆ ಲಕ್ಷ್ಯವಿಟ್ಟು ನೋಡಿದನು.

ಅಪ್ರತಿಮನೂ, ಅಸಮಾನ ಶೂರನೂ ಆದ ಕಾಮನು ಕಬ್ಬಿನ ಬಿಲ್ಲನ್ನು ಎಡಗೈಯಲ್ಲಿ ಹಿಡಿದು ಪುಷ್ಪಬಾಣಕ್ಕೆ ಹೆದೆಯೇರಿಸಿ ಠಂಕಾರ ಮಾಡಿದನು. ಅದನ್ನು ಕೇಳಿ ವ್ರತಿಗಳು, ಮುನಿಗಳು, ಯತಿಗಳು ಹೆದರಿ ತತ್ತರಿಸಿಹೋದರು. ಮತಿಗೆಟ್ಟು, ಧೃತಿಗೆಟ್ಟು, ಬುದ್ಧಿಗೆಟ್ಟರು. ಆ ಧನುಷ್ಟಂಕಾರಕ್ಕೆ ಜಿತೇಂದ್ರಿಯರೆನಿಸಿದವರು ವಿಕಾರ ಚಿತ್ತರಾಗುತ್ತಿರಲು, ಕುಸುಮಾಯುಧನು ಮುಕ್ಕಣ್ಣನಿಗೆ ಗುರಿಯಿಡಲು ಉತ್ಸಾಹಗೊಂಡಿದ್ದನು.

ಹರಡಿ ಮುಂದೆಚಾಚಿದ ಅಡಿಗಳೊಡನೆ ಮನ್ಮಥನು ವೀರನಿಲುವಿನಲ್ಲಿ ನಿಂತನು. ನೀಳ ತೋಳುಗಳ ಸೆಟೆದುನಿಂತ ಭುಜಗಳೊಡನೆ, ಪ್ರಯೋಗದ ಪರಿಣತ ಕೈಗಳ ಮನ್ಮಥನು – ಲಕ್ಷ್ಯದಲ್ಲಿ ದೃಷ್ಟಿನೆಟ್ಟು ಶರಸಂಧಾನ ನಡೆಸಲು ಸಿದ್ಧನಾದನು.

ಅದು ಶೃಂಗಾರಕ್ಕೆ ಕೋಡುಮೂಡಿದಂತಿದ್ದು, ಲಾವಣ್ಯವು ಶೌರ್ಯಾಂಗವನ್ನು ಪಡೆದಂತಿತ್ತು. ಅದನ್ನು ನೋಡಲು ಹರಿಬ್ರಹ್ಮಾದಿಗಳು ಆಗಸದಲ್ಲಿ ನೆರೆದರು. ಅವರೊಡನೆ ಕಲಹಪ್ರಿಯ ನಾರದನೂ ಇದ್ದನು.

ರೋಷದಿಂದ ದೂರನಾಗಿ ಕಲಹಕ್ಕೆ ಸಮ್ಮತಿಸಿದ ಮದನನು ಸಕಲ ಕಲಾಭಿಜ್ಞನೂ, ದಿವ್ಯ ಜ್ಞಾನಿಯೂ, ಸರ್ವಜ್ಞನೂ ಆದ ಭಾಳಾಕ್ಷನನ್ನು ಲಕ್ಷಿಸಿ ನೋಡಿ ಉನ್ಮಾದನ ಬಾಣವನ್ನು ಹೂಡಿದನು.

ಆ ಉನ್ಮಾದನ ಬಾಣವು ಶಿವನ ತಪಸ್ಸಿನ ಕಿರಣಗಳನ್ನು ಎದುರಿಸಲಾರದೆ ಹಿಂದಿರುಗಿತು. ಅನಂತರ ಪಂಚಬಾಣನು ಮದನವೆಂಬ ಶರವನ್ನು ಪ್ರಯೋಗಿಸಿದನು. ಅದು ಗುರಿಮುಟ್ಟದೆ ಹಿಂದಿರುಗಿತು. ಆಗ ಕಾಮನು ಉಬ್ಬುಬ್ಬುತ್ತ ಮೋಹನಾಸ್ತ್ರವನ್ನು ತೆಗೆದುಕೊಂಡು,

'ಈ ಶರವು ಹರಿ ಬ್ರಹ್ಮ ಇಂದ್ರರ ಮದವನ್ನು ಅಡಗಿಸಿದೆ. ಇದು ಮೂರು ಲೋಕಗಳ ಜಿತೇಂದ್ರಿಯರ ಚಿತ್ತವನ್ನು ಅಲ್ಲಾಡಿಸಿದೆ. ಇಕೋ ತೆಗೆದುಕೋ' ಎಂದು ಹೇಳಿಬಿಟ್ಟನು, ಆ ಮೋಹನ ಶರವು ತನ್ನ ಸಾಮರ್ಥ್ಯದಿಂದ ಶೂಲಧರನ ಬಹಿರಂಗವನ್ನು ಸ್ವಲ್ಪಸೋಂಕಿ ಹಿಂದಿರುಗಿತು. ಆಗ ರತಿಪತಿಯು ಸಂತಾಪನ ಬಾಣವನ್ನು ಬಿಟ್ಟನು. ಅದು ಗುರಿತಪ್ಪದೆ ಸಾಗಿದರೂ – ಹರನ ಒಳ ಮನವನ್ನು ಮೆಲ್ಲಗೆ ಮುಟ್ಟಿಯೂ ಮುಟ್ಟಲಾಗದೆ ಹಿಂದಿರುಗಿತು! ಅದನ್ನು ಕಂಡು ಮನ್ಮಥನು ಕೋಪಗೊಂಡು,

'ಎಲೆಲೆ ಲೋಕಕ್ಕೆ ಅದ್ಭುತವಾದ ಈ ಪಿನಾಕಿಯ ತಪಸ್ಸು ಇನ್ನೂ ನನ್ನೆದುರು ಇದೆಯಲ್ಲ!' ಎಂದು ಚಿಂತಿತನಾಗಿ ವಶೀಕರಣಾಸ್ತ್ರವನ್ನು ತೆಗೆದುಕೊಂಡು, ಸೆಳೆದುಬಿಟ್ಟನು.

ಆ ಅಸ್ತ್ರವು ಇಂದುಧರನೂ, ವಿಮಲ ಜ್ಞಾನನಿಧಿಯೂ, ಪರಂಜ್ಯೋತಿಯೂ ಆದ ಶಿವನ ಕಾಲ್ದೆಸೆಯನ್ನೂ ಕಾಣದೆ ಮರಳಿ ಬರಲು ಮನ್ಮಥನು ಬೆರಗಾದನು!.

'ಓಹ್! ನನ್ನ ಪಂಚಬಾಣಗಳಾದ ಉನ್ಮಾದನ, ಮದನ, ಮೋಹನ, ಸಂತಾಪನ, ವಶೀಕರಣ ಎಲ್ಲವೂ ವ್ಯರ್ಥವಾಯಿತಲ್ಲ!' ಎಂದು ಯೋಚಿಸುತ್ತ, ಉತ್ಸಾಹಗುಂದಿ ತನ್ನ ಮನಸ್ಸಿನಲ್ಲಿ 'ನನ್ನ ಠೇಂಕಾರದಧ್ವನಿಗೆ ಮುನಿಗಳೆಲ್ಲ ಅಸಹಾಯ ಪರಿಸ್ಥಿತಿಗೆ ಈಡಾಗಿ ದಿಗ್ಭ್ರಮೆಗೊಳ್ಳುತ್ತಿದ್ದರು. ನಿಶ್ಯಂಕನೂ, ಅಚಳಿತನೂ ಆದ ಹರನು ಅನುಪಮಚರಿತ್ರನಾಗಿರುವನು. ನನ್ನ ಬಾಣಗಳಿಗೆ ತುಸುವೂ ಎಡೆಗೊಡದ ಶಿವನು ನಿರುಪಮ ಸಮಾಧಿಯುಕ್ತನೂ, ಅಭೇದ್ಯನೂ, ಕುರುಹು ಇಲ್ಲದವನೂ ಆಗಿರುವನು!' ಎಂದುಕೊಂಡ ರತೀಶನು ಸಂತೋಷ ದೂರನಾಗಿ ಕಳೆಗುಂದಿದನು.

ತೀವ್ರ ತಪೋಮುಗ್ನನಾದ ಪರಶಿವನನ್ನು ಯಾವುದೇ ರೀತಿಯಿಂದಲೂ ಅಲುಗಿಸಲಾಗದ ಲಕ್ಷ್ಮಿಯಪುತ್ರ ಮನ್ಮಥನ ಅಸಹಾಯ ಸ್ಥಿತಿಯನ್ನು ನಾರದನು ನೋಡಿದನು. ಗಗನದಲ್ಲಿ ಕುತೂಹಲದಿಂದ ನೆರೆದಿದ್ದ ಹರಿಬ್ರಹ್ಮರನ್ನುದ್ದೇಶಿಸಿ ಹೀಗೆ ಹೇಳಿದನು:

'ಶಿವನು ನೀರಿನೊಳಗಿರುವ ಕಮಲದಂತೆ, ಎಳ್ಳಿನೊಳಗಿರುವ ಎಣ್ಣೆಯಂತೆ, ಕಟ್ಟಿಗೆಯೊಳಗಿರುವ ಬೆಂಕಿಯಂತೆ ಇರುವನು. ಅಂತಹವನನ್ನು ಕಾಮನ ಬಾಣವು ಮುಟ್ಟಲು ಸಾಧ್ಯವೇ? ಮುಕ್ಕಣ್ಣನೂ, ನಿರ್ಗುಣನೂ ಆದ ಹರನನ್ನು ರತೀಶನ ಬಾಣ ಹೊಡೆಯಲು ಸಾಧ್ಯವೇ? ಓಹ್, ಅಣಕದ ಮಾತೇಕೆ? ಕಾಮನೆತ್ತ? ಅಭವನೆತ್ತ?'

* * *

ಗಗನದಲ್ಲಿ ಹಾಗೆ ಸಂಭಾಷಣೆಯಾಗುತ್ತಿರುವಾಗ ಹೇಮಕೂಟದಲ್ಲಿ ಅಗಜೆಯು ಶಿವಪೂಜೆಗಾಗಿ ಬಗೆ ಬಗೆಯ ಹೂಗಳನ್ನು ತೆಗೆದುಕೊಂಡು ಬಂದಳು. ಅವಳ ಜೊತೆಗೆ ವಿಲಾಸಿನಿಯರೂ, ಸೌರಭ್ಯ ಲೋಲುಪ್ತಿಯ ದುಂಬಿಗಳೂ, ಮಂದಮಾರುತನೂ ಬಂದರು.

ಅಗಜೆಯು ತಾನು ತಂದ ಹೊಸ ಹೊಸ ಹೂಗಳನ್ನು ಶಿವನ ಜಡೆ, ಭುಜಗಳು, ಕೈಗಳು, ವಕ್ಷಸ್ಥಳ, ಪಾದಗಳಲ್ಲಿಟ್ಟು ಅತಿಭಕ್ತಿಯಿಂದ ಅಲಂಕರಿಸಿ ಉಲ್ಲಾಸಗೊಂಡಳು. ಅವಳು ಶಿವನನ್ನು ತನ್ನ ಕಡೆಗಣ್ಣಿಂದ ನೋಡಿದ ನೋಟದಲ್ಲಿ – ಕೋಟ್ಯಾನುಕೋಟಿ ಕುಸುಮಾಯುಧರು ಹುಟ್ಟುವಂತಿತ್ತು!.

ಅವಳು ಪುಷ್ಪಾಂಜಲಿಯನ್ನು ಹಿಡಿದು ನೋಡುತ್ತಿರುವುದು, ಶಿವನ ತಪಸ್ಸೆಂಬ ಚಂದ್ರಕಾಂತ ಶಿಲಾತಲದಲ್ಲಿ ಬಿದ್ದ ಚಂದ್ರಕಿರಣಗಳಂತಿದ್ದವು. ಶಂಭುವಿನ ಎಚ್ಚರವೆಂಬ ಚಂದ್ರೋದಯವಾಗುವವರೆಗೂ ಕಾಯಲಾಗದೆ ಮುತ್ತಿದ ಚಕೋರಿಗಳಂತಿದ್ದವು. ಹರನ ಕರಣಗಳೆಂಬಹೂಗಳು ಅರಳುವವರೆಗೂ ಇರಲಾರದೆ ಬಂದು ಮುತ್ತಿದ ದುಂಬಿಗಳಂತಿದ್ದವು. ಈಗಲೇ ಆದಷ್ಟು ಬೇಗ ನಿನ್ನತಪಸ್ಸನ್ನು ಪಕ್ವಗೊಳಿಸುವೆನು ಎಂಬ ಭೀಕರ ನುಡಿ ಹೇಳುತ್ತ ಬರುವ ಕುಸುಮಶರನಂತಿದ್ದವು.

ಹರನನ್ನು ಹೀಗೆ ಸರಸ ದೃಷ್ಟಿಯಿಂದ ನೋಡುತ್ತ ಅವನ ತಪಸ್ಸನ್ನು ಬಿಡಿಸಲಿರುವ ಮೃಡಾಣಿಯನ್ನು ಕುಸುಮ ಕೋದಂಡನು ಕಂಡನು.

'ಓಹ್! ಇನ್ನು ನಾನು ಭಯಪಡುವುದಿಲ್ಲ. ನನಗೆ ಉನ್ನತಬಲ ಪ್ರಾಪ್ತವಾಯಿತು!' ಎಂದು ವಿಭ್ರಮೆಗೆ ಒಳಗಾದನು. ತನ್ನ ಪಂಚ ಬಾಣಗಳನ್ನು ಹೊರ ತೆಗೆದನು. ಅವುಗಳನ್ನು ಇಕ್ಷುಚಾಪಕ್ಕೆ ಅಳವಡಿಸಿದನು. ಅವು ಶಂಕರನ ಮನಸ್ಸನ್ನು ಚಲಿಸುವಂತೆ ಮಾಡಲು ಗುರಿಯಿಟ್ಟನು. ಕಿವಿಯವರೆಗೆ ಎಳೆದುಬಿಟ್ಟನು. ಅದು ದೇವತೆಗಳ ನಿಲಯವಾದ ಸ್ವರ್ಗದಲ್ಲಿ ಕುತೂಹಲವನ್ನುಂಟು ಮಾಡಿತು.

ಪ್ರೀತಿಯೇ ಆಕಾರ ಪಡೆದಂತೆ ನಿಂತಿದ್ದ ಅಗಜೆಯ ಮನೋಭಿಲಾಷೆಯು ಭೂತೇಶನ ಚಿತ್ತವನ್ನು ಹೊಕ್ಕಿತು. ಅವನ ಮನದಾಳದಲ್ಲಿ ಬೇರೂರಿದ್ದ ತಪೋಬೀಜವನ್ನು ಭರದಿಂದಒತ್ತಿ ಸುತ್ತಲೂ ಮುತ್ತಿತು.

ಬಿಸುಗಣ್ಣುರಿ ಪೊರಮಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ

ಹೀಗೆ ಸಕಲ ಲೋಕ ಕಲ್ಯಾಣಕ್ಕಾಗಿರುವ ಹರಿಬ್ರಹ್ಮರ ಮನದ ಬಯಕೆ, ಕಂದರ್ಪನ ಪಂಚಬಾಣಗಳ ಅನುಸಂಧಾನ, ಪಾರ್ವತಿಯ ಮನೋರಥವು ಮುಪ್ಪುರಿ ಗೊಂಡವು. ಅವು ಶಿವನ ನಿಷ್ಕ್ರಿಯಾತ್ಮಕ, ನಿರುಪಾಧಿಕ, ನಿರಾವರಣ, ಸ್ವಾನುಭವ ಸಂವೇದ್ಯವಾದ ಸ್ವಯಂಪ್ರಕಾಶವನ್ನು ಬಿಡದೆ ಸುತ್ತಿಮುತ್ತಿ ಕೂಡಿ ಚಿಗುರುವಂತೆ ಮಾಡಿದವು. ನಿರ್ವಿಕಾರ ಸ್ವರೂಪನಾದ ಪರಮೇಶ್ವರನಿಗೆ ಸ್ವಪ್ನದಲ್ಲಿಯೆಂಬಂತೆ ಅಹಂ, ಮಮತೆಯು ತಲೆಯೇರಿತು.

ಜೀವನಾಗಿ – ಜೀವನಿಂದ ಪ್ರಾಣಾನಿಲ, ಪ್ರಾಣಾನಿಲದಿಂದ ಚಿತ್ತ, ಚಿತ್ತದಿಂದ ಅಹಂಕಾರ, ಅಹಂಕಾರದಿಂದ ಬುದ್ಧಿ, ಬುದ್ಧಿಯಿಂದ ಮನಸ್ಸು ಜನಿಸಿತು. ಅಂತರಂಗವು ಬಹಿರಂಗವನ್ನು ನೆನೆಯಿತು.

ಹಾಗೆ ನೆನೆಯುವ ಮೊದಲೇ ಮದನನ ಪಂಚಬಾಣಗಳು ಬಂದು ಶಿವನನ್ನು ಸೇರಿ, ಅವನಲ್ಲಿ ಬೆರೆತು ಹೋಗಿದ್ದವು. ಅವು ಅವನ ಒಳಮೈ ಹೊರಮೈಗಳನ್ನು ತಿವಿದು ಸಹಸ್ರಮುಖದಿಂದ ಚಂಚಲತೆಯನ್ನುಂಟು ಮಾಡಿದವು. ಅದನ್ನು ಸಹಿಸಿಕೊಳ್ಳಲಾರದೆ ತಪೋಭರದ ಬೆಸುಗೆ ಬಿಡುವಂತೆ, ಮೈಯ್ಯ ಸಂಪುಟವು ಬಿಚ್ಚಿಕೊಂಡಿತು.

ಅಗಜೆಯು ಶಿವನನ್ನು ನೋಡನೋಡುತ್ತ ಕಾಮನ ಪುಷ್ಪಶರವನ್ನು ನೂರ್ಮಡಿಸುವಂತೆ ಪುಷ್ಪಾಂಜಲಿಯನ್ನಿತ್ತು, ಕಂಪಿಸುತ್ತ ಸಾಷ್ಟಾಂಗ ಎರಗಿದಳು. ಭೂತೇಶ್ವರನು ಹಾಗೆ ಅಡ್ಡಬಿದ್ದ ಗಿರಿಜೆಯನ್ನು ಕಂಡು – ನಾನೇಕೆ? ಈ ಮಾನಿನಿ ಯಾಕೆ? ನನ್ನ ತಪಸ್ಸಿನಲ್ಲಿ ಇದೆಲ್ಲಿಯದು? ಎಲ್ಲಿಂದ ಬಂದಿತು? ಇದು ಯಾರಿಂದಾಯಿತು? ತಪೋಭಂಗ ಹೇಗಾಯಿತು? ಎಂದು ತನ್ನ ಎಡಭಾಗದಲ್ಲಿ ಕಾಮನನ್ನು ನಸುಕೋಪದಿಂದ ನೋಡಿದನು.

ನೋಡುವ ಮೊದಲೇ ಕೋಪವು ಅತಿಶಯವಾಗಿ ಒತ್ತರಿಸಿ ವಿಸ್ತಾರಗೊಂಡು ಶಿವನ ಹಣೆಗಣ್ಣಿನಲ್ಲಿ ಕೂಡಿತು. ಬೆಳೆ ಬೆಳೆದು ಸುಳಿಸುಳಿದು, ಒಳಗೊಳಗೆ ಘುಳು ಘುಳಿ ಕುದಿಯಿತು. ಶಿವನ ಹಣೆಗಣ್ಣಿನ ಉರಿಯು ಹೊತ್ತಿಕೊಂಡಿತು. ಕಿಡಿಯಿಟ್ಟಿತು. ನಾಲ್ಕು ದಿಕ್ಕುಗಳಿಗೂ ಹಬ್ಬಿತು. ಗಗನಕ್ಕೆ ಒಗೆಯಿತು. ಹೊಂಬೆಳಗನ್ನು ಹರಡುತ್ತ ಧಗಿಲ್, ಧಗಿಲ್ ಧಗಿಲೆನುತ್ತ ಅಟ್ಟಿ ತಟ್ಟಿ ಮುಟ್ಟಿ – ಹೆದರದೆ ನಿಂತ ಹೂಬಾಣನಾದ ಕಾಮನನ್ನು ತಿಂದು ತೇಗಿತು!.

ಹಣೆಗಣ್ಣುರಿಯು ಘುಡು ಘುಡಿಸಿ, ಸಿಡಿಲ ಬಳಗವೇ ಕೋಪದಾಕಾರವನ್ನು ಹೊಂದಿತೋ ಎಂಬಂತೆ ಹೊಮ್ಮಿ ರತೀಶನನ್ನು ಅರ್ಧ ನಿಮಿಷದಲ್ಲಿ ಸುಟ್ಟು ಹಾಕಿತು!.

ಆಕಾಶದಲ್ಲಿ ಹರಿ ಇಂದ್ರಾದಿಗಳು 'ಮಹೇಶನೇ, ಜಗತ್ತಿನ ಹಿತಕ್ಕಾಗಿ ನಡೆಸಿರುವ ಈ ಕಾರ್ಯವನ್ನು ಕರುಣಿಸು' ಎಂದು ಪ್ರಾರ್ಥಿಸುವಷ್ಟರಲ್ಲಿ ಘರಿ ಘರಿ ಭುಗಿಲೆಂಬ ಉರಿಯಲ್ಲಿ ಕಾಮನು ಸುಟ್ಟು ಮುರುಟುಹೋದನು. ಕ್ಷಣದಲ್ಲಿ ಎಲ್ಲವೂ ನಡೆದು, ಯಾವುದೂ ಕಾಣದಂತಾಯಿತು!

ಅದನ್ನು ಕಂಡ ದೇವತೆಗಳು,

'ಅರರೇ, ಭುರ್ಭುಗು! ! ಭಾಪುರೇ ಭುಗು ಭುಗು! ದೇವುರೆ ಮೇಘಾನಲ! ಓಹ್ ಬೆಂಕಿಯ ಕಿಡಿ! ಭೀಕರವಾಹಾ ಛಿಣಿ ಛಿಳಿಲ್ ಛಿಟಿಲ್! ಭಲರೇ ಭಾಳಾಕ್ಷ! ಭಯಂಕರ!' ಎಂದು ಬೆರಗಾಗಿ ಉದ್ವೇಗದಿಂದ ಉದ್ಗಾರ ತೆಗೆಯುವಷ್ಟರಲ್ಲಿ ವಿರೂಪಾಕ್ಷನ ಅಕ್ಷಿ ಕಂದರ್ಪನನ್ನು ಸುಟ್ಟು ಹಾಕಿತ್ತು!

ಘರಿಲ್ ಘರಿಲೆಂಬ ಆ ಉರಿಯಲ್ಲಿ ಮದನನು ಬೆಂದ ಹುರಿಯಂತಾಗಿರಲು ಕೋಪೋದ್ರೇಕದಿಂದ ಅಭವನು ಅದನ್ನು ತುಳಿದನು. ವಿಷ್ಣುವಿನಿಂದ ಪೂಜಿತನಾದ ಪ್ರಭುವು ಜಯಶೀಲನಾದನು. ಕೋಪದಿಂದ ಆ ಕೆಂಡಗಣ್ಣ, ವಿಷಕಂಠ, ನಾಗಭೂಷಣ ಸ್ಮರನಭಸ್ಮವನ್ನು ತನ್ನ ಅಂಗಗಳಿಗೆ ಲೇಪಿಸಿಕೊಂಡು ಮುಂದೆ ನಿಂತಿದ್ದ ಗಿರಿಜೆಯನ್ನು ನೋಡದೆ, ಮಾತನಾಡಿಸದೆ, ಸೋಂಕದೆ ಅಂತರ್ಧಾನನಾದನು.

ರತಿಯ ವಿಲಾಪ

ಶಿವನ ಹಣೆಗಣ್ಣಿಂದ ಮದನನು ಉರಿದು ಹೋಗಲು ರತಿ ತುಂಬಾ ದುಃಖಿತಳಾದಳು. ಚಂದ್ರನು ಗ್ರಹಣಕ್ಕೊಳಗಾದಾಗ ಚಕೋರಿ ಕರಗಿ ಕೊರಗುವ ರೀತಿ ಅವಳು ವಿಹ್ವಲಳಾದಳು. ಅವಳ ಮನಸ್ಸು ಅಳುಕಿತು, ಶರೀರ ನಡುಗಿತು, ಕರಣಗಳು ಬಾಡಿದವು. ಅತಿಶೋಕದಿಂದ ಮತಿಗೆಟ್ಟು ನಿಲ್ಲಲಾರದೆ ಕೊರಗುತ್ತ ಓಡಿಬಂದು ಬೆಂದಿರುವ ಕಾಮನನ್ನು ಕಂಡಳು. ದುಃಖ ಒಳಗಿಂದ ಒತ್ತರಿಸಿ ಬಂದು ನುಡಿಯಲಾರದೆ ನಿಂತಳು. ಶೋಕವು ಅತಿಯಾಗಿ ದಟ್ಟೈಸಿ ಅಳುತ್ತ,

'ನನ್ನ ಮದನಾ, ಯಾವ ಹರ? ಯಾವ ತಪಸ್ಸು? ಯಾವ ತಾರಕನ ಬಾಧೆ? ಓಹ್ ಎಂತಹ ಹಣೆಗಣ್ಣು! ಎಂತಹ ಉರಿ! ನನಗೆ ಎಂತಹ ಕೋಟಲೆಯನ್ನು ತಂದೊಡ್ಡಿದೆ!

'ಓ ನನ್ನ ಎಳೆಯನೇ, ಸುಕುಮಾರನೇ, ಸದಮಳನೇ, ಸುಖಪ್ರದನೇ, ನನ್ನ ಸೊಬಗೇ ಇನ್ನಿಲ್ಲವಾದೆಯಾ? ನನ್ನ ಸುರ ತರುವೇ, ಸುಧಾರಸವೇ – ನೀನು ನಿನ್ನ ಶಕ್ತಿ ಸಾಧ್ಯತೆಯನ್ನು ಅರಿಯದೆ ಶಿವನ ನೋಸಲಕಣ್ಣ ಮುಸುಕನ್ನು ತೆರೆದೆಯಲ್ಲಾ!

'ಓ ನನ್ನ ಒಲವೇ, ದೇವತೆಗಳನ್ನು ಅತಿಘೋರ ತಪಸ್ವಿಗಳನ್ನು, ಅಪಾರ ಮಹಿಮಾ ಶಾಲಿಗಳನ್ನು, ನಿರ್ಮಲ ಚರಿತರನ್ನು ಗೆದ್ದ ದೃಢ ಚಿತ್ತನೇ, ಶಿವನ ಲಲಾಟಾಗ್ನಿಗೆ ಹೇಗೆ ಸವಿ ತುತ್ತಾದೆ?

'ಓ ನನ್ನ ಕಂತುವೇ, ನೀನು ಹೀಗಾದ ಮೇಲೆ ನಾನು ಹೇಗೆ ಉಳಿಯಲಿ? ಹೇಗೆ ನಿಲ್ಲಲಿ? ಹೇಗೆ ಉಸಿರಾಡಲಿ? ಹೇಗೆ ಬಾಳಲಿ? ಎಲ್ಲಿಗೆ ಹೋಗಲಿ? ಆಹಾ ನನ್ನ ಅಲರ್ವಿಲ್ಲ ಅರಸನೇ, ನಿನ್ನ ಹೂಬಾಣದಿಂದ ಭವನನ್ನು ಗೆಲ್ಲುವೆ ಎಂದು ನಾನು ಭಾವಿಸಿದ್ದೆ. ಆದರೆ ಹರನ ನಿಟಿಲಾಗ್ನಿಯಿಂದ ಬೆಂದುಹೋಗುವೆ ಎಂದು ನನಗೇನು ಗೊತ್ತು?

'ಹೇ ಕಂದರ್ಪ, ನೀನು ಭಸ್ಮವಾದ ಮೇಲೆ ನನ್ನ ಲಾವಣ್ಯ ಲಯವಾಯಿತು. ವಿಭ್ರಮ ವಿಲಾಸಗಳು ಮಾಯವಾದವು. ಅಯ್ಯೋ, ನನ್ನ ಜೀವ ಬೆಂದು, ಚೆಲುವು ಸತ್ತು, ಸುಖ ಹಾಳಾಯಿತು. ನನ್ನ ಉತ್ಸಾಹ ಹಿಂಗಿಹೋಯಿತು.

'ಓ ನನ್ನ ಮನೋಹರ, ನೀನು ಇಲ್ಲವಾದ ಮೇಲೆ ಶಶಿಯ ಬೆಳ್ಗೊಡೆ, ಹೂ ತುಂಬಿದ ಚೂತಗಜ, ಪಂಚಬಾಣ, ಕುಸುಮಚಾಪದ ವಿಭ್ರಮ ವಿಲಾಸಗಳು ಇನ್ನೆಲ್ಲಿ? ನನ್ನ ಸುರತ ಕಾಮಧೇನುವೇ, ಸುರತಾಂಬೋದಿ ಚಂದ್ರನೇ, ಸುರತ ಕಮಲದ ಸೂರ್ಯನೇ, ಸುರತ ಸಂಕುಲ ಪರಮಾರಾಧನೇ ಎಲ್ಲಿ ಅಡಗಿದೆ?

'ಎಲೈ ಮನ್ಮಥನೇ, ಲಕ್ಷ್ಮಿಯ ಮಗನಾಗಿಹುಟ್ಟಿ ಅಖಿಲ ಲೋಕಾಧಿಪತಿಯೆನಿಸಿ ಬಾಳಿದ ನೀನು – ಪುರಹರನ ಹೊಳೆಯುವ ಕಣ್ಣುರೆಪ್ಪೆ ಬಿಚ್ಚಿದ ಕ್ಷಣಾರ್ಧದಲ್ಲಿ ಅಳಿದುಹೋದೆ! ಹಂಸದತುಪ್ಪಳಿನ ಹಾಸಿಗೆಯೇ ಕಠಿಣವೆನ್ನುತ್ತಿದ್ದ ನೀನು ಹಣೆಗಣ್ಣೆಂಬ ಅರಮನೆಯ ಭಯಂಕರವಾದ ಮಂಚದಲ್ಲಿ ಹೇಗೆ ಮಲಗಿದೆ?

'ಹಾ ನನ್ನ ಪ್ರಾಣೇಶ, ಕುಸುಮದ ಆಭರಣಗಳು ಹೊರೆಯೆಂದು ಹೇಳುತ್ತಿದ್ದ ನೀನು – ಬಿಸುಗಣ್ಣಿನ ಹೊಳೆಯುವ ಕೋಪದ ಬಿಸಿತೊಡಿಗೆಯನ್ನು ಹೇಗೆ ಸೈರಿಸಿಕೊಂಡೆ?' ಎಂದು ರತಿಯು ಪಂಚಬಾಣನ ಸರ್ವಗುಣಗಳನ್ನು ನೆನೆದು ಸೈರಿಸಲಾರದೆ ಮತ್ತೆ ಶೋಕಾರ್ತಳಾದಳು.

'ಹೇ ನನ್ನಕಾಮ, ಹಸಿವೆನ್ನದೆ, ತೃಷೆ ಅರಿಯದೆ, ದೆಸೆಯರಿಯದೆ ಹಲವು ಕಾಲ ಲಿಂಗವನ್ನು ಭಕ್ತಿಯಿಂದ ಪೂಜಿಸಿದ ಫಲವೇ ಕಿಚ್ಚಿನಲ್ಲಿ ಬೇಯುವಂತಾಯ್ತೇ?

'ಹೇ ನನ್ನೊಡೆಯ, ಸುರತಾಯಾಸದಲ್ಲಿ ನಿದ್ರೆಗೆಜಾರಿ ಸುಖದಲ್ಲಿರುವಾಗ ನೀನು ಮರೆಯಾಗಿ ನನ್ನನ್ನು ನೋಯಿಸುತ್ತಿದ್ದ ರೀತಿ – ಇಂದು ನಿಜವಾಗಿ ಹೋಯಿತು. ನನ್ನರಸ ಬೆಳಗಾಯಿತು ಏಳು. ಕನ್ನಡಿಯನ್ನು ನೋಡು. ಹಂಸೆಗಳನ್ನು ಆಡಿಸಿ, ಕೋಗಿಲೆಯ ನಾದವನ್ನು ಆಲಿಸು. ನನ್ನ ನುಡಿ ಕೇಳುತ್ತಿಲ್ಲವೇ? ಸುಮ್ಮನಿರುವುದೇಕೆ?

'ಹೇ ಮದನರಾಜ – ಪನ್ನಗಭೂಷಣ, ವಿಷಸಂಪನ್ನನ ನಿಷ್ಠುರ ಗುಣಗಳು ನಿನ್ನನ್ನು ಉರಿಸಿದ್ದು ಸರಿ. ಆದರೆ ನಿನ್ನ ಸದ್ಗುಣಗಳು ನನ್ನನ್ನು ಆವರಿಸಿ ಉರಿಸುತ್ತಿರುವುದೇಕೆ?' ಎಂದು ರತಿಯು ಕುಸುಮ ಕೋದಂಡನ ಸುಧಾಮಯ ಸದ್ಗುಣಗಳನ್ನು ನೆನೆದು, ಹಲುಬಿ ಹಂಬಲಿಸಿ ದಿಕ್ಕುಗಾಣದಾದಳು.

ನನ್ನ ವದನ ಸರೋಜ ಭೃಂಗನೆ ಅದೆತ್ತಲಡಂಗಿದೆ?

'ಓ ನನ್ನ ಮದಗಜವೇ, ಎಲ್ಲಿ ಹೋದೆ? ವರಮೂರ್ತಿ ಎಲ್ಲಿ ಮಾಯವಾದೆ? ನನ್ನ ವದನಸರೋಜದ ಭೃಂಗವೇ ಎಲ್ಲಿ ಅಡಗಿದೆ? ಮಧುಮಿತ್ರನೇ ಎಲ್ಲಿ ಲಯವಾದೆ?' ಎಂದು ವಲ್ಲಭರಹಿತಳಾದ ರತಿಯು ವ್ಯಾಕುಲ ಚಿತ್ತಳಾಗಿ ನಿಟ್ಟುಸಿರಿಡುತ್ತ ಹೊಟ್ಟೆ ಹೊಸೆದುಕೊಂಡು, ಕೈಯೆತ್ತಿ ದಿಕ್ಕು ದಿಕ್ಕುಗಳನ್ನು ನೋಡಿ ನೋವಿನಿಂದ ಬೆಂದಳು.

'ಅಯ್ಯೋ, ಶಿವಧೋ ಶಿವದೋ! ವಿಷಕಂಠನಧಾಳಿ ನನ್ನ ಕುಸುಮಾಯುಧನನ್ನು ಆವರಿಸಿತು. ನನ್ನ ನೋವನ್ನು ಅರಿಯುವ ದಯಾಳುಗಳಿಲ್ಲವೇ?' ಎಂದು ಆರ್ತನಾದದಲ್ಲಿ ಮೊರೆಯಿಡುತ್ತ ಹೇಳಿದಳು:

'ನೆಲವೇ, ನಭವೇ, ಅಗ್ನಿಯೇ, ಜಲವೇ, ರವಿಯೇ, ಶಶಾಂಕನೇ, ವಾಯುವೇ– ಬಲವಳಿದ ಅನಾಥೆ, ಪಾಪಿಷ್ಠೆಯಾದ ನನ್ನನ್ನು ನೋಡಿ. ರಕ್ಷಿಸಿ. ವನದೇವತೆಯರೇ, ದಿಗ್ದೇವತೆಗಳೇ ನನ್ನನ್ನು ಕಾಪಾಡಿ.'

ರತಿಯು ದಿಕ್ಕು ದಿಕ್ಕಿಗೆ ದೃಷ್ಟಿಹರಿಸಿ, ಕರೆಕರೆದು ಬಾಯಾರಿದಳು. ನಿಲ್ಲಲಾರದೆ ಧೋಂಕನೆ ಕುಳಿತಳು. ದುಃಖದಿಂದ ಹೊರಹೊಮ್ಮಿದ ಕಣ್ಣೀರು ಕೋಡಿ ಹರಿಯಲು ಮತ್ತೆ ಅತ್ತತ್ತು ಕಂಠ ಬಿಗಿಯಿತು. ಕಣ್ಣು ಕೆಂಪೇರಿತು. ಬಿಕ್ಕಿನಲ್ಲಿ ಒತ್ತರಿಸಿ ಬರುವ ನುಡಿ ಶಿಥಿಲವಾಗಿ ಶೋಕಾಗ್ನಿಯಲ್ಲಿ ಬೆಂದು ಸೀದು ಸೀಕರಿಗೊಂಡವು.

ಮನ್ಮಥನು ಉರಿದುಹೋದ ದುಃಖಾಗ್ನಿಯಿಂದ ಅವಳ ಚಿತ್ತ ಹೊತ್ತಿತು. ಅಹಂಕಾರಕ್ಕೆ ಹೊಗೆ ಆವರಿಸಿತು. ಬುದ್ಧಿ ಉರಿದು, ಮನಸ್ಸು ಬೆಂದು – ಅವಳು ಉಸುರಿದ ಉಸುರಿಗೆ ಅಕ್ಕಪಕ್ಕದ ಪೊದೆಗಿಡ ಬಳ್ಳಿಗಳು ಘಳಿಲನೆ ಘರಿ ಘರಿ ಎಂದು ಉರಿದು ಹೋದವು!.

ಗ್ರಹಣಕ್ಕೆ ಅಂಜಿದ ಚಂದ್ರನ ಬಿಂಬವು ನೆಲಕ್ಕೆ ಬೀಳಲು, ತಕ್ಷಣ ಬೆಂಬಿಡದೆ ಕಡುವೇಗದಿಂದ ಬಂದ ರಾಹುಮಂಡಲವು ಅದನ್ನು ಪೂರ್ತಿ ನುಂಗಿ ಹಾಕಿದಂತೆ; ಅವಳ ಮುಡಿಕಟ್ಟು ಕೆದರಿ ಮುಖಮಂಡಲವನ್ನು ಮುಸುಕಿತು! ಅವಳು ಹಣೆಯನ್ನು ನೆಲಕ್ಕೆಚಚ್ಚಿ ನೋವಿನಿಂದ ಗೋಳಿಟ್ಟಳು. ಅದು ಪಶುಪಕ್ಷಿ ಮೃಗ ಬಳ್ಳಿ ಪೊದೆಗಳಲ್ಲಿ ಕರುಣೆ ಉಕ್ಕಿಸಿತು!

ದುಃಖದಿಂದ ಧೈರ್ಯಗೆಟ್ಟು ಮೂರ್ಛೆ ಹೋದಳು. ಕೊರಳಲ್ಲಿ ಪ್ರಾಣ, ಕಣ್ಣಲ್ಲಿ ಕಾರ್ಪಣ್ಯ, ಮುಖದಲ್ಲಿ ನಿಟ್ಟುಸಿರು, ನಾಲಗೆಯಲ್ಲಿ ವಿಕಳತೆ, ಮನಸ್ಸಿನಲ್ಲಿ ಪರವಶತೆ,

ತನುವಿನಲ್ಲಿ ಚೈತನ್ಯವನ್ನು ಹಿಡಿದು – ಶೋಕದಲ್ಲಿ ಮುಳುಗಿ, ದೈನ್ಯದಲ್ಲಿ ತೋಯ್ದು ಹೋದಳು. ದುಃಖವೇ ರೂಪುಗೊಂಡಂತೆ, ಬಾಹ್ಯಜ್ಞಾನವಿಲ್ಲದೆ ನೆಲಕ್ಕೆ ಒರಗಿದಳು.

ರತಿಯ ನೆರವಿಗೆ ಗಿರಿಜೆ

ಆಗ ಬಂದ ಗಿರಿಸುತೆಯ ರತಿಯು ಸ್ಥಿತಿಯನ್ನು ಕಂಡು ಬೆರಗಾದಳು. ಕೃಪಾಕರಳಾದ ಅಗಜೆಯು ಅವಳ ಬಳಿಹೋಗಿ, ಅವಳ ಮೈ ಮುಖವನ್ನು ತಡವಿದಳು. ಆ ಮಧುರ ಸೊಂಕಿಗೆ ಚೇತರಿಸಿಕೊಂಡು ಕಣ್ಣುತೆರೆದ ರತಿಯು ಪಾರ್ವತಿಯನ್ನು ಚೆನ್ನಾಗಿ ನೋಡುತ್ತ,

'ಹೇ ದಯಾಪರೆ, ಭುವನೈಕ ಮಾತೆ, ನನ್ನ ದುಃಖದ ದಾರುಣಸ್ಥಿತಿ ನೋಡು' ಎಂದು ಹೇಳುತ್ತ ನಿಲ್ಲಲಾರದೆ ಗಿರಿಜೆಯ ಪಾದದ ಮೇಲೆ ಬಿದ್ದು ಹೊರಳಾಡಿ, ಅತ್ತು ಗೋಳಾಡುತ್ತ ಮತ್ತೆ ನುಡಿದಳು 'ತಾಯೇ ಕರುಣಿಸು. ನೀನೇ ನನಗೆ ಆಸರೆ, ದಯೆ ದೋರಿ ನನ್ನನೋವನ್ನು ಪರಿಹರಿಸು. ನನ್ನನ್ನು ಕಾಪಾಡು.'

'ರತಿಯೇ, ದುಃಖಿಸಬೇಡ. ಶೋಕರಸ ತಗ್ಗಿಸಿಕೊ, ನಿನ್ನ ವಲ್ಲಭನಿಗೆ ಮರು ಜೀವ ನೀಡಲು ಈಶ್ವರನನ್ನು ಪ್ರಾರ್ಥಿಸುತ್ತೇನೆ.'

'ತಾಯೇ, ಎಲ್ಲವೂ ನಿನ್ನ ಕೃಪೆ.'

'ನಿನಗೆ ಮತ್ತೆ ಪರಮ ಸಂತೋಷವಾಗುವಂತೆ ಮಾಡುತ್ತೇನೆ' ಎಂದು ರತಿಗೆ ಅಭಯುವನ್ನು ಕೊಟ್ಟಳು. ಆ ಮಾತಿಗೆ ರತಿಯ ಶೋಕವು ನಂದಿ, ದುಃಖವು ಮರೆಯಾಯಿತು.

ಈಶನಂ ವಿಪುಳ ನಿಶ್ಚಲನಂ ಚಲದಿಂದ ತಂದಪೆಂ

ರತಿಗೆ ಅಭಯವನ್ನು ಕೊಟ್ಟ ಪಾರ್ವತಿಯು – ಅಂತಕಹರನು ತಾನು ಎದುರಿದ್ದರೂ ದೃಷ್ಟಿಹರಿಸದೆ ಹೋದರೀತಿಯನ್ನು ನೆನೆದು ಗಾಢವಾಗಿ ಚಿಂತಿಸಿದಳು. ತನ್ನ ಮನದ ಮುನಿಸಿನ ಭಾವವನ್ನು ಜಯೆ ವಿಜಯೆಯರೊಡನೆ ಹಂಚಿಕೊಂಡಳು,

'ಎಲೈ ಸಖಿಯರೇ, ಪರಶಿವನೇ ನನ್ನ ಗತಿ ಮತಿ ಪತಿ, ನನ್ನ ಆತ್ಮತತ್ತ್ವ ಎಂದು ಉತ್ಸಾಹದಲ್ಲಿ ಅರ್ಚಿಸುತ್ತಿದ್ದೆನು. ನನ್ನ ಹೆತ್ತವರ ಪ್ರೀತಿಯನ್ನು ಬದಿಗಿಟ್ಟು, ಅವನಿರುವಲ್ಲಿಗೆ ಆನಂದದಿಂದ ಓಡೋಡಿ ಬಂದೆನು. ಕರುಣಾಮೂರ್ತಿ ಶಿವನನ್ನೇ ಮನದ ಮಿಡಿತವಾಗಿಸಿ ಕೊಂಡೆನು.'

'ನಮ್ಮವ್ವ ನಗತನೂಜೆ, ನಿನ್ನ ನೆರಳಾಗಿಬಂದ ನಾವು ಅದನ್ನು ಚೆನ್ನಾಗಿ ಬಲ್ಲೆವು.'

'ಆದರೆ, ಕಾಮವೈರಿಯು ನನ್ನನ್ನು ಏನೆಂದೂ ಮಾತಾಡಿಸದೆ ರಜತಗಿರಿಗೆ ಹೊರಟು ಹೋದನು.'

'ಆ ನಿನ್ನ ನೋವು ನಮ್ಮದಾಗಿದೆ ತಾಯಿ.'

'ಅದರಿಂದಾಗಿ, ಶಿವನೇ ನಾನು ಇರುವಲ್ಲಿಗೆ ಬರುವಂತೆ ಮಾಡುತ್ತೇನೆ.'

'ತಾಯಿ ಅದು ಸಾಧ್ಯವೇ?'

'ಸಾಧ್ಯ. ಜಗತ್ತೇ ಬೆರಗಾಗುವಂತೆ ನಿಶ್ಚಲಮನಸ್ಸಿನಿಂದ ಉಗ್ರತಪಸ್ಸನ್ನು ಕೈಗೊಳ್ಳುತ್ತೇನೆ. ಬಿಸಿಲು ಮಳೆ ಶೀತಗಳನ್ನು ಲೆಕ್ಕಿಸದೆ ಬೆಟ್ಟದತುದಿಯಲ್ಲಿ, ದಟ್ಟ ಕಾಡುಗಳ ನಡುವೆ, ಸರೋವರದತಡಿಯಲ್ಲಿ ಕುಳಿತು ಘನ ನಿಶ್ಚಲನನ್ನು ಛಲದಿಂದ ತರುತ್ತೇನೆ' ಎಂದು ಸಖಿಯರಿಗೆ ಹೇಳಿ ಉಗ್ರತಪಸ್ಸನ್ನು ಕೈಗೊಳ್ಳಲು ಹೊರಟಳು.

* * * * *

ಪಾರ್ವತಿಯ ತಪಸ್ಸು

ಗಿರಿಜೆಯು ತಪಸ್ಸಿಗೆ ಯೋಗ್ಯವಾದ ಸ್ಥಳವನ್ನು ಆಯ್ಕೆ ಮಾಡಿಕೊಂಡಳು. ಬರುವ ಬೇಸಗೆಯಲ್ಲಿ ಪರ್ವತಾಗ್ರದಲ್ಲಿ ನಿಂತು ತಪಸ್ಸನ್ನು ಆಚರಿಸಲು ತೀರ್ಮಾನಿಸಿದಳು. ತನ್ನ ಸಖಿಯರಾದ ಜಯೆ ವಿಜಯೆಯರ ಮುಖವನ್ನು ನೋಡಿದಳು. ಅವರು ಆದರದಿಂದ ಗಿರಿಜೆಯ ಜಟಾರಚನೆಯಲ್ಲಿ ನಿರತರಾದರು. ಮುಗುಳ್ನಗೆಯ ಆ ಸಖಿಯರು ಗಿರಿಜಾತೆಗೆ ವರವಿಭೂತಿಯನ್ನು ಅಂಗಗಳಿಗೆ ಸವರಿದರು.

ಸುರಸತಿಯರು ಪ್ರೇಮಾದರದಿಂದ ಗಿರಿಜೆಗೆ ವರವಿಭೂತಿಯನ್ನು ಲೇಪಿಸಿ ಹಿಗ್ಗಿದರು. ಸಖಿಯರು ಪ್ರೀತಿಯಿಂದ ನಾರುಮಡಿಯನ್ನುಡಿಸಿದರು.

ರುದ್ರಾಕ್ಷಿಗಳು ಅಕ್ಷಯಸುಖವನ್ನು, ಸುಕೃತಫಲವನ್ನು ನೀಡುತ್ತವೆ. ಅವು ರಕ್ಷೆ ಎಂದು ಹೇಳಿದ ಮಾನಿನಿಯರು ರುದ್ರಾಕ್ಷಿಗಳನ್ನು ಪಾರ್ವತಿಗೆ ತೊಡಿಸಿದರು. ಭಕ್ತಿ ಜ್ಞಾನ ವೈರಾಗ್ಯ ಯುಕ್ತವಾದ ತಪಸ್ಸಿನ ಅಲಂಕಾರಗಳನ್ನು ತುಂಬು ಒಲವಿನಿಂದ ಮಾಡಿದರು.

ಗಿರಿಜೆಯು ತಪಸ್ಸಿಗೆ ನಿಂತ ರೀತಿಯು – ಶಶಿಕಳೆಯು ತನಗೆ ಕಳಂಕ ಬರುವ ಮೊದಲೇ ನಭದಿಂದ ಇಳಿದುಬಂದು; ಅದು ಬಾರದಿರುವಂತೆ ಶಂಭುವನ್ನು ಕುರಿತು ತಪಸ್ಸು ಮಾಡುತ್ತಿದೆಯೋ ಎಂಬಂತಿತ್ತು.

ಶಂಕರನ ಪ್ರೇಮಮನೋನ್ಮಗ್ನೆಯಾದ ದೃಢಚಿತ್ತದ ಗಿರಿಜೆಯು ಪಂಚಾಗ್ನಿಯ ನಡುವೆ ತಪೋನಿರತಳಾದಳು. ಕಾಡುಗಿಚ್ಚು, ಸೂರ್ಯನ ಬಿಸಿಲಿಗೆ ಕಾಯ್ದ ರವಿಕಾಂತ ಶಿಲೆಗಳ ಅಗ್ನಿ, ಅತಿ ಶಾಖವನ್ನುಂಟು ಮಾಡುವ ಜಠರಾಗ್ನಿ, ಮೇಲೆ ಉರಿಯುವ ಸೂರ್ಯನ ತೀವ್ರಾಗ್ನಿ, ಬಂದು ಆವರಿಸುತ್ತಿರುವ ಬೇಸಗೆಯ ಅಗ್ನಿ ಎಂಬ ಪಂಚಾಗ್ನಿಗಳು ಅವಳನ್ನು ಸುತ್ತಿದ್ದವು.

ನಿರ್ಮಲ, ನಿರಾವರಣ, ನಿರ್ಮಾಯ, ನಿತ್ಯನಾದ ಶಿವನನ್ನು ಅಗಜೆಯು ತನ್ನ ಹೃದಯಕಮಲದಲ್ಲಿ ನಿಲ್ಲಿಸಿಕೊಂಡಳು. ಮಾರ್ತಾಂಡಸಂಕುಲ ತೇಜೋನಿಧಿಯಾದ ಅವಳು ಮುಖವನ್ನು ಮೇಲೆತ್ತಿ ಉಗ್ರ ತಪಸ್ಸಿನಲ್ಲಿ ನಿರತಳಾದಳು.

ಅಸದೃಶ ಧೈರ್ಯ, ಅನುಪಮತಪದ, ಶಂಕರನ ಸುಖೈಕಭಾರ್ಯೆಯಾದ ಪಾರ್ವತಿಯು ಹೇಮಕೂಟಾಗ್ರದ ಮೇಲೆ ನಿಟಿಲಾಗ್ನಿ ಹೊಂದಿದ ಶಿವನನ್ನು ಲೋಕ ಕಲ್ಯಾಣಕ್ಕಾಗಿ ಧ್ಯಾನಿಸುತ್ತ ತನ್ನ ಬಲದಿಂದಲೂ, ಛಲದಿಂದಲೂ ರವಿಕಾಂತ ಶಿಲೆಯನ್ನು ಮೆಟ್ಟಿ ನಿಂತಳು. ಆ ಉಗ್ರತಪಸ್ಸು, ಮೂರು ಲೋಕಗಳಿಗೂ ಹಬ್ಬಿತು. ಆಗ ಅಲ್ಲಿ ಮೃಗಪಕ್ಷಿಗಳ ಸುಳಿವು ಇಲ್ಲವಾಯಿತು. ಗಾಳಿ ಸಂಚಲಿಸದಾಯಿತು. ಖೇಚರರು ಆ ಕಡೆ ಬಾರದಾದರು. ಅವಳ ಅತಿಶಯವಾದ ದೀಪ್ತಿಯಿಂದೊಡಗೂಡಿದ ತಾಪಕ್ಕೆ ಅಂಜಿದ ಸೂರ್ಯನು ಆ ಪ್ರದೇಶದಿಂದ ದೂರ ಸರಿದು ಹೋದನು!

ಅಸಮಾನ, ಅಚಲ, ಅದ್ಭುತ ಪ್ರಭೆಯ, ಲೋಕಕ್ಕೆ ಶುಭದಾಯಕವಾದ ಆ ತಪವನ್ನು ಹೆಸರಿಸುವಂತಿಲ್ಲ, ನಿಟ್ಟಿಸುವಂತಿಲ್ಲ, ನೋಡುವಂತಿಲ್ಲ ಎಂಬಷ್ಟು ಉಗ್ರವಾಗಿತ್ತು.!

ಜಡೆಗಳ ಬೆಡಗಿನ, ಭಸ್ಮ ಹಾಗೂ ರುದ್ರಾಕ್ಷಿ ಭೂಷಿತಳಾದ, ನಾರುಮಡಿಧರಿಸಿದ ಅಗಜೆಯ ತಪೋಜ್ವಾಲೆಯು – ದಿಕ್ಕುಗಳ ಕಾವನ್ನು ಏರಿಸುತ್ತ, ತೃಣಲತೆಗಳನ್ನು ಸೀಸಿ

ಕಪ್ಪಾಗಿಸಿತು. ಭೂಮಿಯ ಶಾಖವನ್ನು ಹೆಚ್ಚಿಸಿ ನೀರುತುಂಬಿದ್ದ ಜಲಾಶಯಗಳನ್ನು ಒಣಗಿಸುತ್ತ, ಮರಗಿಡಗಳನ್ನು ಸುಟ್ಟುರಿಸಿತು. ಮೃಗಸಂಕುಲವನ್ನು ಬೇಯಿಸುತ್ತ, ಬೆಟ್ಟವನ್ನು ಕಾವಿನಿಂದ ಸೀಳುತ್ತ, ಕಾಡ್ಗಿಚ್ಚನ್ನು ಹಬ್ಬಿಸಿತು.

ಬಿಸಿಲ ಬಯಲನ್ನು ಹೀರಿ ಬಳಲಿದ ಹರಿಣಗಳು

ಆ ಕಡು ಬೇಸಗೆಯಲ್ಲಿ ಸೂರ್ಯನು ಸೃಷ್ಟಿಸಿದ ಮರೀಚಿಕಾಜಲವನ್ನು ನೀರೆಂದು ಭ್ರಮಿಸಿ ಓಡಿ ಬಂದ ಹರಿಣಗಳು ಬಿಸಿಲ ಬಯಲನ್ನು ಹೀರಿ ಬಳಲಿದುವು. ಮರದ ಅಡಿಯಲ್ಲಿ, ಬೆಟ್ಟದ ತಪ್ಪಲಲ್ಲಿ, ಬಟ್ಟಬಯಲಲ್ಲಿ, ಅಂಬರದಲ್ಲಿ ಕರಿಯ ಬಿಸಿಲು, ಉರಿಯಬಿಸಿಲು ಅಚ್ಚರಿಯಬಿಸಿಲು, ಪಿರಿಯಬಿಸಿಲು, ಅಖಂಡಬಿಸಿಲು ವ್ಯಾಪಿಸಿತು.

ಗ್ರೀಷ್ಮನ ಕಾಡ್ಗಿಚ್ಚಿಗೆ ಸುಟ್ಟ ಒಲೆಯಂತಾಗಿದ್ದ ನೆಲದ ಮೇಲೆ ಆನೆಯೊಂದು ಕಾಲಿಡಲು ಅದರ ಕಾಲು ಸೀದು ಹೋಯಿತು! ಅದು ಮುಂದೆ ಚಲಿಸಲಾರದೆ ತಾಪಕ್ಕೆ ತನ್ನಸೊಂಡಿಲನ್ನು ಎತ್ತಿ ಘೀಳಿಟ್ಟಿತು. ಒಲೆದೊಲೆದು ಚಲಿಸಲಾರದೆ ಜೋತುಬಿದ್ದು ಬೆಂದುಹೋಯಿತು! ಬೇಸಗೆಯ ಬಿಸಿಯ ನಾಲಗೆಗೆ ಸೂರ್ಯನ ಮೈಯಲ್ಲಿ ಬೊಕ್ಕೆಗಳೆದ್ದವು! ಅಗ್ನಿಯ ತನುವಿನಲ್ಲಿ ಮಹಾ ಬೊಕ್ಕೆಗಳಾದವು!

ಆ ಬೇಸಗೆಯು ರವಿಕಿರಣವನ್ನೇ ಚುರ್ ಚುರ್ ಎಂದು ಸುಟ್ಟಿತು. ಕಾಯ್ದು ಉಕ್ಕಿದ ಬಿಸಿಯತೆರೆ ಅಪ್ಪಳಿಸುತ್ತ ನೊರೆಗಟ್ಟಿ ಕುಕ್ಕುಳಕುದಿವ ಬಿಸಿನೀರಿನಲ್ಲಿ ನಿಲ್ಲಲಾರದೆ ಜೀವನ ಇಂಗಿದಂತಾಗಲು – ಒಂದು ಕಿರುಹಳ್ಳದಲ್ಲಿಯ ಮೊಸಳೆಯು ತುಂಬಾ ತೊಂದರೆಗೊಳಗಾಗಿತ್ತು. ಸೂರ್ಯನ ಬಿಸಿಯ ಬಿಂಬದಿಂದ ಹೊಮ್ಮಿದ ಬಿಸಿಲಬೆಂಕಿಗೆ ಮರಗಳು ಉರಿದು ಹೋದವು. ಬಳ್ಳಿಗೊಂಡ ಬೇಗೆಯಿಂದ ಕುಳಿತುಕೊಳ್ಳಲಾರದೆ ಹಾರಿದ ಪಕ್ಷಿಗಳ ರೆಕ್ಕೆ ಸೀದು ನೆಲಕ್ಕೆಬಿದ್ದು ಮಳಲಿನಲ್ಲಿ ಹುರಿದಂತಾದವು. ಸಮುದ್ರದಒಳಗಿನ ಬೆಂಕಿ ವಡಬಾಗ್ನಿಯು ಬಾಯಾರಿ ನೀರನ್ನೆಲ್ಲ ಹೀರಲು ಸಮುದ್ರ ಒಣಗಿಹೋಯಿತೋ ಎಂಬಂತೆ ಬೇಸಗೆ ಅತಿಉಷ್ಣವಾಗಿತ್ತು.

ಗಿರಿಜೆಯ ಪಾದಗಳಮೇಲೆ ಸೂರ್ಯಕಾಂತ ಶಿಲೆಗಳಿಂದ ಪ್ರಜ್ವಲಿಸುವ ಕಿಡಿಗಳು ಬೀಳುತ್ತಿದ್ದು, ದಾವಾಗ್ನಿ ಶರೀರವನ್ನು ಸುಡುತ್ತಿತ್ತು. ಶರೀರದೊಳಗಿನ ಜಠರಾಗ್ನಿಯಪ್ರಭೆ ಅಧಿಕವಾಗುತ್ತಿದ್ದು ಸೂರ್ಯನ ಪ್ರಖರಕಿರಣ ತಾಗುತ್ತಿದ್ದವು. ಅವುಗಳಿಗೆಲ್ಲ ಸ್ವಲ್ಪವೂ ಅಳುಕದೆ ತಪೋನಿರತಳಾಗಿದ್ದು ಪಾರ್ವತಿಯು ಬೇಸಗೆಯನ್ನು ಕಳೆದಳು.

ಹರ್ಷದ ವರ್ಷಧಾರೆ

ಆ ಸಮಯದಲ್ಲಿ ಸಕಲಕಲಾ ಕೋವಿದೆಯರಾದ ಜಯೆ ವಿಜಯೆಯರು ನಮಸ್ಕರಿಸಿ ಹೇಳಿದರು,

'ತಾಯಿ ಗಿರಿಜೆಯೇ, ಬೇಸಗೆಯ ಮದ ಉಡುಗಿದೆ. ಮೇಘಗಳು ಅಲ್ಲಲ್ಲಿ ಕಾಣುತ್ತ ಸುರುಳಿ ಉರುಳುತ್ತಿವೆ. ಮಿಂಚು ಹೊಳೆಯುತ್ತಿದೆ. ನವಿಲುಗಳು ಕುಣಿಯುತ್ತಿವೆ. ಕದಂಬವೃಕ್ಷಗಳ ಸುವಾಸನೆಯಿಂದ ಗಾಳಿ ಒಂದೆರಡು ಅಡಿ ಇಡುತ್ತಿದೆ. ಬೇಸಗೆಯು ಹೋಗಿ ಮುಂಗಾರು ಮುಖ ತೋರಿದೆ, ಮರದ ತಣ್ಣನೆಯ ನೆರಳಿನಲ್ಲಿ ನಿಷ್ಕಪಟ ವಿಪುಳ ತಪವನ್ನು ನಡೆಸುವುದು.'

ಆ ನುಡಿ ಕೇಳಿ ಅತ್ಯನುಪಮ ಶೈವಪ್ರತಾಪ ತೇಜೋನಿಧಿಯಾದ ಗಿರಿಜೆಯು

ವಿಜಯದಿಂದ ನಡೆದು ಬಂದಳು. ಆಲದ ಮರದ ನೆರಳಿನಲ್ಲಿ ನಿಂತು ತಪೋಮಗ್ನೆಯಾದಳು.

ಕಾರ್ಮೋಡಗಳು ಕರಿಯಂತೆ, ಗಿರಿಯಂತೆ ಧರೆಯಂತೆ ಆಗಸದಲ್ಲಿ ಕವಿದು ಬಂದವು. ಘುಳು ಘುಳು, ಘುಳ ಘುಳ, ಘುಡು ಘುಡು ಎಂದು ಗುಡು ಗುಡುಗಿ ಘಾರ್ಘಳಂ ದಥಂ, ಧಾಂದಡ, ಛಿಂ ಛಿಳಿ ಎಂದು ಮಿಂಚು ಸಿಡಿಲುಗಳು ಆರ್ಭಟಿಸಿದವು. ಉತ್ತಮವಾದ ಆ ಮೋಡಗಳಿಂದ ಸುರಿವ ಮಳೆಯಲ್ಲಿ ಭೂಮಿ ಆಕಾಶ ದಿಕ್ಕುದೆಸೆಗಳು ಕಾಣದಂತೆ ಇಳೆಗೆ ಹರ್ಷದ ವರ್ಷ ಧಾರೆಯಾಯಿತು.

ಕದಂಬ ವೃಕ್ಷಗಳು ಸೊಂಪಾಗಿ ಬೆಳೆದವು. ಕೇತಕಿ ಹೂ ಬಿಟ್ಟಿತು. ಶುಕ ಸಂತತಿಯು ಘೋಷಣೆ ಮಾಡಲು, ಕೋಗಿಲೆಯು ನಾದದ ತಾಳ ಹಾಕಲು, ಕದಂಬಪುಷ್ಪ ರಸವನ್ನು ಸವಿದ ದುಂಬಿಗಳು ಹಾಡುತ್ತಿರಲು, ನವಿಲು ರೆಕ್ಕೆಗಳನ್ನು ಅರಳಿಸಿ ಮೇಘನಾದಕ್ಕೆ ಸರಿಜೋಡಿಯೆನಿಸಿ ತಲೆಯೆತ್ತಿ ಉನ್ಮುಖವಾಗಿ ಕತ್ತುಕೊಂಕಿಸಿ ಕೂಗಿತು. 'ಪೆಕ್ಕಣ' ವೆಂಬ ನೃತ್ಯ ಭಂಗಿಯಲ್ಲಿ ನರ್ತಿಸಿತು.

ಗಗನಾಂಗನೆಯು ತನ್ನ ಮುಗಿಲಗಲದ ಹಸ್ತದಿಂದ ವರ್ಷರಾಜನಿಗೆ ಇಳೆಯನ್ನು ಧಾರೆಯೆರೆದು ಕೊಡುತ್ತಿರುವಳೋ ಎಂಬಂತೆ ಗಗನದಲ್ಲಿ ಧಾರಾಕಾರ ಮಳೆ ಸುರಿಯಿತು! ಆಗ ಬಿದ್ದ ಆಲಿಕಲ್ಲುಗಳು ಪಾಣಿಗ್ರಹಣವಾದ ಭೂವನಿತೆಗೆ ಗಗನಾಂಗನೆಯು ಸೂಸಿದ ಮುತ್ತಿನ ಸೇಸೆಯಂತಿತ್ತು!.

ಅಂಬರವನ್ನು ಒತ್ತರಿಸುತ್ತ, ದಿಕ್ಕುಗಳನ್ನು ಮುತ್ತುತ್ತ, ಧರೆಯನ್ನು ವ್ಯಾಪಿಸಿ ಕತ್ತಲಿಸುತ್ತ ಸೋನೆಯು – ಇರುಳೂ, ಹಗಲೂ ಸುರಿಯಿತು. ಇಳೆಯನ್ನು ಸಮುದ್ರವೇ ಕವಿದಂತೆ ವರ್ಷಧಾರೆಯಾಯಿತು. ಮಳೆ ಸುರಿದು ಇಳೆ ತಣಿದು ಬೆಳೆ ಬಂದಿತು. ಕಾನನಗಳಲ್ಲಿ ಪ್ರವಾಹ ಉಂಟಾಯಿತು. ಶಿಲೆಗಳು ನೆನೆದವು.

ಅಭವನನ್ನು ಕುರಿತು ತಪಸ್ಸಿನಲ್ಲಿರುವ ಭವಾನಿಗೆ ಕಲ್ಪತರುವಿನ ಫಲರಸದಿಂದ ಅಭಿಷೇಕ ಮಾಡುವ ನವ ವೈಭವದಂತೆ ಆಲದ ಮರವಿತ್ತು. ಗಿರಿಜೆಯು ಮೋಡಗಳ ಭೀಕರತೆಗೆ, ಮಿಂಚುಗಳ ಚಂಚಲಗೊಳಿಸುವ ಪ್ರಕಾಶಕ್ಕೆ, ಸಿಡಿಲ ಸಡಗರಕ್ಕೆ ಕೊಂಕಲಿಲ್ಲ. ಭಾರೀಮಳೆಯ ಧಾರೆಗೆ, ಶೀತಕ್ಕೆ, ಬಿರುಗಾಳಿಗೆ ಬೆಚ್ಚಲಿಲ್ಲ. ಹೆಮ್ಮೋಡಗಳ ಕತ್ತಲೆಗೆ, ಕ್ರೂರಮೃಗಗಳ ರುದ್ರತೆಗೆ, ಉಗ್ರ ಸರ್ಪಗಳ ಅದ್ಭುತಕ್ಕೆ ಬೆದರಲಿಲ್ಲ. ಹಾಗೆ ಪಾರ್ವತಿಯು ಬಲಗೆಡದೆ, ಮನಗೆಡದೆ ಮಹಾ ವಟವೃಕ್ಷದಕೆಳಗೆ ಉಗ್ರ ತಪೋನಿರತಳಾಗಿದ್ದಳು.

ಪಾರ್ವತಿ ನೋಡ ಶರದ್ವಿಳಾಸಮಂ

ಸಖಿಯರಾದ ಜಯೆ ವಿಜಯೆಯರು ಬಂದು,

'ಶಿವಪ್ರಿಯೆ, ಉಗ್ರತಪಃಪ್ರಭಾವ ಭಾಸುರೆ, ಶಾಂತೆ ಪಾರ್ವತಿ ಜಯ ಜಯ! ರಕ್ಷಿಸು' ಎಂದು ನಮಸ್ಕರಿಸಿ,

'ತಾಯಿಯೇ, ಮಳೆಗಾಲ ಮುಗಿದಿದೆ. ಪ್ರವಾಹ ತಗ್ಗಿದೆ. ಶರತ್ಕಾಲ ಅಡಿಯಿಟ್ಟಿದೆ. ಎಂಟು ದಿಕ್ಕುಗಳೂ ಪ್ರಕಾಶಮಾನವಾಗಿವೆ' ಎಂದು ತಿಳಿಸಿ ಶರತ್ಕಾಲವನ್ನು ವರ್ಣಿಸುತ್ತ,

'ಜನರು ಪ್ರೀತಿಯಿಂದೊಡಗೂಡಿ ಕೃಷಿ ವ್ಯವಸಾಯ ಮಾಡುತ್ತಿದ್ದಾರೆ. ಮೋಡಗಳು ಚದುರಿ, ಕಲಹಂಸಗಳು ಬಂದು, ಪಕ್ಷಿಸಂಕುಲವು ಬಿಸಿಲಲ್ಲಿ ನೆರೆದಿವೆ. ಜಿಂಕೆಗಳು ಗವಿಗಹ್ವರದಿಂದ ಹೊರಬಂದು ಮೊಳೆಹುಲ್ಲನ್ನು ಮೇಯುತ್ತಿವೆ. ದಿಕ್ಕುಗಳು ತಿಳಿಯಾಗಿವೆ. ನೀರು ನಿರ್ಮಲವಾಗಿ ಆಕಾಶ ಬಿಳುಪಾಗಿದೆ.

'ಶರತ್ಕಾಲದನಂತರ ಶೀತಕಾಲ, ಆಗ ಸರೋವರ, ಕೆರೆ ತೊರೆ, ಬೆಟ್ಟದ ತಪ್ಪಲುಗಳಲ್ಲಿ ಹಿಮವು ಆವರಿಸುವುದು. ಆಗಲೂ ನೀನು ತಪವನ್ನು ಮಾಡು' ಎಂದು ಪ್ರಾರ್ಥಿಸಿದರು.

ಮಹಾದೇವಿ ಗಿರಿಜೆಯು ಮಳೆಗಾಲ ಕಳೆದುದನ್ನು ತಿಳಿದು, ತನ್ನ ಬಡವಾದ ಶರೀರವನ್ನು ಬಿಡದೆ ಸುತ್ತಿಕೊಂಡಿರುವ ನಾರಸೀರೆಯನ್ನು ನಯದಿಂದ ಸರಿಪಡಿಸಿಕೊಂಡಳು. ಹೊರಗಣ ಮಳೆಯಿಂದ ನೆನೆದ ಮೈಯನ್ನು ತಣ್ಣೆಳಲಿನಲ್ಲಿ ಆರಿಸಿಕೊಂಡಳು. ಒಳಗೆ ಶಿವಧ್ಯಾನಾನಂದರಸದ ಸೋನೆಯಿಂದ ನಾಂದಕರಣಗಳನ್ನು – ತನ್ನ ಬಿಸಿ ಉಸಿರಿಂದ ಆರಿಸಿಕೊಂಡಳು. ತಪಸ್ಸೆಂಬ ಭಾನುವಿನ ಉದಯಕ್ಕೆ ಮುಖ ಕಮಲದಳಗಳು ಹಾಗೂ ಮೈ ಅರಳಿದಂತಾಗಲು ಮುಂದಿದ್ದ ಸಖಿಯರನ್ನು ನೋಡಿದಳು. ಸಖಿಯರ ಕೈಹಿಡಿದು ಆಲದ ಮರದ ಅಡಿಯಿಂದ ಮೆಲ್ಲಗೆ ಹೊರ ಬಂದಳು. ತಣ್ಣೆಳಲಿನ ಸುವಾಸನೆ ಭರಿತ ಲತಾಗೇಹಗಳಿರುವ ಸರೋವರದ ದಡದಲ್ಲಿ ತಪಸ್ಸಿಗೆ ನಿಂತಳು.

ಒಡಲೆ ಪ್ರಾಣಂಗೆ ಚಳಿಯ ಕುಪ್ಪಸಮಾಯ್ತು

ಒತ್ತರಿಸಿ ಬಂದ ಹಿಮವು ಇಳೆಯ ಎಲ್ಲ ಜನರನ್ನು ಸುತ್ತಿ ಸುಗಿಯುತ್ತ ಮುತ್ತಿ ಮುಂದುಗೆಡಿಸುತ್ತ ನಡುಗಿಸಿತು. ಶಿಶಿರ ನೃಪಾಲನ ಆಗಮನಕ್ಕೆ ಹೆದರಿದ ಮೃಗ ಸಂತತಿ ಮತ್ತು ಕೊಳದ ಹಕ್ಕಿಗಳು ಬೆಟ್ಟದ ತಪ್ಪಲನ್ನು ಕೊಳಗಳನ್ನು ಪೊಟರೆಗಳನ್ನು ಹೊಕ್ಕವು.

ಹಿಮರಾಜನ ಕಾಲದಲ್ಲಿ ಬೆಂಕಿಯ ಕಿಡಿಗಳು ಕೆಂಪುಆಲಿಕಲ್ಲಿನಂತೆ, ಉರಿಯು ಕೆಂಪುಚಿಗುರಂತೆ, ಕೆಂಡ ಮಾಣಿಕ್ಯದಂತೆ, ಸೂರ್ಯಚಂದ್ರರು ಬೆಳದಿಂಗಳಂತೆ ಆದರು. ಹಿಮ ಸಾಮ್ರಾಜ್ಯದಲ್ಲಿ ಬೆವರು ಒಣಗಿ, ನೀರಡಿಕೆ ಇಂಗಿ, ಉಷ್ಣ ಉಸಿರಾಡದೆ, ಸೂರ್ಯನಿಗೆ ಶೀತತಟ್ಟಿ, ಬೆಂಕಿಗೆ ಶೀತವಾಯಿತು!.

ಆ ಕಾಲದ ಬೆಡಗು: ಉದಯವೆಂದರೆ ಶೀತೋದಯ! ಮಧ್ಯಾಹ್ನವೆಂದರೆ ತುಷಾರ ಮಧ್ಯಾಹ್ನ! ಮುಳುಗುವ ಹೊತ್ತೆಂದರೆ ಉಷ್ಣದ ಅಸ್ತಮಯ!

ಶಿಶಿರನೆಂಬ ನಟನು ತನ್ನ ಹಸ್ತದಂಡಿಗೆಯಿಂದ – ಜನರ ಹಲ್ಲುಗಳಲ್ಲಿ ಹು! ಹು! ಎಂಬ ಚೆಲುವಾದ ಘೋಷಣೆಯನ್ನು ಹೊಮ್ಮಿಸಿ ಆಡಿಸುವನು! ಜನರು 'ನುಡಿಯೆ ಹುಹು ನಡೆಯ ಮಾತೇಕೆ?' ಎಂದು ನಡುಗಿ ಅಲ್ಲಾಡುವರು!

'ಒಡಲೇ ಪ್ರಾಣಕ್ಕೆ ಚಳಿಯ ಕುಪ್ಪಸ'ವಾಗಿರುವಾಗ ಹಿಮದ ಮಹಿಮೆಯನ್ನು ಏನೆಂದು ವರ್ಣಿಸುವುದು?

ಇಳೆಯನ್ನು ಆವರಿಸಿದ ಶೀತಕ್ಕೆ ಅಂಜಿದ ಅಗ್ನಿಯು ಕಂಪಿಸುತ್ತ ನಿಲ್ಲಲಾರದೆ ಬಡವಾಗಿ ಹೋದನು!ಅವನಿಗೆ ಕೃಶಾನು ಎಂದು ಕರೆಯುವರು. ಹಾಗೆ ಕೃಶವಾದ ಅವನು ಶೀತಕ್ಕೆ ಹೆದರಿ ಸೌದೆಯ ಒಳಹೊಕ್ಕನಂತೆ!

ಜಗದ ಜನರು ಮುಚ್ಚಿಮುಸುಕಿದ ಚಳಿಯನ್ನು ಬೆಂಕಿಯಿಂದ ಹೊಗಲಾಡಿಸಿಕೊಳ್ಳದೆ, ಶೀಘ್ರವಾಗಿ ವಿರಹಿಗಳನ್ನು ಪ್ರೇಮದಿಂದ ಕಾಯ್ದು ಚಳಿಯನ್ನು ಕಳೆದರು!

ಮಾಗಿಯ ಕಾಲದಲ್ಲಿ ತುಂಬಿದ ಕೆರೆಯಮೇಲೆ ಉರಿಯಿಲ್ಲದೆ ಹೊಗೆ ಆಡುತ್ತಿದೆ. ಅದನ್ನು ಕಂಡ ವಿರಹಿ ತನ್ನ ಅತಿವಿರಹ ತಾಪವನ್ನು ತಡೆಯಲಾರದೆ, ಅದರಲ್ಲಿ ಮುಳುಗದೆ ಇರುತ್ತಾನೆಯೆ!?

ಆ ಕಾಲದ ಕೌತುಕ: ಹೊಸ ಚಳಿಯಲ್ಲಿ – ಹುಟ್ಟಿದ್ದು ಚಳಿ, ಬೆಳೆದುದು ಚಳಿ!

ಕೊಟ್ಟುದು ಚಳಿ, ಕೊಂಡುದೆಲ್ಲವೂ ಚಳಿ! ಉಟ್ಟುದು ಚಳಿ, ತೊಟ್ಟುದು ಚಳಿ! ಮೆಟ್ಟಿದ್ದು ಮುಟ್ಟಿದ್ದು ಎಲ್ಲವೂ ಚಳಿ!ಚಳಿ!

ಹೀಗೆ ಹಬ್ಬಿದ ಶೀತದಲ್ಲಿ ಅಗಜಾತೆಯು ಸರೋವರ, ಪರ್ವತಗಳ ತಪ್ಪಲಿನಲ್ಲಿ ತಪಸ್ಸಿಗೆ ನಿಂದಳು.

ನಿಷ್ಠುರ ಬೇಸಗೆಯಲ್ಲಿ, ಜಲ ಪ್ರಳಯದ ಮಳೆಗಾಲದಲ್ಲಿ, ಮಾಗಿಯ ಮಹಾಶೀತದಲ್ಲಿ ಗಿರಿರಾಜನ ಕುವರಿ ಮಾಡುತ್ತಿದ್ದ ತಪಸ್ಸಿನ ಪ್ರಭಾವವು ವಿರೂಪಾಕ್ಷನ ಕರಣಗಳಲ್ಲಿ ಬೆರಸಿ ಬೆಳೆಯಿತು. ಪುರಹರನು ಎಚ್ಚೆತ್ತನು. ಅವನ ದೃಢ ಧೈರ್ಯ ಒಡೆಯಿತು. ಹಿಡಿದು ಎಳೆಯುವ ಕಾರುಣ್ಯಕ್ಕೆ ಪಕ್ಕಾದನು, ಇನ್ನಿರಬಾರದು ಎಂದು ನಿಶ್ಚಯಿಸಿದ ಪನ್ನಗ ಭೂಷಣನು ಗಿರಿಜೆಯ ಮನಸ್ಸನ್ನು ಪರೀಕ್ಷಿಸಲು ಬಂದನು.

ವಟು ವೇಷದಲ್ಲಿ ಪಶುಪತಿ

ಪಶುಪತಿಯು ತನ್ನ ದಶಭುಜ, ಪಂಚಮುಖ, ಭೀಮಾಂಗಗಳನ್ನು ತನುವಿನಲ್ಲಿ ಅಡಗಿಸಿಕೊಂಡನು. ಗಿರಿಸುತೆಯನ್ನು ಕಾಣುವವರೆಗೆ ತಾನು ಪರಮ ಬ್ರಹ್ಮಚರ್ಯೆಯಿಂದ ಇದ್ದೆನೆಂದು ತೋರುವ ರೀತಿಯಲ್ಲಿ ವಟು ವೇಷಧಾರಿಯಾದನು.

ಚಂದ್ರ ಚಕೋರಿಯಲ್ಲಿಗೆ, ವಸಂತನು ಉದ್ಯಾನವಿದ್ದಲ್ಲಿಗೆ, ಸೂರ್ಯನು ತಾವರೆಯಿದ್ದಲ್ಲಿಗೆ, ಪ್ರಾಣವಾಯುವು ದೇಹವಿದ್ದಲ್ಲಿಗೆ ಬರುವಂತೆ ಜಗದ್ವಲ್ಲಭ ಶಿವನು– ಹೇಮಕೂಟದಲ್ಲಿ ಹೈಮವತಿಯಿರುವ ತಪೋವನಕ್ಕೆ ಬಂದನು. ಆಗ ವಸಂತ ಋತುವಲ್ಲದಿದ್ದರೂ ಮಾವು ಚಿಗುರಿತು. ಅಶೋಕೆ ಪಲ್ಲವಿಸಿತು. ವಸಂತ ದೂತಿ ಹೂಬಿಟ್ಟಿತು. ಕೋಗಿಲೆ ಕೂಗಿತು. ಮಲ್ಲಿಗೆಯ ಪರಿಮಳ ಭಾರದಿಂದ ಕುಸಿದ ದಕ್ಷಿಣಾನಿಲವು ಮೆಲ್ಲಗೆ ತೀಡಿತು. ಶಿಶಿರದಲ್ಲಿ ವಸಂತೋದಯವಾಗಿ ಪ್ರಕೃತಿಯಲ್ಲಿ ಇದ್ದಕ್ಕಿದ್ದಂತೆ ಹೊಸಚೈತನ್ಯ ದಾಂಗುಡಿಯಿಟ್ಟಿತು. ಅದನ್ನು ಕಂಡು ಜಯೆ ವಿಜಯೆಯರು – ನಿಮ್ಮ ತಪಃ ಪ್ರಭಾವವೇ ಇದಕ್ಕೆ ಕಾರಣ – ಎಂದು ಭವಾನಿಗೆ ತಿಳಿಸಿದರು.

ಹಾಗೆನ್ನುವಾಗ ವಟುವೇಷಧಾರಿ ಶಶಿಮೌಳಿಯು ತಪೋವನವನ್ನು ಪ್ರವೇಶಿಸಿದನು. ತಪೋವನದ ಎರಡು ಪಕ್ಕಗಳನ್ನು ನೋಡುತ್ತ, ಗಿರಿಜೆಯ ತಪೋನಿಷ್ಠೆಯ ಸಂತೋಷವನ್ನು ಅನುಭವಿಸಿದನು. ಮೆಲ್ಲನೆ ನಡೆಯುತ್ತ, ಬಳಲಿದವನಂತೆ ನಟಿಸುತ್ತ ಒಂದು ಎಳೆಮಾವಿನ ಮರದ ತಣ್ಣೆಳಲಿನಲ್ಲಿ ಕುಳಿತುಕೊಂಡನು. ಅವನನ್ನು ನೋಡಿದ ಸಖಿಯರು – ಈ ವಟುವು ಹೊಸಬ. ಅತಿಥಿ ಸ್ವರೂಪ. ಹಣೆಯಲ್ಲಿ ವಿಭೂತಿ ಧರಿಸಿರುವ ಈತ ವರ ವಿಪ್ರ ಎಂದುಕೊಂಡು ಆದರದಿಂದ ಕಂಡರು. ಅವನ ಪಾದಗಳನ್ನು ತೊಳೆದರು. ಸುಳಿ ಬಾಳೆಯೆಲೆಯಲ್ಲಿ ಮೃದುವಾದ ಕಂದಮೂಲಗಳನ್ನು, ನಳನಳಿಸುವ ಜಂಬುನೇರಳೆ, ಮಾವು, ಬಾಳೆಹಣ್ಣುಗಳನ್ನು ತಂದು ಮುಂದಿಟ್ಟು ನುಡಿದರು,

'ಎಲೈ ಅತಿಥಿಯೇ, ಬಳಲಿರುವ ನೀವು ನಮ್ಮ ಈ ಫಲದಿಂದ ಹಸಿವು ಅಡಗಿಸಿಕೊಳ್ಳಿ.'

'ತಾಯಿಯರೇ, ತಮ್ಮ ಅತಿಥ್ಯಕ್ಕೆ ಸಂತೋಷವಾಗಿದೆ. ಸ್ವೀಕರಿಸುವೆನು.'

'ಧನ್ಯರಾದೆವು.'

'ಈ ಲಲನೆ ಯಾರು? ಏತಕ್ಕಾಗಿ ಈ ತಪಸ್ಸು? ಯಾವ ಪುಣ್ಯಶಾಲಿಗಾಗಿ?'

'ಆ ಮಾತೆಯ ಚಿಂತೆ ನಿಮಗೇಕೆ?'

'ತಪದ ಕುತೂಹಲ!'

'ಮೊದಲು ಹಸಿವು ಆಯಾಸವನ್ನು ಹೋಗಲಾಡಿಸಿಕೊಳ್ಳಿ' ಎಂದು ಸಖಿಯರು ಹೇಳಲು, ವಟು ನಸುನಕ್ಕು,

'ಕೇಳುವುದು ತಪ್ಪೆ? ಈ ಕನ್ನೆ ತಪಸ್ಸು ಮಾಡದಿದ್ದರೆ ಒಳ್ಳೆಯದು. ಇದನ್ನು ತಡೆಯುವವರಿಲ್ಲವೇ? ಇಷ್ಟಾರ್ಥ ಸಾಧನೆಗೆ ಬೇರೆ ಮಾರ್ಗವಿಲ್ಲವೇ?' ಎಂದು ಕೇಳಿದನು.

ಆ ನುಡಿ ಕೇಳಿ ಗಿರಿಜೆಯ ಮನಸ್ಸಿನಲ್ಲಿ ತುಸುಕೋಪ ಮೂಡಿತು. ಜಪನಿಲ್ಲಿಸಿ ಜಪಮಾಲೆ ಪಕ್ಕಕ್ಕೆ ಸರಿಸಿದಳು. ಮೆಲ್ಲನೆ ಕಣ್ಣುತೆರೆದು ಆ ಶ್ರೇಷ್ಠ ವಟುವನ್ನು ನೋಡಿದಳು.

ಪ್ರಣಯ ಕಲಹ ಲೀಲಾಲೋಲ ವಿರೂಪಾಕ್ಷ

ಚಂದ್ರನಿಗೆ ಮೋಡ ಮುಸುಕಿದರೂ ಲೋಕಕ್ಕೆ ತಣ್ಪು ತಪ್ಪದರೀತಿ ಇಂದುಧರನು ವಟು ವೇಷದಲ್ಲಿದ್ದರೂ ಅಗಜೆಗೆ ಹರ್ಷಭಾವವುಂಟಾಯಿತು. ಅವಳಿಗೆ ಆ ಹರ್ಷದ ಕಾರಣ ಅರಿವಾಗದೆ ಬೆರಗಾಗಿ ಆ ವೇಷದ ವಟುವನ್ನೇ ನೋಡಿದಳು. ಅವಳ ಮಧುರದೃಷ್ಟಿಯ ಸಂಭ್ರಮೋತ್ಸಾಹಗಳು ತಾಗಲು ವಿಪ್ರ ಕರಗಿದನು. ಶಿವನಲ್ಲಿ ಪುಳಕ ಉಂಟಾಯಿತು. ಅದನ್ನು ಹಿಡಿತಕ್ಕೆ ತೆಗೆದು ಕೊಳ್ಳುತ್ತಿದ್ದಂತೆ – ತನ್ನೊಳಗೆ ನೆಗೆವ ಜಡೆಮುಡಿ ಒತ್ತಿ, ಹಾರುವ ಭುಜಗಳನ್ನು ಅಡಗಿಸಿ ತನ್ನ ನಿಜ ಸ್ವರೂಪವನ್ನು ಸಂತೈಸಿಕೊಂಡನು. ವಿಪ್ರವೇಷದಲ್ಲಿ ಧೈರ್ಯ ತುಂಬಿಕೊಂಡು ತಡಬಡಿಸುತ್ತ ಹುಸಿಮಾತಿನೊಡನೆ ಗಿರಿಜೆಯನ್ನು,

'ಎಲೌ ಮುಗ್ಧೆ, ಈ ಸುಕುಮಾರತೆ, ಈ ದಯಾಪರತೆ, ಈ ಯೌವ್ವನ, ಈ ಚೆಲುವು, ಈ ಸುಧಾಮಯ ಸುಖದಲ್ಲಿ ತಪಸ್ಸೇಕೆ?' ಎಂದು ಪ್ರಶ್ನೆ ಮಾಡುತ್ತ 'ನಿನ್ನ ತಾರುಣ್ಯದಲ್ಲಿ ಈ ಉಗ್ರ ತಪಕ್ಕೊಳಗಾದುದು ಏಕೆ? ನವಲತೆಯನ್ನು ಸೂರ್ಯನ ಬಿಸಿಲಿನಿಂದ ಕೊರಗಿಸುವ ಆ ದುಷ್ಟನು ಯಾರು? ಅಬಲೆ, ನನಗೆ ತಿಳಿಸು' ಎಂದು ಹೇಳಿದನು.

ಗಿರಿಜೆಯು ಮೌನವೇ ಮಾತಾಗಿ ಅವನನ್ನು ನೋಡುತ್ತಿದ್ದಳು. ವೇಷಧಾರಿ ಶಿವನು,

'ಎಳೆ ಬೆಳುದಿಂಗಳ ಸೋಂಕಿಗೂ ಅಳವಡದೆ ಅಲುಗಾಡುವ ಬಾಗೆಮರದ ಹಾಗಿರುವ ನಿನ್ನ ಅಂಗಕ್ಕೆ ಕರ್ಕಶ ನಾರಸೀರೆ ಒಗ್ಗಿಕೊಂಡುದೊಂದು ಆಶ್ಚರ್ಯವಾಗಿದೆ!

'ಎಳಲತೆಯನ್ನು ವಿನೋದಗೊಳಿಸುವ ನಳಿತೋಳುಗಳು, ಚಕ್ರವಾಕಗಳನ್ನು ಹೀಗಳೆಯುವ ಕುಚಮಂಡಳಗಳು ಈ ತಪೋವನದಲ್ಲಿ ತಪಕ್ಕೆ ತಕ್ಕವುಗಳೇ?

'ಈ ತುಂಬು ಯೌವನದಲ್ಲಿ ಹೊಳೆಯುವ ಚಂದ್ರವದನವು ಕಡು ಬಿಸಿಲಿಗೆ ಕೊರಗಿ, ಹೂ ಮಾಲೆಗಳಿಂದ ರಾರಾಜಿಸುವ ಮುಡಿಯು ಜಡೆಗಟ್ಟಿರುವುದನ್ನು ಕಂಡು ಅಯ್ಯೋ ಎನಿಸುತ್ತಿದೆ. ಹೀಗೆ ಬಿಸಿಲೆನ್ನದೆ, ಮಳೆಯೆನ್ನದೆ, ಚಳಿಯೆನ್ನದೆ, ಹಸಿವು ಬಾಯಾರಿಕೆ ನಿದ್ರಾಹಾರಗಳನ್ನು ಗೆದ್ದು ಈ ಲೋಕವು ಬೆರಗಾಗುವಂತೆ ತಪದಲ್ಲಿದ್ದವರು ಉಂಟೇ?

'ಓ ಮೃಗನಯನೇ, ಏರು ಜವ್ವನದಲ್ಲಿ – ಈ ವನದಲ್ಲಿ ಯಾರನ್ನು ಉದ್ದೇಶಿಸಿ ತಪದಿಂದ ಇರುವೆ? ನನಗೆ ಹೇಳಿದರೆ ಅದು ದೋಷವಾಗುವುದೇ?' ಎಂದು ಪ್ರೇಮಜನ ಪ್ರಣಯ ಕಲಹ ಲೀಲಾಲೋಲ ಚಿತ್ತನಾದ ವಿರೂಪಾಕ್ಷನು ವಟುವೇಷದಲ್ಲಿ ಮೃದುವಾಗಿ, ಕಠಿಣ ಆಕ್ಷೇಪ ಹೊಂದಿದ ಚತುರನುಡಿಯಲ್ಲಿ ಕೇಳಿದನು. ಅದನ್ನು ಆಲಿಸಿದ ಗಿರಿಜೆಯು, 'ಪವಿತ್ರ ದ್ವಿಜವಟು ಹೇಳುತ್ತಿರುವುದಕ್ಕೆ ಮರು ಮಾತಾಡಲು ಉಸಿರು ಬಾರದಾಗಿದೆಯಲ್ಲ' ಎಂದು ಚಿಂತಿಸುತ್ತ ತನ್ನ ಅಸದೃಶ ತಪದ ಕಾರಣವನ್ನು ಮನದ ಉಬ್ಬಸದೊಡನೆ ನಿಧಾನವಾಗಿ ಹೇಳಿದಳು:

'ಎಲೈ ಧೂರ್ತ ವಿಪ್ರನೇ ಕೇಳು. ಕರುಣಾಬ್ಧಿಯೂ, ಶೂಲಪಾಣಿಯೂ ಆದ ಶಂಭುವಿಗೆ ಕರುಣೆ ಹುಟ್ಟಲೆಂದು ತಪಸ್ಸು ಮಾಡುತ್ತಿರುವೆನು.'

ಅಷ್ಟು ಹೇಳುವಷ್ಟರಲ್ಲಿ ಅವಳು ಗದ್ಗದಿತಳಾದಳು. ರೋಮಾಂಚನಗೊಂಡು ಆನಂದಾಶ್ರುಗಳು ಹೊಮ್ಮಿದವು. ಅದನ್ನು ಒರೆಸಿಕೊಳ್ಳುತ್ತ ಘನ ಹರ್ಷಚಿತ್ತೆಯಾದ ನಗೇಶ್ವರ ಪುತ್ರಿಯು ಶಂಕರನ ಹೆಸರನ್ನು ಹೇಳಿದಳು.

ಅದನ್ನು ಕೇಳಿ ವೇಷದ ವಟುವು ಅಟ್ಟಹಾಸದಿಂದ ನಕ್ಕು,

'ಓಹ್ ಲತಾಂಗಿಯೇ, ಕಾಮಹರನಲ್ಲಿ, ಮುಕ್ಕಣ್ಣನಲ್ಲಿ, ಅಖಿಲವೇದ ಶಾಸ್ತ್ರಕ್ರಮವನ್ನು ಮೀರಿದವನಲ್ಲಿ ಸ್ಮಶಾನವಾಸಿಯಲ್ಲಿ ಅದು ಹೇಗೆ ನಿನ್ನ ಚಿತ್ತವಿಟ್ಟೆ? ಭೀಕರನಾದ ಶೂಲಿಯಲ್ಲಿ ಮನಸ್ಸು ಇಟ್ಟಮೇಲೆ ಈ ತಪಸ್ಸೇಕೆ? ನೀನೇಕೆ? ಖಡ್ಗವೇಕೆ?ಲತೆಯೇಕೆ ಅಗ್ನಿಯೇಕೆ? ಹೂಮಾಲೆಯೇಕೆ? ರವಿಯೇಕೆ?

'ಓ ಮುಗ್ಧೆ, ನೀನು ಮಧುರ, ಮೃದು, ಅಬಲ, ಭಯಸ್ಥೆ. ಆತನು ವಿಷ, ಕಠಿನ, ಉಗ್ರ, ಉರಗ ಭೂಷಣ, ಹುಲಿತೊಗಲಿನ ಉಡಿಗೆಯ, ಹಾವುಗಳೇ ಆಭರಣವಾದ, ನೋಸಲ ಕಣ್ಣಿನ, ಖಟ್ವಾಂಗ ಎಂಬ ತುದಿಯಲ್ಲಿ ತಲೆಬುರುಡೆಯುಳ್ಳ ಗದೆ ಹಿಡಿದ, ಹಸಿತಲೆಗಳ ಮಾಲೆಯ ಶೂಲಧಾರಿ. ಅವನಿಗೆ ನೀನು ಹೇಗೆ ಮನಸ್ಸು ಕೊಟ್ಟೆ?'ಎಂದು ವಿಪ್ರವಟು ಆಡಿದ ಶಿವನಿಂದೆಗೆ ಭವಾನಿ ಕೋಪಗೊಂಡಳು. ನಾನು ಮಾಡುವ ಜಪ ವಿರಲಿ, ಶಶಿಧರನನ್ನು ಧ್ಯಾನಿಸುವುದಿರಲಿ, ಶಂಭುನಿಂದೆಯನ್ನು ಕೇಳುವ ಪಾಪ ಇಂದು ನನಗಾಯಿತಲ್ಲಾ! ಘೋರ ತಪದಲ್ಲಿ ಕೋಪಿಸಿಕೊಂಡರೆ ತಪ ಕೆಡುತ್ತದೆ. ಇನ್ನು ಪತಿನಿಂದೆಯನ್ನು ಸೈರಿಸಬಾರದು ಎನ್ನುತ್ತ ಅಗಜೆಯು ಕೋಪಗೊಂಡು ವಿಭೂತಿಯಿಂದ ವಟು ವೇಷಧಾರಿಯನ್ನು ಹೊಡೆದಳು. ಶಿವನಾದರೆ ಏನು? ಹುಸಿಯು ಸತ್ಯದ ಎದುರು ನಿಲ್ಲುತ್ತದೆಯೇ? ತಕ್ಷಣ ವಟುವೇಷ ಕಳಚಿ ಹೋಯಿತು!

ಆಗ ಮುಗಿಲು ಸರಿದ ಶಶಿಯಂತೆ, ಕತ್ತಲು ಕಳೆದ ತರುಣ ಸೂರ್ಯನಂತೆ ಹೊಗೆ ತಗ್ಗಿದ ಬೆಂಕಿಯಂತೆ ವಟು ವೇಷ ವಿಲ್ಲವಾಗಿ ಶಂಭು ಬೆಳಗಿದನು!

ಜಡೆ ಮುಡಿ, ಪಂಚಮುಖಿ, ದಶಭುಜ, ತ್ರಿನೇತ್ರ, ವಿಭೂತಿ ಧರಿಸಿದ ದೇಹದಲ್ಲಿ ಹುಲಿ ತೊಗಲಿನ ಉಡಿಗೆಯೊಡನೆ, ಉಡುಪತಿ ಕಳೆಯಿಂದ ಶಂಕರನು ಪ್ರಕಾಶಿಸಿದನು. ಹೂಮಳೆ ಸುರಿಯಿತು. ಕೋಪದಿಂದ ಗಿರಿಜೆಯು ಎಸೆದ ವಿಭೂತಿಯೇ ವಿವಾಹ ಸಂದರ್ಭದಲ್ಲಿ ಎರಚುವ ಜೀರಿಗೆ ಬೆಲ್ಲವೆಂಬಂತೆಯಿದ್ದು, ಅದು ಅವರ ಕಲ್ಯಾಣ ಸೂಚಕವಾಗಿತ್ತು.

* * * * *

ಗಿರಿಜಾ ಕಲ್ಯಾಣ

ಅಗಸುತೆಯು ಶಿವನನ್ನು ಕಂಡು ಬೆರಗಾದಳು. ತನ್ನ ನಾರುಮುಡಿಯನ್ನು ಸರಿಪಡಿಸಿಕೊಳ್ಳುತ್ತ, ಅತಿನಾಚಿಕೆಯಿಂದ ತಲೆಬಾಗಿದಳು. ಅನುರಾಗ ಮೈ ತುಂಬಿ ಪುಳಕಿತಳಾದಳು. ಶಿವನನ್ನು ನೋಟದಿಂದ ಸೆಳೆದಳು. ಮನದಿಂದ ತೆಗೆದು ಅಪ್ಪಿಕೊಂಡಳು. ಅತ್ಯುತ್ಸಾಹದಿಂದ ಚಿತ್ತದಲ್ಲಿ ಬಯಸಿದಳು. ಹೆಮ್ಮೆಯಿಂದ ಚುಂಬಿಸಿದಳು.

ಸಕಲ ದೇವತೆಗಳಿಂದ ವಂದಿಸಲ್ಪಡುವ ಪಾದಪಂಕಜವನ್ನು ಹೊಂದಿದ ಶಿವನು ಗಿರಿಜೆಯ – ಚಂದ್ರಬಿಂಬವನ್ನು ವಿನೋದಗೊಳಿಸುವ ನಿರ್ಮಲ ಮುಖವನ್ನೂ, ಕಂಗೊಳಿಸುತ್ತ ಧೀಂಕಿಡುವ ಕಡೆಗಣ್ಣ ನೋಟವನ್ನೂ, ಉನ್ನತ ಪೀನ ಸ್ತನಯುಗ್ಮವನ್ನೂ ಮೆಚ್ಚಿ ಈಕ್ಷಿಸಿದನು. ಒಲವು ಉಕ್ಕಿ ತಡೆಯಲಾರದೆ ಅವಳ ಅರ್ಪಣೆಯ ಪುಣ್ಯಹಸ್ತವನ್ನು ಹಿಡಿದು ನುಡಿದನು:

'ಹೇ ಗಿರಿಸುತೆ, ಈಗ ಸಂತೋಷದಿಂದ ನಮ್ಮ ರಜತಾದ್ರಿಗೆ ಹೋಗೋಣ ನಡೆ'.

'ದೇವ ಸದಾಶಿವ, ನನ್ನ ತಂದೆ ಶೈಲಪತಿಯಲ್ಲಿ ನನ್ನನ್ನು ಆದರದಿಂದ ಬೇಡಿಕೊಳ್ಳಿ, ಅನಂತರ ರೂಢಿಯಂತೆ ವಿವಾಹವಾಗಿ ಈ ಕೋರಿಕೆಯನ್ನು ಕರುಣಿಸಿ' ಎಂದು ಜಾಣನುಡಿಯನ್ನು ವಿನಯದಿಂದ ಹೇಳಿದ ಅಗಜೆಯಮಾತಿಗೆ ಪರಮೇಶ್ವರನು ಒಪ್ಪಿದನು.

ಹೀಗೆ ಅವರಿರ್ವರೂ ಸುಖಭಾವದಲ್ಲಿರುವಾಗ ರತಿ ದೇವಿಯು ದುಖದಿಂದ, ಬಾಡಿದ ಮುಖದವಳಾಗಿ ಮುಂದೆ ಬಂದು ನಮಸ್ಕರಿಸಿದಳು.

ರತಿದೇವಿಯು ವಂದಿಸುತ್ತಿರುವಾಗ ಪಾರ್ವತಿಯು ಶಿವನಲ್ಲಿ ಪ್ರಾರ್ಥಿಸಿದಳು:

'ಸ್ವಾಮಿಯೇ ಕೇಳು. ಈ ಲಲನೆಯ ಪತಿಯಾದ ಕಾಮನು ಪಶುಪತಿಯಾದ ನಿಮ್ಮಿಂದ ಸುಟ್ಟು ಹೋದಾಗ, ತುಂಬಾದುಃಖಿತೆಯಾದ ಈಕೆಯನ್ನು ಕಂಡು, ನಾನು ಕಡುನೊಂದೆನು. ನಿಮ್ಮನ್ನು ಪ್ರಾರ್ಥಿಸಿ, ಈಕೆಯ ಪತಿಯನ್ನು ಪಡೆದು ಕೊಡುತ್ತೇನೆಂದು ಹೇಳಿದ್ದೆನು. ಕೃಪೆ ಮಾಡಿ' ಎಂದಳು. ಆ ಮಾತು ಕೇಳಿ ಶಂಕರನು ಗಿರಿತನಯಳ ಮಧುರ ಮುಖವನ್ನು ನೋಡಿ ನಗುತ್ತ,

'ಆಗಲಿ. ಈಕೆ ನೆನೆದಾಗ ಕಾಮನು ಅನಂಗನಾಗಿ ಕಾಣಿಸಿಕೊಂಡು ಸುಖ ಸಂಪದವನ್ನುಂಟು ಮಾಡಲಿ' ಎಂದು ಹೇಳಿ ರತಿಯನ್ನು ಸಂತೈಸಿದನು.

* * *

ರತಿಗೆ ಮನ್ಮಥನು ಇಚ್ಛಾಮಾತ್ರದಿಂದ ಜನಿಸುವವನನ್ನಾಗಿ ಅನುಗ್ರಹಿಸಿದ ಶಿವನು ಗಿರಿಜೆಯನ್ನು ಗಿರಿರಾಜನಲ್ಲಿಗೆ ಕಳುಹಿಸಿದನು.

ಪಾರ್ವತಿಯು ಶಿವನನ್ನು ನೆನೆಯುತ್ತ ಪುಷ್ಪಕ ವಿಮಾನವನ್ನೇರಿ ಸಖಿಯರೊಡನೆ ಹಿಮಾಚಲವನ್ನು ಸೇರಿದಳು. ರಾಜಧಾನಿ ಓಷಧಿ ಪ್ರಸ್ತಪುರದತ್ತ ನಡೆದಳು. ತನ್ನ ಮಗಳು ತಪಸ್ಸಿನಿಂದ ವರ ಪಡೆದು ಪ್ರಸನ್ನಳಾಗಿ ಬರುತ್ತಿರುವಳೆಂಬ ಸುದ್ದಿಯನ್ನು ಹಿಮವಂತನು ಕರ್ಣಪರಂಪರೆಯಿಂದ ಕೇಳಿತುಂಬಾ ಸಂತೋಷಪಟ್ಟನು. ಉತ್ಸಾಹದಿಂದ ಪುಳಕಗೊಂಡನು.

ಪಾರ್ವತಿಯನ್ನು ಎದುರುಗೊಳ್ಳಲು ಮಂಗಳವಾದ್ಯ ಸಮೇತ ಸಕಲ ಪರಿವಾರದೊಡನೆ

ಹೊರಟನು. ಗುಡಿತೋರಣ, ಛತ್ರಚಾಮರಗಳೊಡನೆ, ಫಲಪುಷ್ಪ, ಕಳಶಕನ್ನಡಿ ಹಿಡಿದ ಲಲನೆಯರೊಡಗೂಡಿ ಸಂಭ್ರಮಗೊಂಡನು. ಚತುರಂಗಬಲದೊಡನೆ ಸಾಗಿ ಸಡಗರದಿಂದ ಮಗಳು ಗಿರಿಜೆಯನ್ನು ಸಕಲಗೌರವಗಳೊಡನೆ ಇದಿರ್ಗೊಂಡನು.

ಮಹಾತಪಸ್ವಿನಿ ಧೀರೆ, ಕೆಂಜೆಡೆ ಹೊಂದಿ, ನಾರುಮಡಿ ಧರಿಸಿದ, ಮಂಗಳ ಗಾತ್ರೆ, ಕಾಂತಿಸಂಪನ್ನೆ, ಸೌಂದರ್ಯನಿಧಿ ಮಗಳನ್ನು ಸಂತೋಷದಿಂದ ಅರಮನೆಗೆ ಕರೆದುಕೊಂಡು ಬಂದನು. ಗಿರಿಜೆಯು ತನ್ನ ಕೋಟಿಸೂರ್ಯ ಪ್ರಭೆಯ ಮುಖದಿಂದ ರಾಜಸಭೆಯನ್ನು ಬೆಳಗಿಸಿದಳು. ತಂದೆ ಗಿರಿರಾಜನೊಡನೆ ಉನ್ನತಾಸನದಲ್ಲಿ ಆಸೀನಳಾದಳು.

ತಾಯಿ ಮೇನಾದೇವಿಯು ಬಂದು ಮಗಳನ್ನು ಕಣ್ತುಂಬಿಕೊಳ್ಳುತ್ತ, ತಲೆಮೂಸಿ, ಮೈಸವರುತ್ತ,

'ಮಗಳೇ, ತಪಸ್ಸಿನಿಂದ ಎಷ್ಟು ಸಣ್ಣಗಾಗಿರುವೆ, ಕಣ್ಣು ಬಳಲಿ, ಮುಖ ಕಮಲ ಬಾಡಿದೆ, ಪ್ರಾಯಸಹಜ ಸ್ತನಯುಗ್ಮ ಸೊರಗಿದೆ. ಕೇಶಪಾಶ ಜಡೆಗಟ್ಟಿದೆ. ಇಷ್ಟೊಂದು ಅನ್ಯಾಯಕ್ಕೆ ಏಕೆ ಒಡ್ಡಿ ಕೊಂಡೆ? ಕಾಡು ನಿನಗೆ ಒಗ್ಗಿತೆ?'ಎಂದು ಪ್ರಶ್ನಿಸುತ್ತ ಮಗಳೊಡನೆ ತಾನು ಬಳಲಿ, ನೊಂದಳು.

ಗಿರಿಪತಿಯ ಆಜ್ಞೆಯಂತೆ ಬಂದ ಸ್ತ್ರೀಯರು ಪಾರ್ವತಿಯ ಜಡೆಗಳನ್ನು ಬಿಡಿಸಿ, ಉಪಚಾರ ಕೈಗೊಂಡರು.

ಬೇಡಬಂದೆವು ನೂತನ ಭುವನೈಕ ಭಾಗ್ಯವತಿ ಪಾರ್ವತಿಯಂ

ಶ್ರೀ ಕೈಲಾಸ ಸೇರಿದ ಪರಮೇಶ್ವರನು ವಿವಾಹಾರ್ಥವಾಗಿ ವಧುವನ್ನು ಯಾಚಿಸಲು ಶ್ರೇಷ್ಠರೂ, ಲೋಕೊತ್ತಮರೂ, ಪುಣ್ಯಶ್ಲೋಕರೂ ಆದ ಸಪ್ತರ್ಷಿಗಳನ್ನು ನೆನೆದನು. ಶಿವನು ಸ್ಮರಿಸುವ ಮೊದಲೇ ತ್ರಿಕಾಲ ಜ್ಞಾನಿಗಳಾದ ಸಪ್ತರ್ಷಿಗಳು ಸಂತೋಷದಿಂದ ಅಲ್ಲಿಗೆ ಬಂದರು. ಪವಿತ್ರಾತ್ಮರೂ, ಜಟಾಧಾರಿಗಳೂ, ಭಸ್ಮ ಭೂಷಿತರೂಆದ ಅವರ ಜೊತೆಗೆ ಪರಮಪತಿವ್ರತೆ ಅರುಂಧತಿಯೂ ಜೊತೆಗೂಡಿ ಬಂದಿದ್ದಳು. ಅವರೆಲ್ಲರೂ ಪರಮೇಶ್ವರನಿಗೆ ನಮಸ್ಕರಿಸಿ,

'ಹರನೇ, ನಿನ್ನ ಸ್ಮರಣೆಗೆ ಬಂದು ನಾವು ಕೃತಾರ್ಥರಾದೆವು. ತಮ್ಮಾಜ್ಞೆ ಏನು?' ಎಂದು ಪ್ರಾರ್ಥಿಸಲು, ಶಿವನು ಅವರಿಗೆ,

'ತಾವುಗಳು ಶೈಲಪತಿಯಲ್ಲಿಗೆ ಹೋಗಿ, ಆತನನ್ನು ಆದರದಿಂದ ಕಂಡು ಅಗಜೆಯನ್ನು ಬೇಡುವುದು' ಎಂದು ಆದೇಶಿಸಿದನು.

ಶಿವನಾಜ್ಞೆಯು ಅನುಗ್ರಹ ಎಂದು ತಿಳಿದ ಸಪ್ತರ್ಷಿಗಳು ಪುಷ್ಪಕ ವಿಮಾನವನ್ನೇರಿ ಗಿರಿರಾಜನ ರಾಜಧಾನಿ ಓಷಧಿ ಪ್ರಸ್ತಪುರಕ್ಕೆ ಬಂದರು. ಶೈಲಪತಿಯು ಪರಮೋತ್ಸಾಹದಿಂದ ಋಷಿಗಳನ್ನು ಎದಿರ್ಗೊಂಡನು. ಭಯ ಭಕ್ತಿಯಿಂದ ಉಪಚರಿಸಿ ಉಚಿತಾಸನದಲ್ಲಿ ಕುಳ್ಳಿರಿಸಿ ವಂದಿಸಿದನು. ವಿನಯದಿಂದ,

'ಪೂಜ್ಯರೇ, ಸುರಲೋಕದಲ್ಲಿ ಎಲ್ಲರೂ ಸುಖದಿಂದಿರುವಾಗ ತಾವು ಬಂದ ಕಾರಣವೇನು? ತಾವುಬಂದುದು ನಮ್ಮಭಾಗ್ಯ' ಎಂದು ಹೇಳಿದನು. ಆಗ ಮುನಿಗಳು,

'ಎಲೈ ಗಿರಿರಾಜನೇ, ಶಶಾಂಕಧರನಾದ ಶಿವನು ನಿರ್ಮಾಯನು. ಆತನು ಲೋಕ ಕಲ್ಯಾಣಕ್ಕಾಗಿ ಗೃಹಸ್ಥನಾಗಲು ಬಯಸಿರುವನು. ನಿತ್ಯನೂ, ನಿರಾಮಯನೂ ಆದ ಆತನಿಗೆ ಭುವನೈಕ ಭಾಗ್ಯವತಿಯಾದ ಪಾರ್ವತಿಯನ್ನು ಬೇಡಲು ಬಂದಿದ್ದೇವೆ.'

'ಮಹಾ ಮುನಿಗಳೇ, ಇದು ನನಗೆ ಶಿವನು ನೀಡಿದ ಭಾಗ್ಯ.'

'ಎಲೈ ಶೈಲಪತಿಯೇ, ನಮಸ್ಕರಿಸುವವರ ನೇತ್ರವೆಂಬ ನೈದಿಲೆಗಳಿಗೆ ಚಂದ್ರನಂತಿರುವ ಚಂದ್ರಶೇಖರನಿಗೆ – ಚಂದ್ರಮುಖಿ ಗಿರಿಜೆಯನ್ನು ಸಮ್ಮತಿಸಿ ಪ್ರೀತಿಯಿಂದ ನೀಡು' ಎಂಬ ಸಪ್ತರ್ಷಿಗಳ ನುಡಿ ಗಿರಿರಾಜನಿಗೆ ಕರ್ಣರಸಾಯನವಾಯಿತು. ಪುಳಕಿತವಾದ ಅವನ ಮನಸ್ಸು ಅರಳಿತು. ಅಭಿಮಾನದಿಂದ ಹೇಳಿದನು,

'ಋಷಿವರ್ಯರೇ, ಶಿವನಕರುಣೆ ನನಗೆ ಅಭಿಮುಖವಾಗಿರುವಾಗ ವಿಚಾರ ಮಾಡುವುದೇನಿದೆ? ನಾನು ಬಾಳಿಬದುಕಿದ್ದು ಸಾರ್ಥಕವಾಯಿತು. ನನ್ನ ಭಾಗ್ಯದಬೆಳೆ ಚಿಗುರಿತು. ನನ್ನ ಪುಣ್ಯಲತೆ ಹೂಬಿಟ್ಟಿತು' ಎಂದು ಹೇಳುತ್ತ ಉತ್ಸಾಹದಿಂದ ಮಾತು ಮುಂದುವರಿಸಿದನು 'ರವಿಗೆ ಕಿರಣಗಳು ಸಾಧಾರಣವೇ? ಕುಸುಮಕ್ಕೆ ಪರಿಮಳವು ಪರೀಕ್ಷೆಯೇ? ಅಮೃತಕ್ಕೆ ಮಾಧುರ್ಯವು ಸಂಕಲ್ಪವೇ? ಶರ್ವನಿಗೆ ಪಾರ್ವತಿಯು ಎರವೇ? ಪನ್ನಗಾಭರಣನು ನನ್ನನ್ನು ಬೇಡುವನೆನ್ನುವುದೇನು? ಪೂರ್ತಿಒಪ್ಪಿ ಆತನಿಗೆ ಪ್ರೇಮದಿಂದ, ನಿಷ್ಠೆಯಿಂದ, ನೆಟ್ಟನೆ ಗಿರಿಜೆಯನ್ನು ಕೊಟ್ಟಿರುವೆನು' ಎಂದು ಸಂತೋಷದಿಂದ ಹೇಳುತ್ತ ಸಪ್ತರ್ಷಿಗಳ ಪಾದಗಳಿಗೆ ನಮಸ್ಕರಿಸಿದನು. ಅವರನ್ನು ಹರ್ಷದಿಂದ ಕಳುಹಿಸಿಕೊಟ್ಟನು.

ಗಿರಿರಾಜನು ವಿವಾಹ ಮಹೋತ್ಸವಕ್ಕೆ ಮಂಟಪಾದಿಗಳ ಸಿದ್ಧತೆಯಲ್ಲಿ ತೊಡಗಿದನು. ತನ್ನ ಚಾರರನ್ನು ಕಳುಹಿಸಿ ದೇವಲೋಕದಿಂದ ವಿಶ್ವಕರ್ಮನನ್ನು ಬರಮಾಡಿಕೊಂಡನು. ಅವನನ್ನು ವಿನಯದಿಂದ ಮಾತಾಡಿಸಿ ಗೌರವಿಸಿದನು. ಅವನು ಕೇಳಿದ್ದನ್ನು ನೀಡಿ,

'ಮಹಾ ಶಿಲ್ಪಿಯೇ, ಚಂದ್ರಶೇಖರನಿಗೂ ನನ್ನ ಮುದ್ದು ಮಗಳಿಗೂ ವಿವಾಹಕ್ಕೆ ಉಚಿತವಾದ ಕಲ್ಯಾಣ ಮಂಟಪವನ್ನು ಬೇಗನೆ ನಿರ್ಮಿಸಿ, ಸೂಕ್ತ ಅಲಂಕಾರವನ್ನು ಮಾಡಿಕೊಡಿ' ಎಂದು ಸೂಚಿಸಿದನು.

ವಿಶ್ವಕರ್ಮ ರಚಿಸಿದ ಕಲ್ಯಾಣಮಂಟಪ

ಗಿರಿರಾಜನ ಆ ನುಡಿ ಕೇಳಿ ವಿಶ್ವಕರ್ಮ ಸಂತೋಷಪಟ್ಟನು. ಆತನ ಸಂಕಲ್ಪ ಮಾತ್ರದಿಂದಲೇ ಶ್ರೇಷ್ಠಮಂಟಪವು ಸಿದ್ಧವಾಗಿ ಮುಂದೆ ಕಂಗೊಳಿಸಿತು.

ಮಹಾಮಂಟಪವು ನಿರ್ಮಲ ಚಂದ್ರಕಾಂತಶಿಲೆಯ ಮೇಲೆ ಪ್ರತಿಬಿಂಬಿಸಿತು. ಅದು ಶಿವನ ವಿವಾಹಕ್ಕೆ ನಾಗಲೋಕದಿಂದ ನಾಗದೇವತೆಗಳು ಕಳುಹಿಸಿದ ಅಭಿನವ ಮಂಟಪದಂತಿತ್ತು. ಉದಯಸೂರ್ಯನ ಸಹಸ್ರಕಿರಣಗಳು ಗಗನವನ್ನು ಹೊತ್ತು ಎತ್ತುವಂತೆ – ಜಗದಗಲಕ್ಕೆ ಸಾಲಾಗಿ ನಿಲ್ಲಿಸಿದ ಮಾಣಿಕ್ಯ ಸ್ತಂಭಗಳಮೇಲೆ ಭವ್ಯಚಪ್ಪರ ರಾರಾಜಿಸಿತು. ಚಪ್ಪರಕ್ಕೆ ಅಲ್ಲಲ್ಲಿ ಪುಲ್ಲಿಯ ಎಂಬ ಒಂದುಬಗೆಯ ಬಟ್ಟೆಯನ್ನುಕಟ್ಟಿ ಅಲಂಕರಿಸಿದ್ದರು. ಮೇಘವಣ್ಣಿ ಎಂಬ ಆಕಾಶಬಣ್ಣದ ರೇಷ್ಮೆವಸ್ತ್ರದಿಂದ, ಕಥಾಯಿ ಎಂಬ ಒಂದು ವಿಧವಾದ ಅರಿವೆಯಿಂದ ಚೌಕಾಕಾರದ ಅಲಂಕಾರ ಮಾಡಿದ್ದರು.

ಮಂಟಪದ ಶೃಂಗಾರಕ್ಕಾಗಿ ಅಳವಡಿಸಿದ್ದ ಹೊಳೆಯುವ ಹಸಿರುಬಣ್ಣದ ರತ್ನ ಮರಕತ, ಪಚ್ಚೆಯ ಪಟ್ಟಿಗಳು, ಬೆಳ್ಳಿ ಬೆಳಗನ್ನು ಕೊಡುವ ಕುಬೇರನ ನವರತ್ನಗಳಲ್ಲಿ ಒಂದಾದ ನಿರ್ಮಲದ ನೀಲರತ್ನಗಳು ಅಲ್ಲಿ ಬೆಳಕನ್ನು ಸೂಸಿದ್ದವು.

ನಸುಹಳದಿಬಣ್ಣದ ಪುಷ್ಪರಾಗವೆಂಬ ಹರಳುಗಳ ಬೀಜಕೋಶದ ರಚನೆ; ಕೆಂಪುಬಣ್ಣದ ಪದ್ಮರಾಗವೆಂಬ ರತ್ನದಿಂದಾದ ಹೂ ಎಸಳುಗಳು ಮಂಟಪಕ್ಕೆ ಹೊಸ ಶೋಭೆಯನ್ನುಂಟು ಮಾಡಿದ್ದವು.

ಜಲವೀಧಿಯಲ್ಲಿ ದುಂಬಿಗಳನ್ನು ಆಕರ್ಷಿಸಲು ಸಿಕ್ಕಿಸಿರುವ ಮುತ್ತಿನಗೆಜ್ಜೆಯ ಗೊಂಚಲುಗಳು; ಎಲ್ಲೆಲ್ಲೂ ಆವರಿಸಿಕೊಂಡಿರುವ ಗೋಮೇಧಿಕ ಸ್ತೋಮ, ಹವಳದ ಪಂಕ್ತಿ, ಪ್ರಜ್ವಲಿಸುವ ವಜ್ರವೈಡೂರ್ಯಗಳು ಮಂಟಪಕ್ಕೆ ಮೆರುಗು ತಂದಿದ್ದವು. ಆ ಮಂಟಪದಲ್ಲಿ ಹಬ್ಬಿ ರಂಜಿಸುವ ಬಳ್ಳಿಗಳು, ಲತೆಗಳು, ಕಂಪು ಸೂಸುವ ಹೂವುಗಳು, ಸಮದೂರದಲ್ಲಿ ಹವಣುಗೊಂಡು ಸಾಗುವ ಹಂಸಗಳು ಹೊಸ ಚೈತನ್ಯವನ್ನುಂಟು ಮಾಡುತ್ತಿದ್ದವು.

ಸಕಲಸೌಂದರ್ಯವನ್ನು ಒಳಗೊಂಡ ಮೇಲ್ಕಟ್ಟಿನ ಹಲವು ವರ್ಣಛಾಯೆಯ ಬೆಳಕು ಮಂಗಳಮಯವಾಗಿ ಪ್ರಕಾಶಿಸಿತ್ತು. ಒಳ ಹೊರಗೆ ಸುಳಿದಾಡುವ ಪುರುಷರಿಂದಲೂ, ಚೆನ್ನಾಗಿ ಹಾಡುವ ಲಲನಾಮಣಿಗಳಿಂದಲೂ ಕೂಡಿ ಆ ಮಂಟಪವು ಪ್ರಭೆಯ ಕಡಲಿನಂತಿತ್ತು.

ಹೆಬ್ಬಾಗಿಲಿನ ತೋರಣಸ್ತಂಭಗಳು ಚಿತ್ತಾಕರ್ಷಕವಾಗಿದ್ದು ಮುಗಿಲನ್ನು ಇರಿಯುವಂತಿದ್ದವು. ಆ ಸ್ತಂಭಗಳಮೇಲೆ ಕೆತ್ತಿದ ಹಂಸ, ಗಿಳಿ, ಮಯೂರ, ಪಾರಿವಾಳ ಮತ್ತು ಆನೆಗಳು ಹಾಗೂ ತುದಿಯಲ್ಲಿ ನವರತ್ನ ರಂಜಿತವಾಗಿ ರವಿಮಂಡಲವನ್ನು ಮುದ್ದಾಡುವ ಸುವರ್ಣಕಳಸ ದರ್ಪಣಗಳು ಬಹು ರಮ್ಯವಾಗಿದ್ದವು.

ಆ ಮಂಟಪವು ಒಳಭಾಗದಲ್ಲಿ ನೆರೆದಿದ್ದ ಸೂರ್ಯವಂಶ, ಚಂದ್ರವಂಶದ ರಾಜರಿಂದಲೂ, ಹೊಳೆಯುವ ರಾಜಪುತ್ರರಿಂದಲೂ, ಸಾಮಂತರು ಮಾಂಡಲಿಕರಿಂದಲೂ ವೈಭವಯುತವಾಗಿತ್ತು. ಅದು ಶಿಷ್ಯರ ಸಮಾಲೋಚನ ತಂಡಗಳಿಂದ, ಸೇವಾಯೋಗ್ಯವಾದ ಪೂಜ್ಯರ ಸಮೂಹದಿಂದ, ಮುತ್ತೈದೆಯರ ಗುಂಪಿನಿಂದ ಸಕಲ ಆಗಮಪ್ರವೀಣರಿಂದ, ಸರ್ವಶಾಸ್ತ್ರಕೋವಿದರಿಂದ ಸಹಸ್ರವೇದಿಗಳಿಂದ, ಗಳಿಗೆಬಟ್ಟಲನ್ನು ಸುತ್ತುವರಿದ ನಕ್ಷತ್ರ ಪಾಠಕರಿಂದ ತುಂಬಿ ಅತಿ ವಿಸ್ತಾರವಾಗಿತ್ತು. ಅಧಿಕ ಸಂಪತ್ತು, ಸೌಂದರ್ಯ, ಪ್ರಸನ್ನತೆಯಿಂದ ಕೂಡಿದ್ದ ಅದು ವರನ ಬರುವಿಕೆಯನ್ನು ನಿರೀಕ್ಷಿಸುತ್ತಿತ್ತು.

ಶಂಕರನ ಪ್ರೇಮಮಂ ಸೀಮೆಗೊಳಿಸುವಂತೆ – ಪಾರ್ವತಿಯನ್ನು ಸಿಂಗರಿಸಿದರು

ಅರಮನೆಯ ಒಳಗೆ ಮುತ್ತೈದೆಯರು ಗಿರಿರಾಜ ಕುಲ ತನೂಜೆಗೆ ಅಲಂಕರಿಸುತ್ತಿದ್ದರು. ಅವರು ಶೃಂಗರಿಸುವ ರೀತಿಯು ವರಶಶಿಕಳೆಗೆ ಸುಧಾಕಿರಣವನ್ನು ತೊಡಿಸುವಂತಿತ್ತು! ಸುಮಂಗಲೆಯರು ಕಲ್ಪವೃಕ್ಷದ ಕೊಂಬೆಯಂತಿರುವ ಅವಳ ಅಂಗಗಳಿಗೆ ಹರಿದ್ರಾ ಪರಿಮಳಗಳನ್ನು ಪೂಸಿ, ನವ ಕುಸುಮ ದ್ರವಯುತ ಜಲದಿಂದ ಮಜ್ಜನ ಮಾಡಿಸಿದರು.

ಬೆಳುದಿಂಗಳನ್ನು ನವಲತೆಗೆ ಹೊಂದಿಸುವಂತೆ – ಹೊಳೆಯುವ ಕಾಂತಿಯ ರೇಷ್ಮೆವಸ್ತ್ರವನ್ನು ಅಗತನುಜೆಗೆ ಅಂಗನೆಯರು ಉಡಿಸಿದರು. ಕೈ ಬೆರಳುಗಳಿಗೆ ಮಂಗಳಮಯ ಉಂಗುರಗಳನ್ನು ತೊಡಿಸಿದರು. ಪುರಹರನ ರಾಜಕಡಗವು ಗಿರಿಜೆಯ ಕೈಸೇರಿತು ಎಂಬಂತೆ ಅವಳ ವರ ಹಸ್ತದಲ್ಲಿ ರತ್ನ ಖಚಿತವಾದ ಬಳೆಗಳು ಶೋಭಿಸಿದವು.

ಸಖಿಯರು ಇಂದ್ರನೀಲ ಮತ್ತು ವಜ್ರದ ಬಂದಿಗಳನ್ನು, ಕೇಯೂರವೆಂಬ ಬಾಹುಪೂರವನ್ನು ಗಿರಿಜೆಯ ತೋಳಿಗೆ ಧರಿಸಿದರು. ತೋರಹಾರದಿಂದ ಅಲಂಕರಿಸಿದರು.

ಮುತ್ತೈದೆಯರು ತೊಡಿಸಿದ ಮೂಗುತಿಯು ಗಿರಿಜೆಯ ಮೂಗಿನಲ್ಲಿ ನಳನಳಿಸುವ ಅಚ್ಚಮೊಗ್ಗು ಮೊಳೆತಿದೆ ಎಂಬಂತೆ ಹೊಳಪುಗೊಂಡಿತ್ತು. ಕಿವಿಗೆ ತೊಡಿಸಿದ ಮುತ್ತಿನಓಲೆಗಳು ಮುಖದಶೋಭೆ ಹೆಚ್ಚಿಸಿದ್ದವು. ಅವರು ಸಂತಸದಿಂದ ಅಂಬಿಕೆಯಕಣ್ಣಿಗೆ ಅಂಜನವಿಟ್ಟರು.

ಹಣೆಯಲ್ಲಿ ಭಸಿತದ ತಿಲಕವಿಟ್ಟು ತಲೆಬಾಚಿ, ಆಭರಣ ತೊಡಿಸಿ, ರತ್ನಮಯವಾದ ದುಂಡುಹಾರ ಹಾಕಿದರು.

ಮುತ್ತೈದೆಯರು ಗಿರಿಜೆಯನ್ನು ಶೃಂಗಾರಗೊಳಿಸಿದ ರೀತಿಯು ಮನ್ಮಥನನ್ನು ಪೂಜಿಸುವಂತೆ, ಚಂದ್ರಕಳೆಯನ್ನು ಚಿಗುರಿಸುವಂತೆ, ಹರನ ಮನೋರಥವನ್ನು ಪರಾಕಾಷ್ಠೆಗೆ ಮುಟ್ಟಿಸುವಂತೆ ಇತ್ತು. ಹಾಗೆ ಅವರು ಅಲಂಕರಿಸಿ ಆರತಿಎತ್ತಿ ಕೊಂಡಾಡಿದರು.

ಕರ್ಣಂಗಳ್ ಶರಣಜನ ಸಂಗೀತಾಮೃತ ಸಂಪೂರ್ಣಂಗಳ್

ಶ್ರೇಷ್ಠ ಗಣನಾಥರಲ್ಲಿ ದೇವೋತ್ತಮನಾದ ಪರಮೇಶ್ವರನು ಕೈಲಾಸಾದ್ರಿಯಲ್ಲಿ ಸಪ್ತರ್ಷಿಗಳಿಂದ ಸಂತೋಷವಾರ್ತೆಯನ್ನು ಕೇಳಿದನು. ಪುಳಕಗೊಂಡ ಮನಸ್ಸಿನಲ್ಲಿ ಮದುವಣಿಗತನವನ್ನು ನಟಿಸಿದನು.

ಶಿವನ ಜಡೆಗಳು ಹೊಸ ಹವಳದ ಕುಡಿ, ನವಕಾಂತಿ ಜಲದ ಮಡು, ಚೆಲುವಿನ ನೆಲೆ, ಸುಕೃತದ ಗುಡಿ, ಮಹಿಮೆಗಳ ನಟ್ಟನಡುವಾಗಿದ್ದವು. ಹಣೆಯು ಬಹಳ ಸುಂದರವಾಗಿ ಕಾಂತಿಯಿಂದೊಡಗೂಡಿ ವಿಶಾಲವಾಗಿದ್ದು ಶೃಂಗಾರ ರಸೋಜ್ವಲವಾಗಿತ್ತು. ಹುಬ್ಬುಗಳು ಗಣನಿಕರದ ಉಗ್ರತೆಯೋ, ಹರಿ ಬ್ರಹ್ಮ ಸುರ ಪದವಿಗಳ ಹೆಮ್ಮೆಯೋ ಎಂಬಂತಿದ್ದವು. ಮೂಗು ಮಂಜುಳ ಮುಖಕ್ಕೆ ಕಲ್ಯಾಣ, ಜಗತ್ತಿನ ಮುಖ್ಯ ಜೀವನನೆನಿಸಿರುವ ಪವನನ ಪ್ರಾಣ, ಸರ್ವ ಅವಯವಗಳ ತ್ರಾಣ, ಪರಿಮಳ ಪರೀಕ್ಷೆಯ ತಾಣವಾಗಿತ್ತು. ಕರ್ಣಗಳು ನವಕಿರಣಗಳಂತೆ ಶೋಭಿಸುತ್ತ, ಶರಣಜನ ಸಂಗೀತದ ಅಮೃತದಿಂದ ತುಂಬಿದ್ದವು. ಅಲ್ಲಿ 'ನಮಃ ಶಿವಾಯ' ಎಂಬ ಪಂಚಾಕ್ಷರವರ್ಣಗಳು ಮತ್ತು ಸರ್ಪವು ಹಬ್ಬಿ ವಿಸ್ತಾರಗೊಳ್ಳುತ್ತಿದ್ದವು.

ಶಿವನ ಮುಖವು ಕರುಣಾಮೃತ ಸದನವಾಗಿದ್ದು. ಶರಣಾದ ಜನರ ಅವಿದ್ಯೆಯನ್ನು ಹೋಗಲಾಡಿಸುತ್ತಿತ್ತು. ಕೊರಳು ಘನ ಗರಳದಿಂದ ಕೂಡಿ ಉನ್ನತ ಭಾವದಲ್ಲಿದ್ದು, ಮಧುರಧ್ವನಿಯ ಮೂಲವಾಗಿ ಜನತಾ ಜೀವವಾಗಿತ್ತು.

ಶಿವನ ತೋಳುಗಳು ನೆನೆಯುವವರ ಚಿತ್ತದ ಬದುಕಾಗಿ, ವರ ನೀಡಲು ಸದಾ ಬಯಸುವವುಗಳಾಗಿದ್ದವು. ಗಿರಿರಾಜ ಪುತ್ರಿಯ ಆಲಿಂಗನದ ಅಳುಗಳಾಗಿದ್ದವು. ಕೈಗಳು ಅನೇಕ ವರ ನೀಡಿದ ಸುಪಾಣಿಗಳಾಗಿದ್ದವು.

ಶಿವನ ಎದೆ ವರ ಸುಖಸಾಗರವಾಗಿದ್ದು ಗಿರಿಜಾ ಕಾಂತೆಗೆ ಮುಡುಪಾದ ಸ್ಥಳವಾಗಿತ್ತು. ತೊಡೆಗಳು ಗಿರಿಜೆಯು ತಲೆಗಿಂಬಾದ ದಿಂಬಾಗಿದ್ದು, ನವ ಕಾಂತಿ ಲಕ್ಷ್ಮಿ ಸಂತೋಷದಿಂದಿರುವ ಎಡೆಗಳಾಗಿದ್ದವು. ಪಾದಗಳು ಭಕ್ತಜನರ ಅಂತಃಕರಣ, ನಂಬಿದವರ ಪ್ರಾಣ, ತ್ರಿಲೋಕ ಶರಣರ ಆಭರಣಗಳಾಗಿದ್ದವು. ಪರಶಿವನ ಇಡೀದೇಹ ನವ ಸೌಂದರ್ಯನಿಧಿಯಾಗಿ ಕಂಗೊಳಿಸಿತ್ತು.

ಶಿವನ ಪುಣ್ಯ ಲಾವಣ್ಯಮಯ ಸುಕುಮಾರ ಅವಯವಗಳನ್ನು ಕಂಡು ಆಶ್ಚರ್ಯಪಟ್ಟ ನಂದೀಶ್ವರನು ಬಂದು ರುಂಡಮಾಲೆಯನ್ನು ತೆಗೆದು ಮಣಿಕಿರೀಟ ತೊಡಿಸಿದನು. ಅಗ್ನಿನೇತ್ರವನ್ನು ಭಸಿತದಿಂದ ಮರೆಮಾಡಿ ಬಾಸಿಂಗವನ್ನು ಕಟ್ಟಿದನು. ಕಿವಿಯ ನಾಗಕುಂಡಲಗಳನ್ನು ತೆಗೆದು ವತಂಸ ಎಂಬ ಕಿವಿಯ ಆಭರಣವನ್ನು ತೊಡಿಸಿದನು. ಕೂರ್ಮಶಿರವನ್ನು ತೆಗೆದು ಪದಕವಿರುವ ತೋರಹಾರವನ್ನು ಹಾಕಿದನು.

ಸರ್ಪೋಪವೀತವನ್ನು ತೆಗೆದು ಯಜ್ಞೋಪವೀತವನ್ನು ತೊಡಿಸಿದನು. ಕೀರ್ತಿಮುಖ ಎಂಬ ಬಳೆಯಾಕಾರದ ಆಭರಣವನ್ನು ತೆಗೆದು ಬಾಹುಪೂರವನ್ನು ತೊಡಿಸಿದನು. ಉರಗ ಕಂಕಣವನ್ನು ಕಳೆಚಿ ರತ್ನ ಕಂಕಣವನ್ನು ತಿರುಪಿದನು. ಬ್ರಹ್ಮಕಪಾಲವನ್ನು ತೆಗೆದು ದರ್ಬೆಯಿಂದ ಮಾಡಿದ ಪುಣ್ಯ ಪವಿತ್ರವನ್ನು ಕೈಗೆ ಹಾಕಿದನು. ಖಟ್ವಾಂಗವನ್ನು ಬಿಡಿಸಿ ಮಧುಫಲವನ್ನಿಟ್ಟನು. ಗಜ ಚರ್ಮವನ್ನು ತೆಗೆದು ನಿರ್ಮಲ ಉತ್ತರೀಯವನ್ನು ಹೊದಿಸಿ, ಹುಲಿ ಚರ್ಮವನ್ನು ತೆಗೆದು ರೇಷ್ಮೆವಸ್ತ್ರವನ್ನು ಉಡಿಸಿದನು.

ಹೀಗೆ ಶಿವಯೋಗಕ್ಕೆ ಮುಕ್ತಿಯನ್ನು, ಮುಕ್ತಿಗೆ ವೈರಾಗ್ಯವನ್ನು, ವೈರಾಗ್ಯಕ್ಕೆ ಶಿವ ಜ್ಞಾನವನ್ನು, ಶಿವ ಜ್ಞಾನಕ್ಕೆ ಭಕ್ತಿಯನ್ನು, ಭಕ್ತಿಗೆ ಪುಣ್ಯವನ್ನು, ಪುಣ್ಯಕ್ಕೆ ಸತ್ಕ್ರಿಯೆಯನ್ನು, ಸತ್ಕ್ರಿಯೆಗೆ ಪಾವನ ಜನ್ಮವನ್ನು ಅಲಂಕರಿಸುವಂತೆ – ಪರ ಬ್ರಹ್ಮಚರ್ಯೆಯು, ಬ್ರಾಹ್ಮಣೋತ್ತಮನೂ ಆದ ವಿರೂಪಾಕ್ಷನಿಗೆ ನಂದೀಶ ಮೊದಲಾದ ಗಣನಾಯಕರು ಶೃಂಗಾರ ಮಾಡಿ ಪಕ್ಕದಲ್ಲಿ ನಿಂತುಕೊಂಡರು. ನೋಡಲು ಅಂಜುತ್ತ ಕಣ್ಣುಮುಚ್ಚಿ ಭಯದಿಂದ ಶಿವ ಶಿವ ಎಂದರು!

ದಧೀಚಿ, ದೂರ್ವಾಸ, ವಶಿಷ್ಠ, ವಾಮದೇವ, ಭೃಗು, ಕಶ್ಯಪಾದಿ ಮುನಿಗಳು ಶಿವನ ಕಾಂತಿಯನ್ನು ಕಂಡು ಈಕ್ಷಿಸಲಾರದೆ ಚೇತೋದೃಷ್ಟಿಯಿಂದ ನೋಡಿದರು!.

ಜ್ಯೋತಿಗಿಂತ ಅಗ್ನಿಯ ಕಾಂತಿ ಮಿಗಿಲು; ಆ ಜ್ಯೋತಿ, ಅಗ್ನಿಗಿಂತ ಚಂದ್ರನ ಬೆಳದಿಂಗಳು ಮಿಗಿಲು. ಆ ಜ್ಯೋತಿ, ಅಗ್ನಿ, ಬೆಳದಿಂಗಳುಗಳಿಗಿಂತ ಸೂರ್ಯನು ಮಿಗಿಲು. ಆ ಜ್ಯೋತಿ, ಅಗ್ನಿ, ಬೆಳದಿಂಗಳು, ಸೂರ್ಯನ ಕಾಂತಿಗಿಂತ ವಿರೂಪಾಕ್ಷನ ತೇಜಸ್ಸು ಅತಿಮಿಗಿಲು ಎಂದು ಪರಶಿವನನ್ನು ಪ್ರಶಂಸಿಸುತ್ತ ಮದುವೆಯ ಮಂಟಪಕ್ಕೆ ದೇವತೆಗಳು ಬಂದರು.

ಶ್ರೀಮನ್ನಾರಾಯಣನು ಗರುಡನನ್ನೂ, ಬ್ರಹ್ಮನು ಹಂಸೆಯನ್ನೂ, ದೇವೇಂದ್ರನು ಐರಾವತವನ್ನೂ, ಅಗ್ನಿಯು ಟಗರನ್ನೂ, ಯಮನು ಕೋಣವನ್ನೂ ಹೀಗೆ ಸಕಲ ದೇವತೆಗಳು ಅವರವರ ವಾಹನಗಳನ್ನು ಏರಿ, ನಂದೀಶ್ವರನಾದ ಪರಮೇಶ್ವರನ ವಿವಾಹ ಮಹೋತ್ಸವಕ್ಕೆ ಆಗಮಿಸಿದರು. ಏಕಾದಶರುದ್ರರು, ದ್ವಾದಶಾದಿತ್ಯರು, ಅಷ್ಟವಸುಗಳು, ರಾಜರ್ಷಿಗಳು, ಬ್ರಹ್ಮರ್ಷಿಗಳು, ದೇವರ್ಷಿಗಳು ಬಂದರು.

ಹೊಸ ಮದುವಣಿಗನಾದ ಪಂಪಾವಿರೂಪಾಕ್ಷ

ಸುರ, ಖೇಚರ, ಕಿನ್ನರ, ಗರುಡ, ಸಿದ್ಧ, ಗಂಧರ್ವರ ಬಲಗಳೆಲ್ಲವೂ ಬಂದವು. ಅವುಗಳನ್ನೆಲ್ಲಾ ಮದನಮರ್ದನ ಶಿವನು ನೋಡುತ್ತಿರುವಾಗ ಪ್ರಮಥಗಣವರರು ತಮ್ಮ ಬಲಸಹಿತ ಬಂದರು. ಅವರೆಲ್ಲರನ್ನೂ ಗೌರವಿಸಿ ಶಿವನು ನಂದಿಯನ್ನು ನೋಡಿದನು.

ನಂದಿಯು ಎದ್ದುನಿಂತು ತನ್ನ ಶ್ವಾಸಮಾತ್ರದಿಂದಲೇ ದೇವಕೋಟಿಯನ್ನು ತೂಗುಯ್ಯಾಲೆಯಂತೆ ಆಡಿಸಿ ಹರ್ಷವನ್ನುಂಟುಮಾಡಿ ಸ್ವಾಗತಿಸಿದನು. ಹರಿಬ್ರಹ್ಮ ಇಂದ್ರಾದಿದೇವತಾ ಸಮೂಹ ಹಾಗೂ ಮುನಿಗಳು 'ಹರಹರ' ಎಂದು ಜಯಘೋಷ ಮಾಡುತ್ತಿರಲು ಮಹೇಶ್ವರನು ನಂದಿಯನ್ನು ಏರಿ ವಿವಾಹ ಮಂಟಪಾಭಿಮುಖವಾಗಿ ಹೋದನು. ಅವನೊಡನೆ ಎಲ್ಲರೂ ತಮ್ಮ ಚತುರಂಗಬಲಗಳೊಡನೆ ಹೊರಟರು.

ದಿಗ್ಗಜಗಳ ಮೇಲೆ ದೇವಾಂಗ ವಸ್ತುಗಳು, ಪಟ್ಟೆವಸ್ತುಗಳು, ಸಾದಿನ ಪೆಟ್ಟಿಗೆಗಳು,

ಕರ್ಪೂರದ ಭರಣಿಗಳು, ಪನ್ನೀರ ಭಾಜನಗಳು, ಕತ್ತುರಿಯ ಭಾಂಡಗಳು, ಶ್ರೀಗಂಧದ ಬಟ್ಟಲುಗಳು, ರತ್ನಾಭರಣ ರಾಶಿಗಳನ್ನು ಹೊತ್ತು ಸಾಗಿದರು. ಬಿಳಿಯ ಕಬ್ಬು, ಸುರತರು, ಸುರಭಿ ಸಮೂಹದ ಮುಂದೆ ವೃಷಭ ಧ್ವಜದೊಡನೆ ಕಳಶ ಕನ್ನಡಿ ಹಿಡಿದು ಅರುಂಧತಿ, ಅನಸೂಯೆ, ಗಾಯತ್ರಿ ಮುಂತಾದ ಪತಿವ್ರತೆಯರು ಮೆಲ್ಲನೆ ಅಡಿಯಿಡುತ್ತ ಸಾಗಿದರು.

ಭೇರಿ, ನಿಸ್ಸಾಳ, ಶಂಖ, ಕಹಳೆ, ಮದ್ದಳೆ, ಕರಂಡ, ಕಂಸಾಳೆ, ಗಿರ್ಗಿಟ, ತಾಳ, ಗಾನ, ಭೃಂಗಿ ನರ್ತನದ ಮೋಹಕ ಮೇಳದೊಡನೆ ಶ್ವೇತಚ್ಛತ್ರದಡಿಯಲ್ಲಿ ಬಾಸಿಂಗ ಧರಿಸಿ ಶಶಿಕಳೆಯ ಸೊಬಗ ಪರಶಿವನು ವಿವಾಹಮಂಟಪಕ್ಕೆ ಬಂದನು. ಮುತ್ತೈದೆಯರು ಎದುರ್ಗೊಂಡು ದೃಷ್ಟಿ ತೆಗೆದರು. ಕುಲಾಂಗನೆಯರು ಮುತ್ತಿನ ಸೇಸೆಗಳನ್ನು ಸೂಸಿದರು.

ಶಿವನು ನಂದಿಯಿಂದ ಇಳಿಯುವಾಗ ಪ್ರಮಥಗಣವರರು ಕೈ ನೀಡಿದರು. ಕಲ್ಯಾಣಮಂಟಪ ಪ್ರವೇಶಿಸುವಾಗ ಅತ್ತೆ ಮೇನಾದೇವಿ ಮತ್ತು ಮಾವ ಗಿರಿರಾಜರು ನಮಸ್ಕರಿಸಿದರು. ಅವರನ್ನು ಕರುಣಿಸಿದ ಶಿವನು ಸಿಂಹಾಸನದಲ್ಲಿ ಕುಳಿತು ಸವಿ ಅನ್ನವನ್ನುಂಡು, ಮಧುಪರ್ಕವನ್ನು ಸ್ವೀಕರಿಸಿದನು.

ಹರಿ ಬ್ರಹ್ಮರು ಮುಹೂರ್ತವು ಸಮೀಪಿಸಿತೆಂದು ತಿಳಿಸಲು ವಿರೂಪಾಕ್ಷನು ಸಿಂಹಾಸನದಿಂದ ಎದ್ದು ಸುಮುಹೂರ್ತಕ್ಕೆ ನಡೆದನು. ಮಂಟಪದಲ್ಲಿ ಮುತ್ತೈದೆಯರು ಕಿಕ್ಕಿರಿದು ನೆರೆದಿರಲು ಬೆಳಗಿನೊಳಗೆ ಹೊಸ ಬೆಳಗಾಗಿ ಸವಿನೋಟವನ್ನು ನೀಡುತ್ತ ಶಿವನು ಜವನಿಕೆ (ತೆರೆ)ಯ ಹತ್ತಿರ ಬಂದನು. ತೆರೆಯ ಹಿಂದೆ ಕಾಣದಂತೆ ಗಿರಿಜೆಯು ಮೆಟ್ಟಕ್ಕಿಯನ್ನು ಮೆಟ್ಟಿ ನಿಂತಿದ್ದಳು.

ಆ ವಧೂವರರ ನಡುವೆ ಇದ್ದ ಜವನಿಕೆಯು – ಲಲಿತ ನೋಟಗಳ ನಡುವೆ ರೆಪ್ಪೆಗಳೂ, ಪಕ್ಕ ವಾದ್ಯಗಳ ಮಧ್ಯದಲ್ಲಿ ಹಾಡುವ ಸೊಲ್ಲೂ ಇರುವಂತೆ ಇತ್ತು. ನವ ಭೋಗಿಯೂ, ಲೀಲಾವಿಲಾಸನೂ ಆದ ಪರಶಿವನು ಮೆಟ್ಟಕ್ಕಿಯನ್ನು ಮೆಟ್ಟಿ ನಿಂತುಕೊಂಡನು. ಹರಿ ಬ್ರಹ್ಮ ಇಂದ್ರಾದಿ ದೇವತೆಗಳೊಡನೆ ಸಕಲರೂ ತನ್ನಯರಾಗಿರುವಾಗ ವೈದಿಕ ಸ್ವಸ್ತಿವಾಚನ ನಡೆಯಿತು.

ಗಿರಿರಾಜನು ಶಿವ ಗಿರಿಜೆಯರ ಕಲ್ಯಾಣಕ್ಕೆ ಸಭೆಯ ಅನುಮತಿಗಾಗಿ 'ಆಯತವೇ' ಎಂದು ಕೇಳಿದನು. ಸಭೆ 'ಆಯತ' ಎಂದಿತು. ದೇವಗುರು, ಸಕಲ ವೇದಾಗಮ ಕೋವಿದರು ಭಕ್ತಿಯಿಂದ ಪುಣ್ಯಾಹ ಎಂದಾಗ ತೆರೆ ಸರಿಯಿತು. ಅದೇ ಸಮಯಕ್ಕೆ ನಿಸ್ಸಾಳ, ಭೇರಿ, ಮೃದಂಗಗಳು ಮೊಳಗಿದುವು. ಹೂಮಳೆ ಸುರಿಯಿತು. ಮಂಗಳ ಗೀತೆಗಳು ಹೊಮ್ಮಿಬಂದವು.

ಶಿವನ ತಲೆಯ ಮೇಲೆ ಜೀರಿಗೆ ಬೆಲ್ಲವನ್ನು ಇಡುವಾಗ ಗಿರಿಜೆಯು ಅವನ ತಲೆಯಲ್ಲಿ ಮತ್ತೋರ್ವಳಿರುವುದನ್ನು ಕಂಡು, ಮುನಿದಿಟ್ಟಳೋ ಎಂಬಂತೆ ಜೀರಿಗೆ ಬೆಲ್ಲವನ್ನು ಇಟ್ಟಳು. ಮೃಡನು ಗಿರಿಜೆಗೆ ಜೀರಿಗೆ ಬೆಲ್ಲವನ್ನು ಇಡುವಾಗ ಅವಳ ಮುಖವನ್ನು ನೋಡಿ ಸಾತ್ವಿಕ ಭಾವಕ್ಕೊಳಗಾದನು. ಕೈನಡುಗಿ ಒಲಿದಿಟ್ಟ ಜೀರಿಗೆ ಬೆಲ್ಲ ಅವಳ ಪಾದಗಳಲ್ಲಿ ಬಿತ್ತು.

ಆ ವಿವಾಹ ಶಾಸ್ತ್ರವಾದ ಮೇಲೆ ವಧೂವರರು ಬೊಗಸೆಯಲ್ಲಿ ತಂಡುಲ (ಅಕ್ಕಿ) ತುಂಬಿಕೊಂಡು ಪರಸ್ಪರರ ತಲೆಯ ಮೇಲೆ ಎರಚಾಡುವ ಒಲವಿನ ಆಟ. ಆಗ ಗಿರಿಜೆಯು ಎರಚಿದ ತಂಡುಲವು ಶಿವನ ಮಕುಟವೆಂಬ ಚಂದ್ರನಿಗೆ ಮುಡಿಸಿದ ಚಿಕ್ಕೆಗಳಂತಿದ್ದವು.

ಗಿರೀಶನು ಗಿರಿಜೆಯ ತಲೆಯ ಮೇಲೆ ಸುರಿದ ತಂಡುಲವು – ಪರಮ ತಪೋನಿಧಿಯೆನಿಸಿದ ಅವಳಿಗೆ ಪುಣ್ಯತೀರ್ಥದಿಂದ ಅಭಿಷೇಕ ಮಾಡಿದಂತಿತ್ತು.

ಆ ಸಮಯದಲ್ಲಿ ನಲಿನಲಿದು ಬಂದ ಗಿರಿಪತಿ ಮತ್ತು ಮೇನೆಯರು ' ಗಿರಿಜೆ ಸಹಿತ ನಾವೆಲ್ಲರೂ ನಿಮ್ಮ ಸೇವೆಯಲ್ಲಿರುವವರು' ಎಂದು ಶಿವನಿಗೆ ಹೇಳುತ್ತ ಧಾರೆಯೆರೆದರು. ಮದುವೆ ಸಂದರ್ಭದಲ್ಲಿ ಅವರನ್ನು ಸುತ್ತಿದ ನೂಲು – ಹರನೇ, ಗಿರಿಜಾತೆಯ ಸಕಲ ಗುಣಗಳು ಹೀಗೆ ನಿಮ್ಮನ್ನು ಸದಾ ಸುತ್ತುವರೆದಿರುತ್ತದೆ – ಎಂಬಂತಿತ್ತು.

ಐದು ವದನನ ಕಾಂತೆಯನ್ನು ಮುತ್ತೈದೆಯರು ದೀರ್ಘ ಸುಮಂಗಲಿಯಾಗಿ ಬಾಳು ಎಂದು ಹರಸಿದರು.

ಗಿರಿಜೆಯನ್ನು ಪಾಣಿಗ್ರಹಣ ಮಾಡಿದ ಶಿವನು ಹೋಮ ಸ್ಥಳಕ್ಕೆ ಬಂದನು. ಹಸೆಯ ಮೇಲೆ ಕುಳಿತನು. ಪುರೋಹಿತ ಪರಮೇಷ್ಟಿಯು ಹರನ ಅನುಜ್ಞೆಯಂತೆ, ಬ್ರಹ್ಮರ್ಷಿ ದೇವರ್ಷಿಗಳ ಅನುಮತದಿಂದ ಹೋಮ ಮಾಡಿದನು. ಶಿವನ ಬಲಭಾಗದಲ್ಲಿ ಕುಳಿತ ಗಿರಿಜೆಯು ಮಂತ್ರೋಕ್ತವಾಗಿ ಅಗ್ನಿಯಲ್ಲಿ ಲಾಜಾಹುತಿಗಳಿಂದ ಹೋಮ ಮಾಡಿದ ಅನಂತರ ಶಿವನ ಎಡಭಾಗಕ್ಕೆ ಬಂದಳು. ಆಗ ಶಿವನು ಪೂರ್ಣಾಹುತಿಯನ್ನು ಕೊಟ್ಟು ಹೋಮವನ್ನು ಸಮಾಪ್ತಿಗೊಳಿಸಿದನು. ವಧೂವರರು ಸಪ್ತಪದಿ ತುಳಿದರು.

ದೇವ ದಂಪತಿಗಳು ಸಿಂಹಾಸನದಲ್ಲಿ ಅಲಂಕರಿಸಿದರು. ಕುಬೇರನ ಮೂಲಕ ನಾರದಾದಿ ಋಷಿಗಳನ್ನು ಬರಮಾಡಿಕೊಂಡು ಭೋಜನಕ್ಕೆ ಏರ್ಪಡಿಸಲಾಯಿತು. ಹರಿ ಬ್ರಹ್ಮ ಇಂದ್ರ ಸಮಸ್ತ ದೇವತೆಗಳು; ನಂದೀಶ್ವರ, ವೀರಭದ್ರಾದಿಗಳು ಪಂಕ್ತಿಯಲ್ಲಿ ಕ್ರಮವಾಗಿ ಕುಳಿತು ಊಟ ಮಾಡಿದರು. ಪಾರ್ವತಿಯೊಡನೆ ಶಿವನು ಅಮೃತಾನ್ನವನ್ನು ಸೇವಿಸಿದನು. ಎಲ್ಲರೂ ತಾಂಬೂಲವನ್ನು ಸವಿದರು.

ನಾಲ್ಕು ದಿನಗಳಾದ ಮೇಲೆ ಓಕುಳಿಯಾಡಿದರು. ಪರಶಿವನು ಗಿರಿರಾಜ ಮೇನೆಯರನ್ನು ಮನ್ನಿಸಿದನು. ಬಳುವಳಿಯಾಗಿ ನೀಡಿದ ಆನೆ, ರತ್ನ, ಅಶ್ವ ಮುಂತಾದವುಗಳನ್ನು ಮೆಚ್ಚುಗೆಯಿಂದ ಈಕ್ಷಿಸುತ್ತ ಗಿರಿಜೆಯೊಡನೆ ವೃಷಭಾರೂಢನಾಗಿ ಕೈಲಾಸಕ್ಕೆ ಬಂದನು.

ಆಗ ಹರ ಬಂದ, ಗಿರಿಜಾವರ ಬಂದ, ಮಹೇಶ ಬಂದ ಎನ್ನುತ್ತ ದಿಕ್ಕು ದಿಕ್ಕಿಗೆ ಕಹಳೆಯ ಧ್ವನಿ ಮೊಳಗಿದವು. ಏರಿಸಿದ ಬಾವುಟಗಳಿಂದ ಅಲಂಕರಿಸಿದ ತೋರಣಗಳಿಂದ, ಕುತೂಹಲದ ಕಣ್ಣ ಅಬಲೆಯರ ಸಂದಣಿಯಿಂದ ಪುರದ ಲಾವಣ್ಯ ಇಮ್ಮಡಿಸಿತು. ಅದನ್ನು ಕಂಡ ಶಿವನ ಕಣ್ಣು ಮತ್ತು ಮನಸ್ಸು ಉಲ್ಲಾಸಗೊಂಡಿತು.

ವಸುಧಾವರ ದಂಪತಿಗಳು

ಶಿವ ಶಿವೆಯರನ್ನು ನೋಡಲು ಜಗುಲಿ, ಮಹಡಿ, ಮರ, ಗೋಪುರಗಳ ಮೇಲೆ ಏರಿನಿಂತ ಕೈಲಾಸಪುರದ ಕಾಂತೆಯರ ಮುಖಗಳು ಚಂದ್ರಬಿಂಬಗಳಂತೆ, ಕಮಲ ಸಮೂಹದಂತೆ ಇದ್ದವು. ಅವರಲ್ಲಿ ಒಬ್ಬಳು ಉತ್ಸಾಹದಿಂದ,

'ಅಗೋ ನೋಡಿ! ಮೆರವಣಿಗೆಯ ಮಧ್ಯದಲ್ಲಿ ವೃಷಭನ ಮೇಲೆ ಕುಳಿತಿರುವವನೇ ಶಿವ! ಅವನನ್ನು ಪ್ರೀತಿಯಿಂದ ಅಪ್ಪಿಕೊಂಡಿರುವವಳೇ ಗಿರಿಜೆ! ಆಹಾ! ಎಂಥ ಚೆಲುವು! ಎಂಥ ದಂಪತಿಗಳು! ಜಗತ್ಪ್ರಭುಗಳು ಸುಭಾಗ್ಯರು! ನನ್ನ ಒಡೆಯರು!' ಎಂದಳು.

ಮತ್ತೊಬ್ಬಳು 'ಓಹ್! ಇವರು ಸ್ಥಿರ, ಮಂಗಳ, ವಿಶೇಷ ದಂಪತಿಗಳು! ವಸುಧಾವರ

ದಂಪತಿಗಳು!' ಎಂದು ಕೊಂಡಾಡುತ್ತಿದ್ದಳು. ಆ ಸಂಭ್ರಮವನ್ನು ನೋಡುತ್ತ ಸಂತಸದಿಂದ ಶಿವನು ಅರಮನೆಗೆ ಬಂದನು.

ಶಿವ ಪಾರ್ವತಿಯರಿಗೆ ರುದ್ರ ಗಣಿಕೆಯರು ಆರತಿ ಎತ್ತಿದರು. ವಿಷ್ಣು ಬ್ರಹ್ಮರು ಹೊಗಳಿದರು. ದೇವತೆಗಳು ಕೊಂಡಾಡಿದರು. ನಂದಿಯಿಂದಿಳಿದ ಶಿವನು ಸಿಂಹಾಸನವನ್ನು ಏರಿದನು.

ಗಿರಿಪತಿ ಮೇನಾದೇವಿಯರು ಮಗಳು ಗಿರಿಜೆಗೆ 'ಮಗಳೇ, ನಿನಗೆ ಇನ್ನು ಶಿವನೇ ತಾಯಿ ತಂದೆ ಎಲ್ಲವೂ. ಅವನೇ ಸ್ಥಿರಾಯು, ಸುಕೃತ, ಖ್ಯಾತಿ, ಅಪಾರ ಸುಖ. ಅವನನ್ನು ಮರೆತು ಒಮ್ಮೆಯೂ ಇರಬೇಡ' ಎಂದು ಹಿತವಚನ ಹೇಳಿ ಪರಶಿವನಿಂದ ಬೀಳ್ಕೊಟ್ಟರು.

ಪರಮೇಶ್ವರನಿಗೆ ಚಂಡಕೀರ್ತಿಗಳು ವಂದಿಸುತ್ತ – ಅತುಳ ಕಪಾಲಿ ಪಾಲಿಸು. ಚಂದ್ರ ಭೂಷಿತ, ಭಸ್ಮ ರೂಪಿತಕಾಯ, ಸಿದ್ಧ ಸಕಳಾತ್ಮ ಶೇಷಪೂಜಿತ ಕಾಪಾಡು. ಕಾಲನನ್ನು ಗೆದ್ದವನೇ, ನೀಲಕಂಠನೇ ಸಲಹು. ಜಂಗಮ ಕೃಪಾವನ ಪಾವನ, ಭಕ್ತಜನ ಭಾಗ್ಯೋದಯ, ಮುಕ್ತಿ ಪ್ರದಾಯಕ, ಪಾರ್ವತಿ ಪ್ರಾಣನಾಥ, ಹಂಪೆಯಾಳ್ದ ಪಂಪಾ ವಿರೂಪಾಕ್ಷ, ಕರುಣಿಸು ಎಂದು ಸ್ತುತಿಸಿದರು. ಅವರ ಸ್ತೋತ್ರವನ್ನು ಕೇಳಿ ಶಿವ ಅವರಿಗೆ ಉಡುಗೊರೆಗಳನ್ನು ಕೊಟ್ಟನು.

ಗಿರಿಜಾ ಮನೋಹರನೂ, ಆನಂದ ಸಾಗರ ಸುಧಾಕಿರಣನೂ ಆದ ಪರಮೇಶ್ವರನು ಗಿರಿಜೆಯೊಡನೆ ಕೈಲಾಸದಲ್ಲಿ ಸುಖದಿಂದಿದ್ದನು.

ತ್ರಿಲೋಕ ಕಂಟಕನಾಗಿದ್ದ ತಾರಕಾಸುರನ ಸಂಹಾರದ ಕಾಲ ಸಮೀಪಿಸಿತು. ಪಂಚಮುಖ, ದಶಭುಜಗಳೊಡನೆ ಶೋಭಿಸುವ ಪರಮೇಶ್ವರನಿಗೆ ಷಣ್ಮುಖ (ಸ್ಕಂದ) ಉದಯಿಸಿದನು. ಸ್ಕಂದನು ಹುಟ್ಟಿದ ಏಳು ದಿನಗಳಲ್ಲಿಯೇ ತಾರಕಾಸುರನನ್ನು ಕೊಂದು ಹಾಕಿದನು.

ಪರಶಿವನು ಸಮಸ್ತಲೋಕಕ್ಕೆ ಸಂತುಷ್ಟಿಯನ್ನುಂಟು ಮಾಡಿದನು. ಅದ್ವಯ ರೂಪನಾದ, ಶರಣಾದವರಿಗೆ ಬೇಡಿದ ವರಗಳನ್ನು ಕರುಣಿಸುವ ಹಂಪೆಯ ವಿರೂಪಾಕ್ಷನು ಕೈಲಾಸದಲ್ಲಿ ಶೋಭಿಸುತ್ತಿದ್ದನು.

* * * * *

ಅನುಬಂಧ –೧

ಕಠಿಣ ಶಬ್ದಾರ್ಥಕೋಶ

ಅ

ಅಂಕುರ – ಮೊಳಕೆ.

ಅಂಜಲಿ – ಬೊಗಸೆ.

ಅಗ – ಬೆಟ್ಟ, ಪರ್ವತ.

ಅಗರಾಜ – ಗಿರಿರಾಜ.

ಅಗ್ನಿಹೋತ್ರ – ಅಗ್ನಿಯನ್ನು ಉದ್ದೇಶಿಸಿ ಮಾಡುವ ಹೋಮ.

ಅಚಳಿತ – ಸ್ಥಿರ, ಶಾಶ್ವತ, ನಿತ್ಯ; ಪರಮಾತ್ಮ.

ಅಟ್ಟಳೆ – ಕೋಟೆಯ ಬುರುಜು, ಕೋಟೆಯ ಮೇಲಿನ ಶಸ್ತ್ರಗಳ ಹಾಗೂ ಕಾವಲುಗಾರನ ಕೊಠಡಿ.

ಅದ್ವಯ – ಎರಡಿಲ್ಲದ; ಅದ್ವೈತ; ತಾನೊಂದೆ ಆದ.

ಅನಂಗ – ಶರೀರವಿಲ್ಲದ; ಮನ್ಮಥ.

ಅನುಪಮ – ಅಸಾಮಾನ್ಯ, ಹೋಲುವೆಯಿಲ್ಲದ.

ಅನೂನ – ಕುಂದಿಲ್ಲದ, ಕೊರತೆಯಿಲ್ಲದ.

ಅಪ್ರತಿಹತ – ಸೋಲಿಲ್ಲದ.

ಅಭವ – ಹುಟ್ಟಿಲ್ಲದವ, ಶಿವ.

ಅಭಿಸಾರಿಕೆ – ಪ್ರಿಯನನ್ನು ಕೂಡಲು ಸಂಕೇತ ಸ್ಥಾನಕ್ಕೆ ಹೋಗುವ ಹೆಂಗಸು.

ಅರವಟ್ಟಿಗೆ – ಬೇಸಗೆಯಲ್ಲಿ ದಾರಿಗರಿಗೆ ನೀರು ಕೊಡುವ ಸ್ಥಳ.

ಅಲರ್ – ಅರಳಿದ ಹೂವು.

ಅಲರ್ಗಣೆ – ಹೂವಿನ ಅಂಬು; ಪುಷ್ಪಬಾಣ.

ಅಲರ್ವಿಲ್ಲು – ಹೂವಿನ ಬಿಲ್ಲು.

ಅಳ್ಳಿರಿದು – ಚುಚ್ಚು; ತಿವಿ.

ಆ

ಆರ್ಪು – ಸಾಹಸ, ಸಾಮರ್ಥ್ಯ, ಪರಾಕ್ರಮ.

ಆಯತವೇ – ಮಂಗಳ ಕಾರ್ಯಗಳಲ್ಲಿ ಸಮ್ಮತವೇ ಎಂದು ಕೇಳುವುದು.

ಆರಭಟೀಗಳು – ಓಜಸ್ವಿ ಮಾತುಗಳಿಂದ ರೌದ್ರ ಬೀಭತ್ಸರಸಗಳನ್ನು ಅಭಿನಯಿಸುವ ವೃತ್ತಿಯವರು.

ಆರೋಗಣೆ – ಭೋಜನ; ಊಟ.

ಇ

ಇಂದುಧರ – ಚಂದ್ರನನ್ನು ಧರಿಸಿದವ; ಶಿವ.

ಉ

ಉರುತರ – ಬಹಳ ಶ್ರೇಷ್ಠವಾದ.

ಉಡುಪ – ನಕ್ಷತ್ರಗಳ ಒಡೆಯ; ಚಂದ್ರ.

ಉನ್ಮಾದನ – ಕಾಮನ ಪಂಚ ಬಾಣಗಳಲ್ಲಿ ಒಂದು. ಉನ್ಮಾದನ, ಮದನ, ಮೋಹನ, ಸಂತಾಪನ, ವಶೀಕರಣ – ಈ ಐದು ಮಂತ್ರ ಬಾಣಗಳು.

ಎ

ಎರವೇ? – ಬೇರೆಯವರೇ?, ಹೊರಗಿನವರೇ?

ಕ

ಕಂತು – ಕಾಮ, ಮನ್ಮಥ.

ಕಂದರ್ಪ – ಮನ್ಮಥ.

ಕಂದಮೂಲ – ಗೆಡ್ಡೆಗೆಣಸು.

ಕಟ್ಟಿದಿರು – ಕಣ್ಣಿನ ಮುಂದುಗಡೆ, ಮುಖಾಮುಖಿ.

ಕನ್ನೆ – ಮದುವೆಯಾಗದ ಹುಡುಗಿ.

ಕಪರ್ದಿ – ಶಿವ.

ಕಳಹಂಸೆ – ಕಂದುರೆಕ್ಕೆಯ ಹಂಸ.

ಕಾಮಹರ – ಕಾಮನನ್ನು ನಾಶಪಡಿಸಿದವನು; ಶಿವ.

ಕಿಂಪುರುಷರು – ಕುದುರೆಯ ತಲೆ ಮನುಷ್ಯನ ಶರೀರ ಅಥವಾ ಮನುಷ್ಯನ ಮುಖ ಕುದುರೆಯ ಶರೀರವುಳ್ಳ ಒಂದು ವಿಧವಾದ ದೇವತೆ.

ಕಿನ್ನರರು – ಕುದುರೆಯ ಮುಖ ಮತ್ತು ಮನುಷ್ಯ ಶರೀರದ ದೇವತೆಗಳ ವರ್ಗ ; ಇವರು ಕುಬೇರನ ಪ್ರಜೆಗಳೂ, ಕಶ್ಯಪನ ಮಕ್ಕಳೆಂದು ಕತೆ; ಅಪ್ಸರ ವರ್ಗ.

ಕೀಲಿಪುದು – ನಾಟಿಸುವುದು.

ಕುಚ – ಮೊಲೆ.

ಕೂರ್ಪುಕೊಡು – ಹರಿತಗೊಳಿಸು.

ಕೂರ್ಮಶಿರ – ಆಮೆಯ ಶಿರ.

ಕೇಳೀವನ – ಕ್ರೀಡಾವನ, ವಿಹಾರಕ್ಕಾಗಿ ಏರ್ಪಡಿಸಿದ ಉಪವನ.

ಖ

ಖೇಚರರು – ಆಕಾಶದಲ್ಲಿ ಅಲೆಯುವ ಗಂಧರ್ವರು.

ಗ

ಗಂಡಶೈಲ – ಹೆಬ್ಬಂಡೆ.

ಗಂಧಶಾಲಿ – ಸುವಾಸನೆಯ ಭತ್ತ.

ಗಣನಿಕರ – ಗಣಗಳ ಗುಂಪು.

ಗರಳ – ವಿಷ.

ಗುಳ – ಆನೆ ಕುದುರೆಗಳ ಮೇಲೆ ಹಾಕುವ ಪಾವುಡ; ಜೂಲು.

ಚ

ಚಂಡಕೀರ್ತಿ – ಈಶ್ವರನ ಪ್ರಮಥಗಣದಲ್ಲಿ ಒಬ್ಬ.

ಚಂಬಕ – ಒಂದು ಬಗೆಯ ಚರ್ಮವಾದ್ಯ.

ಚಕ್ರವಾಕ – ಸದಾ ಜೊತೆಯಾಗಿರುವ (ರಾತ್ರಿಯಲ್ಲಿ ಬೇರೆಯಾಗಿ ವಿರಹ ಅನುಭವಿಸುವ) ಕಲ್ಪನೆಯ ಜೋಡಿಹಕ್ಕಿ.

ಚೇತಸ್ಸು – ಮನಸ್ಸು, ಚಿತ್ತ.

ಚೇತೋದೃಷ್ಟಿ – ಮನಸ್ಸಿನ ನೋಟ.

ಜ

ಜಗಚ್ಚಕ್ಷು – ಜಗತ್ತಿನ ಕಣ್ಣು ರವಿ.

ಜಿತಕಾಮರು – ಮನ್ಮಥನನ್ನು ಗೆದ್ದವರು; ಯತಿ, ಮುನಿ, ತಪಸ್ವಿಗಳು.

ಜಿತಕಾಲ – ಮೃತ್ಯುವನ್ನು ಗೆದ್ದ.

ಜ್ಞಾತೃ – ತಿಳಿದುಕೊಳ್ಳುವವನು.

ಜ್ಞಾನ – ತಿಳಿವಳಿಕೆ.

ಜ್ಞೇಯ– ತಿಳಿಯಬೇಕಾದುದು.

ಝ

ಝುಂಕೆ – ಅಬ್ಬರ, ಆರ್ಭಟ, ಗರ್ಜನೆ.

ಡ

ಡೆಂಕಣಿ – ಕೋಟೆಕಾಳಗದಲ್ಲಿ ಉಪಯೋಗಿಸುತ್ತಿದ್ದಯಂತ್ರ; ಕಲ್ಲು ಗುಂಡುಗಳನ್ನು ತೂರುವ ಯಂತ್ರ.

ಡೌಡೆ – ಒಂದು ಬಗೆಯ ಚರ್ಮವಾದ್ಯ, ಡಿಂಡಿಮ.

ತ

ತಾಪಸರು – ತಪಸ್ವಿಗಳು, ಋಷಿಗಳು.

ತಾರಕೆ – ತಾರೆ, ನಕ್ಷತ್ರ.

ತಿತ್ತಿರಿಗಾಳೆ – ಉದ್ದವಾದ ಒಂದು ಬಗೆಯ ಊದುವ ವಾದ್ಯ.

ತ್ರಿದಶರು – ಬಾಲ್ಯ, ಕುಮಾರ, ಯೌವನಗಳೆಂಬ ಮೂರು ಅವಸ್ಥೆಗಳನ್ನು ಮಾತ್ರ ಉಳ್ಳವರು, ದೇವತೆಗಳು.

ತೋರಹಾರ – ದೊಡ್ಡಗಾತ್ರದ ಸರ.

ದ

ದನುಜ – ರಾಕ್ಷಸ.

ದನುಜೇಶ್ವರ – ರಾಕ್ಷಸೇಶ್ವರ.

ದರ್ಪಕ – ಮನ್ಮಥ.

ದಾಕ್ಷಾಯಿಣಿ – ಪಾರ್ವತಿ, ಗಿರಿಜೆ, ಶರ್ವಾಣಿ, ಗೌರಿ, ಭವಾನಿ, ಅಂಬಿಕೆ, ಮೃಡಾಣಿ, ಕಾತ್ಯಾಯಿನಿ, ಹೈಮವತಿ.

ದಾವಾನಲ – ಕಾಡುಗಿಚ್ಚು.

ನ

ನಗ – ಪರ್ವತ.

ನಗರಾಜ – ಪರ್ವತರಾಜ, ಗಿರಿರಾಜ.

ನಗೇಂದ್ರ – ಪರ್ವತದ ಇಂದ್ರ.

ನದಿನದ – ಹೆಣ್ಣು ಮತ್ತು ಗಂಡು ಹೊಳೆಗಳು.

ನನೆಯಂಬು – ಕುಸುಮಾಸ್ತ್ರ, ಹೂಬಾಣ, ಪುಷ್ಪಾಸ್ತ್ರ.

ನಿಜನಿವೇಶ – ಸ್ವಸ್ವರೂಪದಲ್ಲಿ ನೆಲೆಯಾದವನು.

ನಿಡುದೋಳು – ಉದ್ದವಾದ ತೋಳು, ನೀಳವಾದ ಬಾಹು.

ನಿರ್ಮಾಯ – ಮಾಯೆಗೆ ಸಿಲುಕದವನು, ಭ್ರಮಾರಹಿತ.

ನಿರಾಮಯ – ನಿಷ್ಕಳಂಕವಾದ, ಪರಿಶುದ್ಧವಾದ, ಮುಕ್ತನಾದ.

ನಿರುಪಮ – ಸಾಟಿಯಿಲ್ಲದ, ಎಣೆಯಿಲ್ಲದ, ಹೋಲಿಕೆಯಿಲ್ಲದ.

ನಿರುಪಾದಿಕ – ತೊಂದರೆಯಿಲ್ಲದ, ಉಪಾಧಿರಹಿತವಾದ.

ನಿವಾತ ಜ್ಯೋತಿ – ಗಾಳಿಯಿಲ್ಲದೆ ಪ್ರಜ್ವಲಿಸುವವನು.

ನಿಶ್ಶಂಕ – ಭೀತಿ ಇಲ್ಲದವನು, ಸಂಶಯ ಇಲ್ಲದಿರುವವನು.

ನಿಷ್ಕಂಪ – ಕಂಪನವಿಲ್ಲದಿರುವಿಕೆ, ನಿಶ್ಚಲತೆ, ಸ್ಥಿರತೆ; ನಿಶ್ಚಲನಾಗಿರುವವನು.

ನೀರಾಕರ – ನೀರಿನ ಆಕಾರ.

ನೀಲ ಡಾಬು – ನೀಲಿಯ ಬಣ್ಣದ ಡಾಬು.

ನೈದಿಲೆ – ನೀರಿನಲ್ಲಿ ಬೆಳೆಯುವ ಒಂದು ಬಗೆಯ ಹೂವು; ಕುಮುದ; ಉತ್ಪಲ.

ಪ

ಪಟಹ – ನಗಾರಿ, ಡೋಲು.

ಪಣ್ಯಾಂಗನೆ – ಬೆಲೆವೆಣ್ಣು, ವೇಶ್ಯೆ.

ಪರಿವೇಷ – ಸುತ್ತುವರಿ.

ಪವಿತ್ರ – ದರ್ಬೆ ಉಂಗುರ.

ಪಾಣಿ – ಹಸ್ತ
ಪುಂಜ – ಸಮೂಹ, ರಾಶಿ.
ಪುಣ್ಯತತಿ – ಪುಣ್ಯದ ಸಮೂಹ.
ಪುಣ್ಯವಾರಿಧಿ – ಪುಣ್ಯದ ಸಮುದ್ರ.
ಪುಣ್ಯಾಹ – ಮದುವೆ ಮೊದಲಾದ ಮಂಗಳ ಕಾರ್ಯಗಳ ಆರಂಭದಲ್ಲಿ ಮಾಡುವ ಒಂದು ಬಗೆಯ ಶುಭಕರವಾದ ಧಾರ್ಮಿಕ ವಿಧಿ, ಸ್ವಸ್ತಿ ವಾಚನ.
ಪುಳಿಂದಿ – ಬೇಡತಿ ; ಶಬರಿ.
ಪ್ರತಿಹಾರಿ – ಬಾಗಿಲು ಕಾಯುವವ.
ಪ್ರಮಥಗಣ – ಶಿವನ ಪರಿವಾರ, ಶಿವಗಣ.
ಪ್ರಸಕ್ತಿ – ಪ್ರಸ್ತಾಪ.

ಫ

ಫಣಿಲೋಕ – ಸರ್ಪಲೋಕ.

ಬ

ಬಿಂಬಾದರೆ – ತೊಂಡೆಯ ಹಣ್ಣಿನಂತೆ ಕೆಂಪಾಗಿರುವ ತುಟಿಯುಳ್ಳವಳು.
ಬಡಬಾಗ್ನಿ – ಕಡಲ್ಗಿಚ್ಚು; ಸಮುದ್ರದ ಆಳದಲ್ಲಿರುವ ಬೆಂಕಿ; ಬಡಬಾನಲ.
ಬಡಿವಾರ – ಬಡಾಯಿ, ಡೌಲು.
ಬಾಹುಪೂರ – ತೋಳಿಗೆ ಧರಿಸುವ ಒಂದು ಬಗೆಯ ಆಭರಣ.
ಬಾಳ್ಗಂಬ – ಆನೆಕಟ್ಟುವ ಕಂಬ.
ಬಿಳ್ದಿನಂ – ಬಿಳುಪಾದ ಹಗಲು.
ಬೀಜಕೋಶ – ಕಮಲದ ಹೂವಿನ ಮಧ್ಯಭಾಗ; ಕರ್ಣಿಕೆ.

ಭ

ಭಾಜನ – ತಟ್ಟೆ, ಬಟ್ಟಲು ಮುಂತಾದ ಯಾವುದೇ ಪಾತ್ರೆ.
ಭಾಸುರ – ಹೊಳೆಯುವ ಸ್ವಭಾವ ಉಳ್ಳ.
ಭೂಧರ – ಬೆಟ್ಟ; ಪರ್ವತ.
ಭೂರಿ – ಹೆಚ್ಚು; ಅಧಿಕ.
ಭೋಂಕನೆ – ಒಂದು ಅನುಕರಣಾವ್ಯಯ; ತಟ್ಟನೆ, ಬೇಗನೆ.

ಮ

ಮಕರ ಧ್ವಜ – ಮೀನಿನ ಗುರುತುಳ್ಳ ಧ್ವಜ.
ಮದೋದಕ – ಮದರಸ.
ಮಧು ಪರ್ಕ – ಮೊಸರು, ತುಪ್ಪ, ನೀರು, ಜೇನುತುಪ್ಪ, ಸಕ್ಕರೆ – ಈ ಐದರ ಮಿಶ್ರಣ, ವಿವಾಹಕಾಲದಲ್ಲಿ ವಧುವಿನ ತಂದೆಯ ಮನೆಗೆ ಬರುವ ವರನಿಗೆ ಸತ್ಕಾರ ಪೂರ್ವಕವಾಗಿ ಇದನ್ನು ಅರ್ಪಿಸುವುದು ಸಂಪ್ರದಾಯ.
ಮರೀಚಿಕೆ – ಮೃಗಜಲ; ಬಿಸಿಲುಗುದುರೆ.
ಮಲಯಜ – ಮಲಯ ಪರ್ವತದಲ್ಲಿ ಹುಟ್ಟುವ ಮರ; ಶ್ರೀಗಂಧದಮರ; ಚಂದನ ವೃಕ್ಷ.
ಮಹಾನಿಧಾನ – ವಿಪುಲವಾದ ಸಂಪತ್ತು; ಮಹದೈಶ್ವರ್ಯ.
ಮುಗುಳು – ಮೊಗ್ಗೆ.
ಮುಪ್ಪುರಿ – ಮೂರು ಎಳೆಗಳು ಸೇರು ; ಒಟ್ಟಾಗು.
ಮೆಟ್ಟಕ್ಕಿ – ಮದುವೆಯ ಸಮಯದಲ್ಲಿ ವಧೂವರರು ಮೆಟ್ಟನಿಲ್ಲಲ್ಲು ಬಿದಿರಿನ ತಟ್ಟೆಯಲ್ಲಿರಿಸಿದ ಅಕ್ಕಿ.

ರ

ರಜತಗಿರಿ – ಬೆಳ್ಳಿಯ ಬೆಟ್ಟ; ಕೈಲಾಸ ಪರ್ವತ.

ರತ್ನಾಂಜಲಿ – ರತ್ನಗಳನ್ನು ಬೊಗಸೆಯಲ್ಲಿ ತುಂಬಿ ಎರಚಿದಂತೆ.

ಲ

ಲಾಜಾಹುತಿ – ಅರಳಿನಿಂದ ಮಾಡುವ ಹೋಮ; ಅಗ್ನಿಗೆ ಅರಳನ್ನು ಅರ್ಪಿಸುವುದು. (ಜೋಳದ ಅಥವಾ ಭತ್ತದ ಅರಳು).

ವ

ವಜ್ರಧರ – ವಜ್ರಾಯುಧವನ್ನು ಧರಿಸಿದವನು; ಇಂದ್ರ.

ವಲ್ಕಲ – ನಾರುಮಡಿ.

ವಸುಧಾವರ – ಭೂತಳದ ಶ್ರೇಷ್ಠ.

ವಾಚಸ್ಪತಿ – ಮಾತಿನ ಅಧಿಪತಿ; ಬೃಹಸ್ಪತಿ.

ವಾರನಾರಿ – ವೇಶ್ಯೆ.

ವಾರಿನಿಧಿ – ಕಡಲು; ಸಮುದ್ರ.

ವಿದ್ಯಾಧರಿಯರು – ಅಮಾನುಷ ವರ್ಗದವರು.

ವಿಭ್ರಮ – ಲಾವಣ್ಯ; ಸೌಂದರ್ಯ; ಬೆಡಗು; ವೈಯಾರ.

ವಿಮಳ – ಸ್ವಚ್ಛ.

ವಿಶ್ವೋದರೆ – ಜಗತ್ತನ್ನೇ ತನ್ನ ಹೊಟ್ಟೆಯಲ್ಲಿ ಅಡಗಿಸಿಕೊಂಡವಳು.

ವಿಹಗ – ಹಕ್ಕಿ ; ಪಕ್ಷಿ.

ವಿಹ್ವಲತೆ – ಕಳವಳ; ಗಲಿಬಿಲಿ.

ವಿಳಾಸಿನಿ – ವಿಲಾಸಿನಿ; ಬೆಡಗಿನ ಸಖಿ.

ವೀದಿ – ಬೀದಿ.

ವೈಹಾಳಿ – ಕುದುರೆ ಸವಾರಿ

ಶ

ಶರ್ವ – ಶಿವ; ಚಂದ್ರಧರ; ಪಿನಾಕಿ; ಅಭವ; ಕರ್ಪರ್ಡಿ; ಶೂಲಿ; ಸೋಮಧರ; ನಂಜುಡ; ನಿಟಿಲಾಕ್ಷ; ಭಾಳಾಕ್ಷ; ಶಂಭು; ಭೂತೇಶ; ಶಶಾಂಕಧರ.

ಶರ್ವಾಣಿ – ಶಿವನ ಹೆಂಡತಿ; ಪಾರ್ವತಿ.

ಶೂರ್ಪಕ – ಮನ್ಮಥನ ವೈರಿಯಾದ ಒಬ್ಬ ದೈತ್ಯ.

ಶ್ರಾಂತಿ – ಆಯಾಸ; ಬಳಲಿಕೆ.

ಸ

ಸಂಪುಟ – ಘಟಕ.

ಸದಮಳ – ಪವಿತ್ರವಾದ; ನಿರ್ಮಲವಾದ.

ಸಾದು – ಕಸ್ತೂರಿ, ಕರ್ಪೂರ ಮೊದಲಾದ ಪರಿಮಳ ದ್ರವ್ಯಗಳ ಮಿಶ್ರಣ; ಒಂದು ಬಗೆಯ ಗಂಧ ದ್ರವ್ಯ.

ಸಾಮ – ಶಾಂತಗೊಳಿಸುವಿಕೆ; ಸಮಾಧಾನಪಡಿಸುವಿಕೆ. ಸಾಮ, ದಾನ, ಭೇದ ಮತ್ತು ದಂಡ ಕಾರ್ಯಸಾಧನೆಯ ಚತುರೋಪಾಯಗಳಲ್ಲಿ ಒಂದು; ರಾಜಿ.

ಸೀಮೆಗೊಳಿಸು – ಪರಾಕಾಷ್ಠೆಗೆ ಮುಟ್ಟಿಸು.

ಸುಧಾರಸ – ಅಮೃತ; ಸುಧೆ.

ಸುರತ – ಸಂಭೋಗ; ಕೂಟ.

ಸುರುಚಿರ – ಶೋಭೆಯುಳ್ಳ; ಕಾಂತಿಯುತ.

ಸುರದ್ರುಮ – ದೇವಲೋಕದ ಮರ; ಕಲ್ಪವೃಕ್ಷ.
ಸೇವ್ಯ – ಪೂಜಿಸಲು ಯೋಗ್ಯವಾದ.
ಸೇಸೆಯಿಕ್ಕು – ಅಕ್ಷತೆಯನ್ನು ಹಾಕು; ಮಂತ್ರಾಕ್ಷತೆಯನ್ನು ತಳಿ.
ಸೋವು – ಹೊಡೆದೋಡಿಸು; ಅಟ್ಟು.
ಸೌರಭ್ಯ – ಸುವಾಸನೆ; ಪರಿಮಳ.
ಸ್ಮರ – ಕಾಮ; ಮನ್ಮಥ; ಕಂದರ್ಪ; ಅನಂಗ; ರತಿರಾಜ; ಮದನ; ಮಾರಭೂಪ.
ಸ್ಮರರಾಗ – ಕಾಮಾಸಕ್ತಿ; ಕಾಮ ಪರವಶತೆ.
ಸ್ಮರರಿಪು – ಮನ್ಮಥನ ಶತ್ರು ; ಶಿವ.
ಸ್ಪರ್ಶಮಣಿ – ಸೋಕಿದ ಲೋಹವನ್ನು ಚಿನ್ನವನ್ನಾಗಿ ಪರಿವರ್ತಿಸುವುದೆಂದು ನಂಬಲಾದ ಒಂದು ಬಗೆಯ ಕಲ್ಲು.

ಹ

ಹಯಶಾಸ್ತ್ರ – ಕುದುರೆ ಜಾತಿ, ಲಕ್ಷಣ, ಬಲ, ರೋಗ, ಚಿಕಿತ್ಸೆ ಮುಂತಾದ ಕುದುರೆಗೆ ಸಂಬಂಧಿಸಿದ ಎಲ್ಲ ವಿಚಾರಗಳನ್ನು ತಿಳಿಸುವ ಶಾಸ್ತ್ರ.
ಹಸ್ತಿನಿ – ಹೆಣ್ಣಾನೆ; ಪದ್ಮಿನಿ, ಚಿತ್ತಿನಿ, ಹಸ್ತಿನಿ ಮತ್ತು ಶಂಖಿನಿ ಎಂಬ ನಾಲ್ಕು ಬಗೆಯ ಸ್ತ್ರೀ ಜಾತಿಗಳಲ್ಲಿ ಒಂದು ಮತ್ತು ಆ ಜಾತಿಗೆ ಸೇರಿದ ಸ್ತ್ರೀ.
ಹೃತ್ಕಮಲ – ಹೃದಯವೆಂಬ ಕಮಲ.
ಹೈಮಾಚಲ – ಹಿಮಾಲಯ ಪರ್ವತ.

* * * * *

ಅನುಬಂಧ – ೨

ಅಭಿಪ್ರಾಯಗಳು

'ಬೇಂದ್ರೆ ಕೃಷ್ಣಪ್ಪ'ನವರು ಲಕ್ಷ್ಮೀಶನ 'ಜೈಮಿನಿ ಭಾರತ'ವನ್ನು ಸರಳಗನ್ನಡದಲ್ಲಿ ನೀಡಿ ಕನ್ನಡಿಗರ ಗೌರವ, ಆದರಗಳಿಗೆ ಪಾತ್ರರಾಗಿದ್ದರು. ಇದೀಗ 'ಗಿರಿಜಾಕಲ್ಯಾಣ'ದ ಸರಳಗನ್ನಡ ಮೆಚ್ಚಿನ 'ಸುಧಾ' ಪತ್ರಿಕೆಯಲ್ಲಿ ಧಾರವಾಹಿಯು ಉಪಶೀರ್ಷಿಕೆ ಹಾಗೂ ಶಬ್ದಾರ್ಥಗಳನ್ನು ಒಳಗೊಂಡಿರುವುದು ಹೆಚ್ಚು ಅರ್ಥಪೂರ್ಣವಾಗಿದೆ. ಜಿ.ಕೆ. ಶಿವಣ್ಣ ಅವರ ಚಿತ್ರಗಳು ಶೋಭೆ ತಂದಿವೆ.

– ರುದ್ರೇಶ್ ಬಿ. ಅದರಂಗಿ, ಕೋಲಾರ. ಎಂ.ಜಿ. ರುದ್ರಮೂರ್ತಿ, ಚಿತ್ರದುರ್ಗ.

ನಮ್ಮಂತಹ ಸಾಮಾನ್ಯರಿಗೆ ಹಳೆಗನ್ನಡ ಕಾವ್ಯಗಳು ಸಾಧ್ಯವೆ ಎನ್ನುವ ಸಮಯದಲ್ಲಿ 'ಸುಧಾ' ವಾರಪತ್ರಿಕೆ 'ಗಿರಿಜಾಕಲ್ಯಾಣ' ಎಂಬ ಮಹಾಕವಿ ಹರಿಹರನ ಪ್ರಾಚೀನ ಕಾವ್ಯದ ಅಮೃತ ಸಿಂಚನ ಮಾಡಿದೆ. ಯಾಂತ್ರಿಕ ಬದುಕಿನಲ್ಲಿ ಕಳೆದು ಹೋಗುತ್ತಿರುವ ಯುವ ಪೀಳಿಗೆಯ ನಮ್ಮ ಮಕ್ಕಳಿಗೆ 'ಸುಧಾ' ಮೂಲಕ ಅಪೂರ್ವ ಅಭಿರುಚಿ ಹೊಂದುವಂತಾಗಿದೆ.

– ಜಿ. ಅನಿತಾ, ದಾವಣಗೆರೆ.

ಹರಿಹರ ಕವಿಯ 'ಗಿರಿಜಾ ಕಲ್ಯಾಣ' ಕಾವ್ಯಾಸಕ್ತರಿಗೆ ರಸದೌತಣವಾಗಿದೆ. ಜಿ. ಕೃಷ್ಣಪ್ಪನವರ ಸರಳಗನ್ನಡ ಸುಲಲಿತವಾಗಿ ಓದಿ ಅರ್ಥೈಸಿಕೊಳ್ಳುವಂತಿದೆ. ಕಠಿಣ ಪದಗಳಿಗೆ ಸರಳ ಅರ್ಥ ನೀಡುವ 'ಸುಧಾ' ಸಂಪಾದಕೀಯ ಬಳಗದ ಶ್ರಮ ಮೆಚ್ಚುವಂತಹದು. ಓದುಗರಲ್ಲಿ ಜ್ಞಾನ ಸಂಪತ್ತು ಹಾಗೂ ಪದ ಸಂಪತ್ತುಗಳ ಸಮೃದ್ಧಿಗೆ ನಿರಂತರ ನೀರೆರೆಯುವ ಪತ್ರಿಕೆಯ ಪ್ರಯತ್ನ ಶ್ಲಾಘನೀಯ. ಮೊದಲ ಅಧ್ಯಾಯದಲ್ಲಿ ವರ್ಣನೆ ಅತಿ ಎನಿಸಿದರೂ, ಹರಿಹರನ ಶಬ್ದ ಸಂಪತ್ತಿಗೆ ತಲೆದೂಗಲೇ ಬೇಕು.

– ಶೀಲಾ ಸತ್ಯೇಂದ್ರ ಸ್ವಾಮಿ, ಹರವೆಮಠ. ರಾಜಶೇಖರಗೌಡ ಕೊಟ್ಟೂರು. ವಿವೇಕ ಕುಲಕರ್ಣಿ, ಧಾರವಾಡ.

ನನ್ನಂತಹ ಕನ್ನಡ ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಬಹೂಪಯೋಗಿ ಆಗಲಿದೆ.

– ಎ.ಕೆ. ರವಿಶಂಕರ, ಎಂ.ಎ. ದ್ವಿತೀಯ (ಕನ್ನಡ) ವಿದ್ಯಾರ್ಥಿ, ಕೋಲಾರ.

ಹಿಮಗಿರಿಯ ವರ್ಣನೆಯೊಂದಿಗೆ ಆರಂಭವಾಗುವ ಕಥೆಯೇ ಆಹ್ಲಾದಕರ. ಓಷದಿ ಪ್ರಸ್ತಪುರದ ಬಣ್ಣನೆಯಂತೂ ಎಂತಹ ಯೋಗಿಯನ್ನೂ ಚಿತ್ತಚಂಚಲನಾಗಿ ಮಾಡುತ್ತದೆ.

– ಕೊಹಿಮ, ಬಸರಕೋಡು.

ಶಿವಪುರಾಣವನ್ನು ಓದದ ಪಾಮರರ ಮನಮುಟ್ಟುವಂತೆ ಮಾಡುವಲ್ಲಿ ಜಿ. ಕೃಷ್ಣಪ್ಪನವರ ಸರಳ ಗದ್ಯಾನುವಾದ ಯಶಸ್ವಿಯಾಗಲಿದೆ. 'ಪೌರಾಣಿಕ ಧಾರಾವಾಹಿ' ಎಂದು ಹೆಸರಿಸಿರುವುದು ವಿಶೇಷವಾಗಿದೆ.

– ನೆ.ಲ.ರಾಂ. ಬೆಂಗಳೂರು. ವಿ. ವಾಮನರಾವ್, ಕೊಪ್ಪಳ. ಚೈತ್ರ, ಕುಕ್ಕಿಮನೆ.

ಹರಿಹರನ 'ಗಿರಿಜಾಕಲ್ಯಾಣ'ವನ್ನು ಬಿಡದೆಕೊಂಡು ಓದಿ ಪಾವನವಾಗಬೇಕೆನಿಸಿದೆ. 'ಬೇಂದ್ರೆ ಕೃಷ್ಣಪ್ಪ' ಎಂದೇ ಸಾಹಿತ್ಯ ವಲಯದಲ್ಲಿ ಪರಿಚಿತವಾಗಿರುವ ಜಿ. ಕೃಷ್ಣಪ್ಪನವರು ಏರ್ಪಡಿಸಿದ್ದ ಭಾವಗೀತೆ ಸ್ಪರ್ಧೆಯಲ್ಲಿ ನನ್ನ ಮಗಳು ಬಹುಮಾನ ಪಡೆದಿದ್ದಳು. ನನ್ನಂಥ ಓದುಗರಿಗೆ ಕೃಷ್ಣಪ್ಪನವರು ಸರಳಗನ್ನಡದಲ್ಲಿ ಕೊಟ್ಟಿರುವುದು ಅಮೃತ ಪ್ರಾಯವಾಗಿದೆ.

– ಬಾ.ನಾ. ಸೊಲ್ಲಾಪುರೆ, ಕಮಲನಗರ (ಬೀದರ ಜಿಲ್ಲೆ).

ಲಕ್ಷ್ಮೀಶನ 'ಜೈಮಿನಿ ಭಾರತ'ವನ್ನು ಸರಳ ಗದ್ಯ ಕಥಾನಕವಾಗಿ ನೀಡಿದ್ದ ಡಾ. ಜಿ. ಕೃಷ್ಣಪ್ಪ ಅವರು ಇದೀಗ ಹರಿಹರ ಕವಿಯ'ಗಿರಿಜಾಕಲ್ಯಾಣ' ಚಂಪೂಕಾವ್ಯ ಕಥಾನಕವನ್ನು ಇಂದಿನ ಓದುಗರಿಗೆ ಪ್ರಸ್ತುತವಾಗುವಂತೆ ಕಟ್ಟಿಕೊಟ್ಟಿದ್ದಾರೆ. ಅವರದೇ ಈ ಹಿಂದಿನ 'ಜೈಮಿನಿ ಭಾರತ'ದ ಶೈಲಿಗಿಂತ ಇದು ಭಿನ್ನವಾಗಿದೆ. ಬೇಂದ್ರೆಯವರ ಶಬ್ದಲಾಲಿತ್ಯ ಕೃಷ್ಣಪ್ಪನವರಲ್ಲಿ ಹಾಸುಹೊಕ್ಕಾಗಿದೆ. ಹರಿಹರನ ಜಾತ್ಯತೀತ ಸಾಹಿತ್ಯ ಮನಕ್ಕೆ ಮುದ ನೀಡುತ್ತದೆ.

– ಯು.ಎನ್. ಸಂಗನಾಳಮಠ, ಹೊನ್ನಾಳಿ.

ಕನ್ನಡ ಭಾಷೆಯ ಪದಸಂಪತ್ತನ್ನು ಹೆಚ್ಚಿಸಿಕೊಳ್ಳುವ ದೃಷ್ಟಿಯಿಂದ 'ಸುಧಾ'ದಲ್ಲಿ ಪ್ರಕಟವಾಗುತ್ತಿರುವ 'ಗಿರಿಜಾ ಕಲ್ಯಾಣ'ವನ್ನು ಓದಿ ಎಂದು ನಮ್ಮ ಪ್ರೌಢಶಾಲೆಯ 'ಕನ್ನಡ ಕ್ಲಬ್' ಸದಸ್ಯರಿಗೆಲ್ಲ ಮನವಿ ಮಾಡಿಕೊಂಡಿದ್ದೇನೆ.

– ಎಸ್.ಎಚ್. ಹೂಗಾರ, ಹರಿಹರ.

ವೈಣಿಕ ತನ್ನ ವೀಣೆಯನ್ನು ಶೃತಿ ಮಾಡಿ ರಾಗಾಲಾಪಾನೆ ಮಾಡಿ, ಕೃತಿಯ ಅರ್ಥಭಾವಗಳನ್ನು ನಿರೂಪಿಸುವಂತೆ ಜಿ. ಕೃಷ್ಣಪ್ಪನವರು ಹರಿಹರನ 'ಗಿರಿಜಾ ಕಲ್ಯಾಣವನ್ನು' ದೇಶ ವಿದೇಶದ ಕನ್ನಡಿಗರಿಗೆ ತಲುಪಿಸುತ್ತಿರುವುದು ಹರ್ಷದ ಸಂಗತಿ. ಉಪಮೆ, ಅಲಂಕಾರ, ರೂಪಕಗಳ ಮಹಾಕಾವ್ಯವನ್ನು ಪ್ರಕಟಿಸುತ್ತಿರುವುದು ಕವಿ, ನಿರೂಪಕ, ಓದುಗರನ್ನು ಗೌರವಿಸುವ ಅರ್ಥಪೂರ್ಣ ಕಾಯಕವೆಂದೇ ಎನಿಸಿದೆ. ಅದಕ್ಕಾಗಿ 'ಸುಧಾ' ಪತ್ರಿಕೆಗೆ ಧನ್ಯವಾದಗಳು.

– ಎಂ.ಡಿ. ನಂಜುಂಡಸ್ವಾಮಿ, ಮೈಸೂರು. ಕೊಹಿಮ, ಬಸರಕೋಡು. ರಾಜಶೇಖರ ಗೌಡ, ಕೊಟ್ಟೂರು. ಎನ್. ಸುಮತಿ ಕೃಷ್ಣರಾವ್, ತುಮಕೂರು. ಎಂ.ಇ. ಅಹ್ಮದ್ ಖಾನ್, ಬೆಂಗಳೂರು.

ಪದ್ಯವಾಗಿರುವ 'ಗಿರಿಜಾಕಲ್ಯಾಣ' ಚಂಪೂಕಾವ್ಯದಲ್ಲಿದ್ದು ಓದಲು ಕ್ಲಿಷ್ಟಕರವಾಗಿದೆ. ಇದೇ ಕಾವ್ಯವು ಕಥೆಯಾಗಿ ಸರಳಗನ್ನಡದಲ್ಲಿ ಪ್ರಕಟವಾಗುತ್ತಿರುವುದರಿಂದ ನಮ್ಮ

ಭಾಗದ ವಿದ್ಯಾರ್ಥಿಗಳು ಇದಕ್ಕಾಗಿ 'ಸುಧಾ' ಪತ್ರಿಕೆ ಓದುತ್ತಿರುವುದು ಸೋಜಿಗ ಹಾಗೂ ಸಂತಸವನ್ನುಂಟು ಮಾಡಿದೆ.

– ಎಚ್. ನೀಲಾ, ಮೀನಾಕ್ಷಿ, ಆರ್.ವಿ. ಬಿರಾದಾರ್, ಗುಲ್ಬರ್ಗ.

ಸಂಸ್ಕೃತ ಹಾಗೂ ಹಳೆಗನ್ನಡದ ಹಲವು ಕವಿಗಳು ರಾಜಮಹಾರಾಜರನ್ನುಹೊಗಳಿ ಕಾವ್ಯಗಳನ್ನು ರಚಿಸಿದರು. ಆದರೆ ವಚನಕಾರರಿಂದ ಪ್ರಭಾವಿತನಾದ ಹರಿಹರ ಮಾತ್ರ ಅಧಿಕಾರ ಉಳ್ಳವರನ್ನು ಓಲೈಸದೆ – ಶಿವನ ಬಗ್ಗೆ, ಸಾಮಾನ್ಯ ಜನರ ಬಗ್ಗೆ, ಕಾವ್ಯರಚಿಸಿ ಜನಮಾನಸದ ಕವಿಯಾದನು. ಪವಾಡಗಳನ್ನೇ ತಿರಸ್ಕರಿಸಿದ ಶಿವಶರಣರನ್ನೇ ಪವಾಡ ಪುರುಷರನ್ನಾಗಿ ಹರಿಹರ ಮಾಡಿದರೂ ಒಟ್ಟಾರೆ ಅವನ ಕಾವ್ಯ ಕಟ್ಟಿಕೊಡುವುದು ಭಕ್ತಿ ಮತ್ತು ಸರಳತೆಯನ್ನು. ಅದಕ್ಕಾಗಿ ಹರಿಹರ ಮಹಾಕವಿಯೇ ಸರಿ.

– ಅಶೋಕ ಹೆಗಡೆ, ವಿ.ಆರ್. ಪಾಟೀಲ, ಧಾರವಾಡ.

ಬಹಳ ದಿನಗಳಿಂದ ಇಂತಹ ಪೌರಾಣಿಕ ಧಾರಾವಾಹಿ ಓದಿರಲಿಲ್ಲ. ಹಾಗಾಗಿ ಜಿ. ಕೃಷ್ಣಪ್ಪನವರು ಸರಳಗನ್ನಡದಲ್ಲಿ ಕಟ್ಟಿಕೊಟ್ಟಿರುವ ಮಹಾಕವಿ ಹರಿಹರನ 'ಗಿರಿಜಾಕಲ್ಯಾಣ' ಓದಲು ಸ್ಫೂರ್ತಿ ಉಂಟಾಗುತ್ತಿದೆ. ಮುಂದಿನ ವಾರಗಳಲ್ಲಿ ಏನಿರಬಹುದು ಎಂಬ ಕುತೂಹಲ ಸೃಷ್ಟಿಸಿದೆ.

– ಬಿ.ಎಸ್. ಮುಳ್ಳೂರು, ಹಲಗತ್ತಿ.

ಜಿ. ಕೃಷ್ಣಪ್ಪನವರು ಯಾವುದೇ ಪ್ರತಿಫಲಾಪೇಕ್ಷೆಯಿಲ್ಲದೆ ಆಗುಂಬೆ. ಮೇಗರವಳ್ಳಿ, ಕೋಣಂದೂರುಗಳಲ್ಲಿ ಕವಿ ಬೇಂದ್ರೆಯವರ ಕುರಿತು ಕಾರ್ಯಕ್ರಮ ನಡೆಸಿ ನಮಗೆ ಆಪ್ತರಾಗಿದ್ದಾರೆ. ನಮ್ಮ ಕೃಷ್ಣಪ್ಪನವರ ಹೆಸರು ನೋಡಿದ ಕೂಡಲೇ 'ಗಿರಿಜಾ ಕಲ್ಯಾಣ'ವನ್ನು ಓದಲು ಮನಸ್ಸು ಬಂತು.

– ಎಸ್. ಕುಮಾರ ಸ್ವಾಮಿ, ಮೇಗರವಳ್ಳಿ.

'ಗಿರಿಜಾಕಲ್ಯಾಣ' ಪೌರಾಣಿಕ ಧಾರವಾಹಿಯನ್ನು ಪ್ರಕಟಿಸುವ ಮೂಲಕ 'ಸುಧಾ' ಓದುಗರ ಹೃದಯಕ್ಕೆ 'ಸುಧೆ' ಎರೆಯುತ್ತಿದೆ. ಮಹರ್ಷಿ ಅರವಿಂದರ 'ಸಾವಿತ್ರಿ' ಮಹಾಕಾವ್ಯದಂತೆ, ಹರಿಹರನ ಕಾವ್ಯದ ಕಥೆ ತೆಳುವಾದರೂ, ಪ್ರಕೃತಿ ವರ್ಣನೆಯ ವೈವಿಧ್ಯ ವಿಸ್ಮಯವಾದುದು.

– ಜ. ಹೊ. ನಾರಾಯಣಸ್ವಾಮಿ, ಹಾಸನ.

ಏನಿದು ಜಲಕ್ರೀಡೆಯ ವರ್ಣನೆ ! ಏನದು ಶರ್ವಾಣಿಯ ವರ್ಣನೆ ! ಏನದು ಬೆಳದಿಂಗಳ ವರ್ಣನೆ ! ಹರಿಹರನ 'ಗಿರಿಜಾಕಲ್ಯಾಣ' ಅಬ್ಬಬ್ಬಾ !

– ವಿಶ್ವನಾಥ ಕಂಬಾಗಿ, ಸೋಮಜಾಳ.

ಹರಿಹರನ 'ಗಿರಿಜಾಕಲ್ಯಾಣ' ಸುಧಾ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಕಾಣಿಸಿಕೊಂಡು ಮನೆಮಂದಿಗೆಲ್ಲ ಖುಷಿತಂದು ಕೊಟ್ಟಿದೆ. ಡಾ. ಜಿ. ಕೃಷ್ಣಪ್ಪನವರು ಹದವಾದ ಭಾಷೆಯಲ್ಲಿ

ಮೂಲದ ಸ್ವಾರಸ್ಯಕ್ಕೆ ಭಂಗ ಬರದಂತೆ ಕಥೆ ಹೇಳಿದ್ದಾರೆ. ಮೂಲಕಾವ್ಯದ ಕಠಿಣ ಶಬ್ದಗಳಿಗೆ ಅರ್ಥನೀಡಿರುವ 'ಸುಧಾ' ಪ್ರಯತ್ನ ಶ್ಲಾಘನೀಯ. ಜಿ.ಕೆ. ಶಿವಣ್ಣ ಚಿತ್ರಿಸಿರುವ ಸುಂದರ ಚಿತ್ರಗಳು ಕಾವ್ಯದ ಹಿನ್ನೆಲೆಯನ್ನು ಅರ್ಥೈಸಲು ಸಹಾಯಕವಾಗಿವೆ.

– ಪ್ರೊ|| ಎಚ್.ಎಸ್. ಹರಿಶಂಕರ್, ಮೈಸೂರು. ಪ್ರಭುಪ್ರಸಾದ್ ನಡುತೋಟ, ಶೃಂಗೇರಿ.

ಶಬ್ದ ಸಂಪತ್ತು ಹೆಚ್ಚಬೇಕೆಂದರೆ 'ಗಿರಿಜಾಕಲ್ಯಾಣ' ಓದಲೇಬೇಕು. ನಮ್ಮ ಕಾಲೇಜಿನ ವಿದ್ಯಾರ್ಥಿಗಳಿಗೆಲ್ಲ 'ಸುಧಾ' ಪತ್ರಿಕೆ ಓದಲು ಹೇಳಿದ್ದೇನೆ.

– ಡಾ. ಭತಮುರ್ಗೆ ಚಂದ್ರಪ್ಪ, ಬೀದರ.

ನಾನೊಬ್ಬ ರಂಗ ಕಲಾವಿದೆ. ಕಂದಗಲ್ಲ ಹಣಮಂತರಾಯರ ನಾಟಕಗಳಲ್ಲಿ ಅಭಿನಯಿಸುವಾಗ ಇಂತಹ ಕೆಲವು ಕಠಿಣ ಶಬ್ದಗಳು ಬರುತ್ತಿದ್ದವು. ಎಷ್ಟೋಸಲ ಕೆಲವು ಶಬ್ದಗಳ ಪೂರ್ಣ ಅರ್ಥಗೊತ್ತಿಲ್ಲದೆ ಮಾತನಾಡುತ್ತಿದ್ದೆವು ! 'ಸುಧಾ'ದ 'ಗಿರಿಜಾಕಲ್ಯಾಣ'ದಲ್ಲಿ ಕಠಿಣ ಶಬ್ದಗಳ ಅರ್ಥ ಕೊಡುತ್ತಿರುವುದು ಎಷ್ಟು ಮಹತ್ವದ್ದು ಎಂಬುದು ಗೊತ್ತಾಗುತ್ತದೆ.

– ಕೆ. ನಾಗರತ್ನಮ್ಮ, ಮರಿಯಮ್ಮನಹಳ್ಳಿ.

ಹರಿಹರನ 'ಗಿರಿಜಾಕಲ್ಯಾಣ' ಶೃಂಗಾರ ಕಾವ್ಯವು ಉಪಮೆ, ರೂಪಕಗಳ ಹೊಳೆಯಲ್ಲಿ ಮಿಂದೆದ್ದಿದ್ದರೂ, ಅದಕ್ಕೆ ಅಶ್ಲೀಲತೆಯ ಮೈಲಿಗೆಯಿಲ್ಲ.

– ಎಂ. ಪುಟ್ಟತಾಯಮ್ಮ ಶಿವಲಿಂಗಯ್ಯ, ಗುಂಡ್ಲುಪೇಟೆ. ವೀರೇಂದ್ರ ಸಿಂಪಿ, ಬೀದರ. ಬಿ. ತಿಪ್ಪಣ್ಣ, ದೇವರ ಮರಿಕುಂಟೆ. ಬಿ.ಕೆ.ಎಸ್. ಮೂರ್ತಿ, ಬೆಂಗಳೂರು.

ಹರಿಹರನ 'ಗಿರಿಜಾಕಲ್ಯಾಣ' ಮಹಾಕಾವ್ಯವನ್ನು ಜಿ.ಕೆ. ಶಿವಣ್ಣನವರ ಚಿತ್ರಗಳು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿವೆ. ಅಕ್ಷರಗಳಲ್ಲಿ ಅನನ್ಯವಾಗಿ ಕಟ್ಟಿಕೊಟ್ಟಿರುವ ಶೃಂಗಾರ ಕಾವ್ಯಕ್ಕೆ ದೃಶ್ಯದ ಆಯಾಮವನ್ನು ಅವರ ಚಿತ್ರಗಳು ಕಲ್ಪಿಸಿವೆ.

– ಡಾ. ಮೀರಾಸಾಬಿಹಳ್ಳಿ ಶಿವಣ್ಣ, ಚಳ್ಳಕೆರೆ

ಹರಿಹರ ಮಹಾಕವಿಯ 'ಗಿರಿಜಾಕಲ್ಯಾಣ' ಪೌರಾಣಿಕ ಧಾರಾವಾಹಿಯಲ್ಲಿ ಗಿರಿಜೆಯ ಜಲ ಕ್ರೀಡೆಯ ವರ್ಣನೆ, ಪ್ರಕೃತಿಯ ವರ್ಣನೆ, ವಿರೂಪಾಕ್ಷ ವರ್ಣನೆ ಅತ್ಯದ್ಭುತವಾಗಿದ್ದು – ಮತ್ತೆ ಮತ್ತೆ ಓದಬೇಕೆನಿಸುವಂತಿದೆ. ನಮ್ಮ ಮಕ್ಕಳಿಗೂ ಸಹ ಪೌರಾಣಿಕ ಕಥೆ, ಕಾವ್ಯಗಳ ಬಗ್ಗೆ ಆಸಕ್ತಿ ಮೂಡುವಂತೆ ಮಾಡಲು ಇಂತಹ ಪ್ರಯತ್ನ ಅವಶ್ಯಕವಾಗಿದೆ. ನಾಡು, ನುಡಿ ಸಂಸ್ಕೃತಿ ಬಗ್ಗೆ ಅಭಿಮಾನವಿದ್ದ ಕನ್ನಡಿಗರೆಲ್ಲರೂ ಹಳೆಗನ್ನಡದ ಇಂತ ಮಹಾನ್ ಕೃತಿಗಳನ್ನು (ಕ್ಲಾಸಿಕ್ಸ್) ಓದ ಬೇಕು. ಜಿ. ಕೃಷ್ಣಪ್ಪನವರ ಗದ್ಯಾನುವಾದ ಮೂಲಕ್ಕೆ ನಿಷ್ಠವಾಗಿದ್ದು, ಹೃದ್ಯವಾಗಿದೆ. ಜಿ.ಕೆ. ಶಿವಣ್ಣ ಅವರ ಸಾಂಪ್ರದಾಯಕ ಶೈಲಿಯ ಚಿತ್ರಗಳಂತೂ ಅದ್ಭುತವಾಗಿವೆ.

– ಶೈಲಜ ಪ್ರಸಾದ್, ಎಚ್. ಹನುಮಂತರಾಯ, ಬೆಂಗಳೂರು. ಸು. ವಿಜಯಲಕ್ಷ್ಮಿ, ಶಿವಮೊಗ್ಗ. ಎಂ. ಬೆಳ್ಳಾರಪ್ಪ, ಕೋಲಾರ. ಪ್ರೊ॥ ಗುರುಲಿಂಗಪ್ಪ ಮಂಠಾಳೇ, ಬೀದರ. ಎಸ್. ಲಕ್ಷ್ಮೀ ನರಸಿಂಹ ಚಾಮರಾಜನಗರ. ಜಿ.ಎನ್. ಪ್ರಸನ್ನ ಕುಮಾರ್, ತುಮಕೂರು.

ಉಕ್ಕಿನ ಕಡಲೆಯಂತೆ ಕಠಿಣವಾಗಿದ್ದ ಹರಿಹರನ 'ಗಿರಿಜಾಕಲ್ಯಾಣ'ವನ್ನು ಜಿ. ಕೃಷ್ಣಪ್ಪನವರು ಸಿಹಿಸವಿಯ ಕಲ್ಲು ಸಕ್ಕರೆ ಆಗಿಸಿರುವುದರಿಂದ, ಕನ್ನಡ ಸಾಹಿತ್ಯವೆಂದರೆ ಕ್ಲಿಷ್ಟವೆಂದು ಕೊಂಡಿದ್ದವರಿಗೆ ಮತ್ತೆ ಇತ್ತ ಮುಖಮಾಡುವಂತಾಗಿದೆ.

'ತಾರಕಾಸುರನ ಚತುರಂಗ ಬಲವು ಹೆಬ್ಬುಲಿಯು ಹಿಂಡಿನಂತೆ, ನಂಜಿನ ಪುಂಜದಂತೆ, ಕಾಡುಗಿಚ್ಚಿನ ಪಯಣದಂತೆ, ಕಾಲಾಗ್ನಿಯ ಮಾಲೆಯಂತೆ, ಹಂತಕನ ಸಂತತಿಯಂತೆ, ಭೈರವನ ಬಳಗದಂತೆ ಇತ್ತು' ಎನ್ನುವ ಬರಹಗಳಲ್ಲಿ ಗದ್ಯವನ್ನು ಪದ್ಯದಂತೆ ಹೃದ್ಯವಾಗಿಸಿದ್ದಾರೆ.

– ಡಾ. ಕೂಡ್ಲೂರು ವೆಂಕಟಪ್ಪ, ಬೆಂಗಳೂರು.

ಉಫ್ ! ಹರಿಹರನ ಪದಸಂಪತ್ತಿನ ಮೋಡಿ ಅತ್ಯದ್ಭುತ. ಉಪಮೆ ರೂಪಕಗಳ ರಸದೌತಣ. ಕವಿಯ ಪ್ರತಿಭಾ ಕುಲುಮೆಯಲ್ಲಿ ತಿದಿಯೊತ್ತಿ ಬಂದ ಪಾಂಡಿತ್ಯ ಪೂರ್ಣ ವರ್ಣನಾಮಯ ಕೈ ಚಳಕಕ್ಕೆ ನನ್ನದೊಂದು ನಮಸ್ಕಾರ. 'ಸುಧಾ' ಬರುವ ದಿನವಂತೂ ನಮಗೆ ತುಂಬ ಸಡಗರ.

– ಸುಶೀಲಾ ಸೋಮಶೇಖರ, ಹಾಸನ. ವಿ.ಜಿ. ಗಾಯತ್ರಿ, ಬೆಂಗಳೂರು.

'ಗಿರಿಜಾಕಲ್ಯಾಣ' ಧಾರಾವಾಹಿಗೆ ಶಿವಣ್ಣನವರ ಚಿತ್ರಗಳನ್ನು ಜನ ಮೆಚ್ಚಿಕೊಂಡದ್ದು ನೋಡಿ ನನಗೆ ಸಂತಸವಾಗಿದೆ. ಈ ಕಾಲಕ್ಕೆ ಅದರ ಅಗತ್ಯ ಇತ್ತು.

– ಕೆ.ವಿ. ಸುಬ್ರಮಣ್ಯಂ, ಬೆಂಗಳೂರು.

ಶಿವಮೊಗ್ಗದ ಸಹ್ಯಾದ್ರಿ ಕಾಲೇಜಿನಲ್ಲಿ ಕವಿ ಸಾ.ಶಿ. ಮರುಳಯ್ಯ ಅವರು 'ಗಿರಿಜಾಕಲ್ಯಾಣ' ಮಹಾಕಾವ್ಯವನ್ನು ಸೊಗಸಾಗಿ ಬೋಧಿಸುತ್ತಿದ್ದ ಆ ಸುಂದರ ನೆನಪುಗಳು ಮತ್ತೆ ಕಾಡಿದವು.

– ಮೇ.ಗೋ. ಸುಬ್ಬಣ್ಣ, ಮೇಗರವಳ್ಳಿ.

ಹರಿಹರನ 'ಗಿರಿಜಾಕಲ್ಯಾಣ' ಓದುವಾಗ ಕಾಳಿದಾಸನ 'ಕುಮಾರಸಂಭವ' ನೆನಪಿಗೆ ಬರುತ್ತದೆ. ಮಧ್ಯಾಹ್ನದ ನಿದ್ದೆಗಾರಿಕೆಯನ್ನು ಹೊಡೆದೋಡಿಸುವ ಎದೆಗಾರಿಕೆ ಹಾಗೂ ಸೊಗಸುಗಾರಿಕೆ 'ಗಿರಿಜಾಕಲ್ಯಾಣ' ಪೌರಾಣಿಕ ಧಾರವಾಹಿಗೆ ಇತ್ತು. ನಮ್ಮ ಪ್ರಾಚೀನ ಸಾಹಿತ್ಯದಲ್ಲಿರುವ ಮುತ್ತುರತ್ನಗಳನ್ನು ಆಯ್ದುಕೊಡುವ ಜತೆಗೆ ಕಠಿಣ ಶಬ್ದಗಳಿಗೆ ಅರ್ಥ ನೀಡಿದ 'ಸುಧಾ' ಪತ್ರಿಕೆಗೆ ಅಭಿವಂದನೆಗಳು.

– ಎನ್. ಸೂರ್ಯನಾರಾಯಣ, ಬಳ್ಳಾರಿ ಮಧ್ವರಾಜ್, ಬೆಂಗಳೂರು. ಈರಪ್ಪ ಕಟ್ಟೀಮನಿ, ಗುಲ್ಬರ್ಗ.

ಕನ್ನಡ ಸ್ನಾತಕೋತ್ತರ ಹಾಗೂ ಪದವಿಯ ಸಾಹಿತ್ಯದ ವಿದ್ಯಾರ್ಥಿಗಳಿಗೆ 'ಸುಧಾ'ದಲ್ಲಿ ಪ್ರಕಟವಾದ 'ಗಿರಿಜಾಕಲ್ಯಾಣ' ತುಂಬಾ ಉಪಕಾರಿಯಾಗಿತ್ತು.

– ಭವಾನಿ ಜಿ. ಉಪಾಧ್ಯಾಯ, ಉಡುಪಿ.

ನಾನು ಇಂಟರ್ಮೀಡಿಯಟ್ ವಿದ್ಯಾರ್ಥಿಯಾಗಿದ್ದಾಗ ಪಠ್ಯಪುಸ್ತಕವಾಗಿದ್ದ ಕಾಳಿದಾಸನ 'ಕುಮಾರ ಸಂಭವ'ವನ್ನು (ಕನ್ನಡಕ್ಕೆ ಎಸ್.ವಿ. ಪರಮೇಶ್ವರ ಭಟ್ಟರು) ಓದಿಹರ್ಷಿಸುತ್ತಿದ್ದೆವು.

ಜಿ. ಕೃಷ್ಣಪ್ಪನವರು ಇದೀಗ ಗದ್ಯರೂಪದಲ್ಲಿ ನೀಡಿರುವ 'ಗಿರಿಜಾಕಲ್ಯಾಣ' ಅದ್ಭುತ ರೀತಿಯಲ್ಲಿ ಮೂಡಿಬಂತು. ಗಿರಿಜೆಯ ಚೆಲುವಿನಂತೆಯೇ ಆಕೆಯ ಶಿವನ ಮೇಲಿನ ಪ್ರೀತಿ ಮನಸೂರೆಗೊಂಡಿತು. ಶಿವನನ್ನು 'ಕನ್ನಡಿಗ' ನನ್ನಾಗಿ ಕಂಡ ಕವಿಯ ಕಲ್ಪನೆ ಅಸಮಾನ. ಈ ಧಾರಾವಾಹಿ ಮುಗಿದು ಹೋಯಿತೆಂಬುದು ನೋವಿನ ವಿಷಯ.

– ಡಾ. ಕೆ.ಕೆ. ಜಯಚಂದ್ರಗುಪ್ತ, ಹಾಸನ.

ಶಿವನ ಕೋಪಾಗ್ನಿಗೆ ಆಹುತಿಯಾದ ಮನ್ಮಥನನ್ನು ವಿಧವಿಧವಾಗಿ ಕರೆಯುತ್ತ ರೋಧಿಸುವ ರತಿಯ ಪ್ರಲಾಪ ಮನಕರಗುವಂತಿತ್ತು. ಶಿಶಿರದ ಚಳಿಯ ವರ್ಣನೆ ವೈಭವವಂತೂ ಮನಸ್ಸನ್ನು ಬೆಚ್ಚಗಾಗಿಸಿತು. ದೇವ ಶಿಲ್ಪಿ ವಿಶ್ವಕರ್ಮನ ವಿವಾಹ ಮಂಟಪದ ವರ್ಣನೆ ರಂಜಿಸಿತು. ವರಶಶಿಕಳೆಗೆ ಸುಧಾ ಕಿರಣವನ್ನು ತೊಡಿಸಿದಂತೆ ಅಲಂಕೃತಗೊಂಡ ಗಿರಿಜೆ; ಇಡೀ ದೇಹ ನವ ಸೌಂದರ್ಯ ನಿಧಿಯಾಗಿ ಕಂಗೊಳಿಸುವಂತೆ ವರನಾಗಿ ಅಲಂಕೃತಗೊಂಡ ಪರಶಿವನ ವರ್ಣನೆಯಂತೂ ಉತ್ತುಂಗ. ದೃಶ್ಯಗಳು ನಮ್ಮ ಕಣ್ಣಮುಂದೆಯೆ ನಡೆಯುತ್ತಿವೆಯೇನೊ ಎಂಬಷ್ಟು ನೈಜವಾಗಿ ಚಿತ್ರಿಸಿದ, ಕವಿಯ ಸಾಮರ್ಥ್ಯಕ್ಕೆ ಕಲಾ ಪ್ರೌಢಿಮೆಗೆ ತಲೆಬಾಗಿ ವಂದಿಸಬೇಕು. ಇಲ್ಲಿನ ವರ್ಣನೆಗಳು ವರ್ಣನಾತೀತ! ಇಂತಹ ಉತ್ಕೃಷ್ಟ ಕೃತಿಯನ್ನು ಓದುಗರಿಗೆ ಪರಿಚಯಿಸಿದ 'ಸುಧಾ' ಪತ್ರಿಕೆಗೆ ಧನ್ಯವಾದಗಳು ಅನಂತ !

– ಶೀಲಾ ಸತ್ಯೇಂದ್ರಸ್ವಾಮಿ, ಹರವೆಮಠ.

ಎಂಟು ಕಂತುಗಳಲ್ಲಿ ಪ್ರಕಟವಾದ 'ಗಿರಿಜಾಕಲ್ಯಾಣ' ಕಣ್ಣುಗಳನ್ನು ಮನವನ್ನು ತಣಿಸಿತು. ಓದುಗರನ್ನು ಬೇರೊಂದು ಲೋಕಕ್ಕೆ ಕರೆದೊಯ್ದ ಕಲಾವಿದ ಜಿ.ಕೆ. ಶಿವಣ್ಣ ಅವರ ಚಿತ್ರಗಳಂತೂ ಮನಮೋಹಕ.

– ಡಾ. ಎಚ್. ಗಿರಿಜಮ್ಮ, ದಾವಣಗೆರೆ. ವಸುಂಧರಾಸತ್ಯ, ಕೆ.ಎಸ್. ಸುರಭಿ, ದೊಡ್ಡಬಳ್ಳಾಪುರ. ರಾಜಶೇಖರಗೌಡ, ಕೊಟ್ಟೂರು.

ಹರಿಹರ ಸರಳರಗಳೆ ರಚಿಸಿದ ಕವಿ ಎಂದೇ ಹೆಸರಾಗಿದ್ದರು. ಹಠಕ್ಕೆ ಬಿದ್ದು 'ಗಿರಿಜಾಕಲ್ಯಾಣ' ಚಂಪೂಕಾವ್ಯ ರಚಿಸಿ ಯಶಸ್ವಿಯಾದರು. ಇದೊಂದು ಸೊಗಸಾದ ಕಾವ್ಯ, ಕುವೆಂಪು ಸಹ ಹಠಕ್ಕೆ ಬಿದ್ದವರಂತೆ ಸಂಸ್ಕೃತದ ಮೇಲೆ ಪ್ರಭುತ್ವ ಸ್ಥಾಪಿಸಿಕೊಂಡರು.

– ಎಸ್.ಎಸ್. ರಮೇಶ್, ಮೈಸೂರು. ಕೊಹಿಮ, ಬಸರಕೋಡು.

ಲೇಖಕರ ಕೃತಿಗಳು

೧. ಹಾಡುಹಕ್ಕಿ ಅಂಬಿಕಾತನಯದತ್ತ (೧೯೯೫)
ಮೂರನೆ ಆವೃತ್ತಿ ೨೦೧೨

೨. ಡಿ.ಆರ್. ಬೇಂದ್ರೆ (೧೯೯೭)
ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಆಂಗ್ಲಕೃತಿ

೩. ನಾಕುತಂತಿ – ಒಂದು ಟಿಪ್ಪಣಿ (೨೦೦೦)
ಎರಡನೆ ಆವೃತ್ತಿ ೨೦೧೦

೪. ರಸ್ತೆ ನಿಯಮಗಳು (೨೦೦೦)
ಮೈಸೂರು ವಿಶ್ವವಿದ್ಯಾನಿಲಯವು ಪ್ರಕಟಿಸಿರುವ ಕೃತಿ
ಮೂರನೆ ಆವೃತ್ತಿ ೨೦೧೧


೫. ಹೂತsದ ಹುಣಸಿ (೨೦೦೦)
(ದ.ರಾ. ಬೇಂದ್ರೆ ಕಾವ್ಯ ವಿಮರ್ಶೆ)
ಎರಡನೆ ಆವೃತ್ತಿ ೨೦೧೧

೬. ಬೇಂದ್ರೆಯವರ ಸಾಹಿತ್ಯದಲ್ಲಿ ಸ್ತ್ರೀ – ಒಂದು ಅಧ್ಯಯನ (೨೦೦೧)
(ಪಿಎಚ್.ಡಿ., ಮಹಾಪ್ರಬಂಧ)
ಎರಡನೆ ಆವೃತ್ತಿ ೨೦೧೨

೭. ಬರೆಹದಲ್ಲಿ ಬೇಂದ್ರೆಯವರ ಬದುಕು (೨೦೦೮)
ದ.ರಾ. ಬೇಂದ್ರೆ ರಾಷ್ಟ್ರೀಯ ಟ್ರಸ್ಟ್, ಧಾರವಾಡ ಪ್ರಕಟಿಸಿರುವ ಕೃತಿ

೮. ಅಂತರಂಗದತ್ತ ನಯನ (೨೦೧೦)

೯. ಮಹಾಕವಿ ಲಕ್ಷ್ಮೀಶನ ವಚನ ಜೈಮಿನಿ ಭಾರತ (೨೦೧೨)



ಹಿಮಗಿರಿಯ ವರ್ಣನೆಯೊಂದಿಗೆ ಆರಂಭಗೊಳ್ಳುವ 'ಗಿರಿಜಾ ಕಲ್ಯಾಣ' ಚಂಪೂಕಾವ್ಯವನ್ನು ಓದಲು ಕಷ್ಟವೆನ್ನುವವರಿಗೆ ಡಾ. ಜಿ. ಕೃಷ್ಣಪ್ಪನವರು ಸರಳಗನ್ನಡದಲ್ಲಿ ನೀಡಿ ಅನುಕೂಲ ಮಾಡಿಕೊಟ್ಟಿದ್ದಾರೆ. ಕಾವ್ಯದ ಕತೆಯೇ ಆಹ್ಲಾದಕರವಾದುದು. ಮೂಲದ ಕಠಿಣ ಶಬ್ದಗಳಿಗೆ ಅರ್ಥ ನೀಡುವ ಪ್ರಯತ್ನ ಶ್ಲಾಘನೀಯ.

ಸಾಂಸ್ಥಿಕ ನೆಲೆಯಲ್ಲಿ ಹಳಗನ್ನಡ ಕಾವ್ಯಗಳ ಗದ್ಯಾನುವಾದಗಳು ನಡೆಯುತ್ತಿರುವಂತೆಯೇ ಬಹು ಮುಖ್ಯವೆನಿಸುವ ಕಾವ್ಯಗಳ ಗದ್ಯಾನುವಾದಗಳು ವ್ಯಕ್ತಿ ನೆಲೆಯಲ್ಲೂ ಹೊರಬಂದಿರುವುದು ಗಮನಾರ್ಹ ಸಂಗತಿ. ಕೃಷ್ಣಪ್ಪ ಈ ಸಾಲಿಗೆ ಸೇರುವ ಹಿರಿಯರು. ಬೇಂದ್ರೆಯವರನ್ನು ದಿಕ್ಕು ದಿಕ್ಕುಗಳಿಗೆ ಪರಿಚಯಿಸಿದಂತೆ ಪ್ರಾಚೀನ ಕವಿಗಳನ್ನು ಅವರ ಕಾವ್ಯಗಳನ್ನು ನಾಡವರಿಗೆ ತಲುಪಿಸುವ ಕಾಯಕದಲ್ಲಿ ಹಿರಿಯರಾದ ಕೃಷ್ಣಪ್ಪ ಅವರಿಗೆ ಅತ್ಯಂತ ಯಶಸ್ಸು ದೊರಕಲೆಂದು ಆಶಿಸುವೆ.

ಡಾ. ಜಿ.ಆರ್. ತಿಪ್ಪೇಸ್ವಾಮಿ
ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು – 6

ಕಾಮಧೇನು
ಪುಸ್ತಕ ಭವನ
5/1, ನಾಗಪ್ಪ ರಸ್ತೆ, ಶೇಷಾದ್ರಿಪುರ, ಬೆಂಗಳೂರು–20

₹ 90/-